ಕರ್ನಾಟಕ ಸಾಹಿತ್ಯ ಅಕಾಡೆಮಿ

ಬೆಂಗಳೂರು



ಬಹುಮಾನಿತ ಕೃತಿಗಳು
2013

ಸಂಪಾದಕರು

ಎಸ್.ಕೆ. ಕೊಪ್ಪಾ

ಬಹುಮಾನಿತ ಕೃತಿಗಳು

೨೦೧೩

ಸಂಪಾದಕರು

ಡಾ. ಎಸ್. ಕೆ. ಕೊಪ್ಪಾ

ಕರ್ನಾಟಕ ಸಾಹಿತ್ಯ ಅಕಾಡೆಮಿ

ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು - ೫೬೦ ೦೦೨

ದೂರವಾಣಿ: ೦೮೦-೨೨೨೧೧೭೩೦ / ೨೨೧೦೬೪೬೦

BAHUMANITA KRITIGALU - 2013 : A collection of valuation notes on the Karnataka Sahitya Academy - Prize winning books of 2013. Edited by: **Dr. S. K. Koppa** and Published by: **C.H. Bhagya, Registrar, Karnataka Sahitya Academy,** Kannada Bhavana, 2nd Floor, J.C. Road, Bengaluru - 560 002.
Ph: 080-22211730 / 22106460.
www.karnatakasahithyaacademy.org
Email: sahithya.academy@gmail.com

First Edition : 2016
Pages : 68
Price : 25.00
Copies : 500

ಮೊದಲ ಮುದ್ರಣ : ೨೦೧೬
ಪುಟಗಳು : ೬೮
ಬೆಲೆ : ರೂ. ೨೫.೦೦
ಪ್ರತಿಗಳು : ೫೦೦

ಪ್ರಧಾನ ಸಂಪಾದಕರು :
ಪ್ರೊ. ಮಾಲತಿ ಪಟ್ಟಣಶೆಟ್ಟಿ
ಅಧ್ಯಕ್ಷರು
ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

ಪ್ರಕಾಶಕರು :
ಸಿ. ಎಚ್. ಭಾಗ್ಯ
ರಿಜಿಸ್ಟ್ರಾರ್, ಕರ್ನಾಟಕ ಸಾಹಿತ್ಯ ಅಕಾಡೆಮಿ
ಕನ್ನಡ ಭವನ, ಜೆ. ಸಿ. ರಸ್ತೆ , ಬೆಂಗಳೂರು - ೫೬೦ ೦೦೨

ಮುದ್ರಕರು :
ರಶ್ಮಿ ಪ್ರಿಂಟರ್ಸ್
ಕಲಾಸಿಪಾಳ್ಯ, ಬೆಂಗಳೂರು-2
9901916581

ಅಧ್ಯಕ್ಷರ ನುಡಿ

ಪ್ರತಿವರ್ಷದಂತೆ ಈ ವರ್ಷವೂ ವಾರ್ಷಿಕ ಗೌರವ ಪ್ರಶಸ್ತಿ ಹಾಗೂ ಪುಸ್ತಕ ಬಹುಮಾನ ಪ್ರದಾನ ಸಮಾರಂಭದ ಸಂದರ್ಭವು ನಮಗೆ ಹರ್ಷೋಲ್ಲಾಸವನ್ನುಂಟು ಮಾಡಿದೆ. ಎಳೆಯ ಬರಹಗಾರರಲ್ಲಿ ಸಾಹಿತ್ಯದ ಅಭಿರುಚಿ ಹುಟ್ಟಿಸಲು 'ಅಂಕುರ' ಕಾರ್ಯಕ್ರಮ, ತರುಣ ಬರಹಗಾರರ ಮಾರ್ಗದರ್ಶನಕ್ಕಾಗಿ ಕಮ್ಮಟಗಳು, ಹೊಸಬರಹಗಾರರನ್ನು ಪ್ರೋತ್ಸಾಹಿಸಲು 'ಹೊಸ ಓದು' ಮತ್ತು ವಿಚಾರ ಸಂಕಿರಣಗಳು, ಸಂವಾದ ಕಾರ್ಯಕ್ರಮಗಳು ಹಾಗೂ ಹಿರಿಯ ಸಾಹಿತಿಗಳ ಸಾಹಿತ್ಯದವಲೋಕನಕ್ಕಾಗಿ ವಿವಿಧ ಕಾರ್ಯಕ್ರಮಗಳನ್ನು ಮಾಡುತ್ತಾ ಬಂದಿದ್ದೇವೆ. ಒಟ್ಟಾರೆ, ಎಲ್ಲ ವಯಸ್ಸಿನ ಮತ್ತು ಕರ್ನಾಟಕದ ಎಲ್ಲ ಪ್ರದೇಶಗಳ ಸಾಹಿತ್ಯಾಸಕ್ತರನ್ನು ಮತ್ತು ಬರಹಗಾರರನ್ನು ಪ್ರೋತ್ಸಾಹಿಸುವ ಸೇವೆಯಲ್ಲಿ ನಾವು ಮನಸಾರೆ ತೊಡಗಿಕೊಂಡಿದ್ದೇವೆ.

ವಾರ್ಷಿಕ ಪುಸ್ತಕ ಬಹುಮಾನ ಕಾರ್ಯಕ್ರಮದ ಹಿಂದೆ ಒಂದು ಸುದೀರ್ಘವಾದ ಪರಿಶ್ರಮದ ಮತ್ತು ಜವಾಬುದಾರಿಯ ಪ್ರಕ್ರಿಯೆ ಇರುತ್ತದೆ. ಒಂದು ವರ್ಷದ ಅವಧಿಯಲ್ಲಿ ಪ್ರಕಟವಾದ ಪುಸ್ತಕಗಳನ್ನು ಆಹ್ವಾನಿಸಿ ಲೇಖಕರಿಂದಲೋ, ಪ್ರಕಾಶಕರಿಂದಲೋ ಪಡೆಯುವುದಲ್ಲದೆ ಮೌಲಿಕ ಪುಸ್ತಕಗಳು ಕಣ್ಣುತಪ್ಪಿ ಬಿಟ್ಟು ಹೋಗದಂತೆ ನಾಡಿನ ಹಿರಿಯ ಲೇಖಕರಿಂದ ಮಾಹಿತಿ ಪಡೆದು ಆ ಎಲ್ಲ ಪುಸ್ತಕ ಖರೀದಿಸಿ ಒಂದು ಬೃಹತ್ ಪುಸ್ತಕ ಸಂಗ್ರಹಣೆ ಮಾಡುವುದೂ ಕೂಡ ಒಂದು ಅತ್ಯಂತ ಮಹತ್ವದ ಹಂತ. ಆನಂತರ ಅಕಾಡೆಮಿಯ ಸ್ಥಾಯಿ ಸಮಿತಿಯ ಸದಸ್ಯರೊಂದಿಗೆ ಪುಸ್ತಕಗಳನ್ನು ಗಮನಿಸಿ, ವಿವೇಚಿಸಿ, ಚರ್ಚಿಸುತ್ತ ಮೂರು ಸುತ್ತಿನ ಆಯ್ಕೆಯ ಪ್ರಕ್ರಿಯೆಯು ಬಹಳ ಜಾಗರೂಕತೆಯಿಂದ ನಡೆಯುತ್ತದೆ. ಆಯ್ಕೆಯಾದ ಪುಸ್ತಕಗಳನ್ನು ಮೌಲ್ಯಮಾಪನಕ್ಕೆ ನಾಡಿನ ಪ್ರಸಿದ್ಧ ಲೇಖಕರಿಗೆ, ವಿಮರ್ಶಕರಿಗೆ ರವಾನಿಸಲಾಗುತ್ತದೆ. ನಿಗದಿತ ಕಾಲಾವಧಿಯ ನಂತರ ಸಾಹಿತ್ಯದ ಹದಿನೆಂಟು ಪ್ರಕಾರಗಳಲ್ಲಿ ಅವರಿಂದ ಪಡೆದ ಮೌಲ್ಯಮಾಪನದ ಅಂಕಪಟ್ಟಿಗಳನ್ನು ಮತ್ತು ಪುಸ್ತಕ ವಿಮರ್ಶೆಯ ಮಾಹಿತಿಗಳನ್ನು ಸಂಗ್ರಹಿಸಲಾಗುತ್ತದೆ. ವಾರ್ಷಿಕ ಸರ್ವಸದಸ್ಯರ ಸಭೆಯಲ್ಲಿ ಈ ಎಲ್ಲ ವಿಷಯಗಳನ್ನಿಟ್ಟು ಚರ್ಚಿಸಿ ವರ್ಷದ ಪುಸ್ತಕ ಬಹುಮಾನಕ್ಕೆ ಆಯ್ಕೆಯಾದ ಪುಸ್ತಕಗಳ ಅಂತಿಮ ಪಟ್ಟಿಯನ್ನು ಸಾರ್ವಜನಿಕವಾಗಿ ಘೋಷಿಸಲಾಗುತ್ತದೆ. ಈ ಇಡಿ ಪ್ರಕ್ರಿಯೆಯು ಸಾಹಿತ್ಯ ಅಕಾಡೆಮಿಯ ನ್ಯಾಯ, ನಿಷ್ಠೆ ಮತ್ತು ನೈಪುಣ್ಯಕ್ಕೆ ಸಾಕ್ಷಿಯಾಗಿ ನಿಲ್ಲುತ್ತದೆ.

೨೦೧೩ರ ಪುಸ್ತಕ ಬಹುಮಾನ ವಿಜೇತರ ಪಟ್ಟಿಯನ್ನು ಗಮನಿಸಿದಾಗ ಅವು ಅರ್ಹಬರಹಗಾರರ ಅರ್ಹ ಕೃತಿಗಳೆಂದು ತಿಳಿದು ಸಂತಸಪಟ್ಟಿದ್ದೇನೆ. ಇದರಲ್ಲಿ

ಶ್ರೀ ಲಕ್ಷ್ಮೀಶ ತೋಳ್ಪಾಡಿ , ಡಾ. ಬಸವರಾಜ ಕಲ್ಗುಡಿ, ಡಾ. ಆರ್. ಲಕ್ಷ್ಮೀನಾರಾಯಣ, ಶ್ರೀ ಪ್ರಭಾಕರ ಆಚಾರ್ಯ ಮತ್ತು ಶ್ರೀ ಎಂ.ಡಿ. ಗೋಗೇರಿಯವರಂಥ ಹಿರಿಯ ಬರಹಗಾರರಿಗೆ ಪುಸ್ತಕ ಬಹುಮಾನ ಬಂದದ್ದು ಬಹಳ ಸಂತೋಷ ಉಂಟು ಮಾಡಿದ್ದರೆ, ಅತ್ಯಂತ ಕಿರಿವಯಸ್ಸಿನ ಕು. ಶ್ರುತಿ ಬಿ.ಎಸ್. ಅವರಿಗೆ ಲೇಖಕರ ಮೊದಲ ಸ್ವತಂತ್ರ ಕೃತಿಗಾಗಿ ಬಹುಮಾನ ಬಂದದ್ದೂ ಹೆಮ್ಮೆಯ ವಿಷಯವಾಗಿದೆ.

೨೦೧೩ರ ಪುಸ್ತಕ ಬಹುಮಾನಿತರಿಗೆ ಸಾಹಿತ್ಯ ಅಕಾಡೆಮಿ ತುಂಬು ಹೃದಯದ ಅಭಿನಂದನೆಗಳನ್ನು ತಿಳಿಸುತ್ತದೆ. ಪುಸ್ತಕ ಆಯ್ಕೆಯ ಪ್ರಕ್ರಿಯೆಯಲ್ಲಿ ಸಹಕರಿಸಿದ ವಿಮರ್ಶಕರನ್ನು, ಸ್ಥಾಯೀ ಸಮಿತಿಯ ಸದಸ್ಯರನ್ನು ಮತ್ತು ಈ ಇಡೀ ಕೆಲಸದಲ್ಲಿ ನಮ್ಮ ಬೆನ್ನಿಗಿದ್ದು, ಅತ್ಯಂತ ಪರಿಶ್ರಮ, ಸೇವೆ ಸಲ್ಲಿಸಿದ ಅಕಾಡೆಮಿ ರಿಜಿಸ್ಟ್ರಾರ್ ಶ್ರೀಮತಿ ಸಿ.ಎಚ್.ಭಾಗ್ಯ ಮತ್ತು ಕಚೇರಿಯ ಸಿಬ್ಬಂದಿಯವರನ್ನು ಸಾಹಿತ್ಯ ಅಕಾಡೆಮಿ ಮನಃಪೂರ್ವಕವಾಗಿ ನೆನೆಯುತ್ತದೆ.

ಗೌರವ ಪ್ರಶಸ್ತಿ ಪುರಸ್ಕೃತರ ಕೃತಿಗಳನ್ನೂ, ಪುಸ್ತಕ ಬಹುಮಾನ ಪಡೆದ ಗ್ರಂಥಗಳನ್ನೂ ಕನ್ನಡ ಬಳಗವು ಕೈಗೆತ್ತಿಕೊಂಡು ಓದಬೇಕು. ಆ ಮೂಲಕ ಕನ್ನಡ ಸಾಹಿತ್ಯದ ಪ್ರಗತಿಯು ಯಾವ ರೀತಿಯದು ಎಂದು ಗಮನಿಸಲು ಸಾಧ್ಯವಾಗಬೇಕೆಂಬುದು ನಮ್ಮ ಆಶಯ. ಮತ್ತೊಮ್ಮೆ ಕನ್ನಡದ ಸಾಹಿತ್ಯ ಪ್ರಿಯರನ್ನು ನಮ್ಮ ವಾರ್ಷಿಕ ಪ್ರಶಸ್ತಿ ಪ್ರದಾನ ಸಮಾರಂಭಕ್ಕೆ ಆಗಮಿಸಬೇಕು ಎಂದು ಆಹ್ವಾನಿಸುತ್ತಾ ತುಂಬುಹೃದಯದ ಶುಭಾಶಯಗಳನ್ನು ತಿಳಿಸಬಯಸುತ್ತೇನೆ.

ಏಪ್ರಿಲ್ ೨೦೧೬ **ಮಾಲತಿ ಪಟ್ಟಣಶೆಟ್ಟಿ**

ಸಂಪಾದಕರ ಮಾತು

ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ಈಗ ಸುವರ್ಣ ಸಂಭ್ರಮ. ಕಳೆದ ಐದು ದಶಕಗಳಲ್ಲಿ ಅದು ತನ್ನ ಪರಿಮಿತಿಯಲ್ಲಿ ಹಲವಾರು ಸಾಹಿತ್ಯ ಸಂಬಂಧಿ ಕಾರ್ಯಚಟುವಟಿಕೆಗಳನ್ನು ವಿಸ್ತರಿಸುತ್ತ ಬಂದಿದೆ. ಕಳೆದ ಎರಡು ವರ್ಷಗಳಲ್ಲಿ ಅಕಾಡೆಮಿ ತನ್ನ ಸಾಹಿತ್ಯ ಚಟವಟಿಕೆಗಳನ್ನು ಜಿಲ್ಲೆ, ತಾಲೂಕು ಮಟ್ಟದಿಂದ ಹೋಬಳಿ ವರೆಗೂ ಹರವಿಕೊಂಡಿದೆ. ಇದು ಅಕಾಡೆಮಿಯ ಧೋರಣೆ ಮತ್ತು ಉದ್ದೇಶವನ್ನು ಸ್ಪಷ್ಟಪಡಿಸುತ್ತದೆ. ಇಂಥ ಅದರ ಹತ್ತು-ಹಲವು ಚಟುವಟಿಕೆಗಳಲ್ಲಿ ಪ್ರತಿವರ್ಷ ನೀಡುತ್ತ ಬಂದ ಗೌರವ ಪ್ರಶಸ್ತಿ ಮತ್ತು ಪುಸ್ತಕ ಬಹುಮಾನಗಳೂ ಸೇರುತ್ತವೆ.

ಆಯಾ ವರ್ಷ ಪ್ರಕಟಗೊಂಡ ವಿವಿಧ ಸಾಹಿತ್ಯ ಪ್ರಕಾರಗಳ ಕೃತಿಗಳನ್ನು ಪುಸ್ತಕ ಬಹುಮಾನಕ್ಕೆ ಆಹ್ವಾನಿಸಲಾಗುತ್ತದೆ. ಇದನ್ನು ಹೊರತುಪಡಿಸಿ ಮೌಲಿಕ ಗ್ರಂಥಗಳು ಬಿಟ್ಟು ಹೋಗಬಾರದೆಂಬ ಕಳಕಳಿ ಕಾರಣವಾಗಿ ನಾಡಿನ ಹಿರಿಯ ಲೇಖಕರು, ಪತ್ರಿಕೆ ಮತ್ತು ನಿಯತಕಾಲಿಕೆಗಳಿಂದ ಮಾಹಿತಿ ಪಡೆದು ಪುಸ್ತಕಗಳನ್ನು ಖರೀದಿಸಲಾಗುತ್ತದೆ. ಹೀಗೆ ಸಂಗ್ರಹಗೊಂಡ ಪುಸ್ತಕಗಳನ್ನು ಆಯಾ ಪ್ರಕಾರಗಳಲ್ಲಿ ವಿಂಗಡಿಸಿ ಸ್ಥಾಯಿ ಸಮಿತಿಯ ಮುಂದಿರಿಸಲಾಗುತ್ತದೆ. ಸ್ಥಾಯಿ ಸಮಿತಿಯ ನಾಲ್ವರು ಸದಸ್ಯರು ಆ ಎಲ್ಲ ಗ್ರಂಥಗಳನ್ನು ಪರಿಶೀಲಿಸಿ ಆಯಾ ಪ್ರಕಾರಗಳ ಮೌಲಿಕ ಪುಸ್ತಕಗಳನ್ನು ಹೆಕ್ಕಿ ತೆಗೆಯುತ್ತಾರೆ. ನಂತರ ಈ ಗ್ರಂಥಗಳನ್ನು ಆಯಾ ಕ್ಷೇತ್ರದ ಮೂರು ಮೂರು ಜನ ಪರಿಣತರಿಗೆ ಮೌಲ್ಯಮಾಪನಕ್ಕಾಗಿ ಕಳುಹಿಸಿಕೊಡಲಾಗುತ್ತದೆ. ಈ ವಿಷಯ ಸ್ಥಾಯಿ ಸಮಿತಿಯನ್ನೊಳಗೊಂಡು ಯಾವ ಸದಸ್ಯರಿಗೂ ತಿಳಿಯದಂತೆ ಗೌಪ್ಯತೆ, ಪಾರದರ್ಶಕತೆ ಕಾಪಾಡಲಾಗುತ್ತದೆ.

ಕೊನೆಗೆ ಮೌಲ್ಯಮಾಪನದ ಅಂಕಗಳ ಆಧಾರದ ಮೇಲೆ ಆಯಾ ಪ್ರಕಾರದ ಅತ್ಯುತ್ತಮ ಪುಸ್ತಕಗಳಿಗೆ ಪುಸ್ತಕ ಬಹುಮಾನವನ್ನು ಸರ್ವಸದಸ್ಯರ ಸಭೆಯಲ್ಲಿ ಘೋಷಿಸಲಾಗುತ್ತದೆ. ಈ ಇಡೀ ಪ್ರಕ್ರಿಯೆ ಅಕಾಡೆಮಿಯ ಘನತೆ, ಗೌರವ, ಪಾರದರ್ಶಕತೆಯನ್ನು ಎತ್ತಿ ಹಿಡಿಯುವಂತದ್ದು. ಅಕಾಡೆಮಿಯ ಈ ಪುಸ್ತಕ ಬಹುಮಾನ ಯೋಜನೆ ಪ್ರತಿಷ್ಠಿತ ಯೋಜನೆಯಾಗಿದ್ದು; ಅದರದೇ ಆದ ಹಿರಿಮೆ ಹಾಗೂ ಗೌರವವನ್ನು ಪಡೆದಿದೆ. ಅಷ್ಟೇ ಅಲ್ಲ ಕನ್ನಡ ಸಾಹಿತ್ಯ ವಲಯದಲ್ಲಿ ಒಂದು ಹೊಸ

ಸಂಚಲನವನ್ನುಂಟುಮಾಡಿದೆ. ೨೦೧೩ನೇ ವರ್ಷದಲ್ಲಿ ದತ್ತಿನಿಧಿ ಬಹುಮಾನಗಳನ್ನು ಒಳಗೊಂಡಂತೆ ೨೧ ಜನ ಲೇಖಕರಿಗೆ ಪುಸ್ತಕ ಬಹುಮಾನ ನೀಡಲಾಗುತ್ತಿದೆ. ಗ್ರಂಥ ಸಂಪಾದನೆ ವಿಭಾಗದಲ್ಲಿ ಬಹುಮಾನಕ್ಕೆ ಅರ್ಹ ಪುಸ್ತಕಗಳಿಲ್ಲದಿರುವುದು ಆ ಕ್ಷೇತ್ರದ ಗ್ರಂಥಗಳ ಕೊರತೆಯನ್ನು ಸೂಚಿಸುತ್ತದೆ.


ಆಕಾಡೆಮಿಯ ಪುಸ್ತಕ ಬಹುಮಾನ ಯೋಜನೆಗೆ ಸಂಬಂಧಿಸಿದಂತೆ ೧೯೯೮ರಲ್ಲಿ ಅಕಾಡೆಮಿಯ ಉಪನಿಬಂಧನೆಗಳಿಗೆ ಕೆಲವು ಮಹತ್ವದ ತಿದ್ದುಪಡಿಗಳನ್ನು ಮಾಡಲಾಯಿತು. ಪುಸ್ತಕ ಬಹುಮಾನ ಪಡೆದ ಕೃತಿಗಳಿಗೆ ವಿದ್ವಾಂಸರು, ವಿಮರ್ಶಕರು ನೀಡಿದ ಮೌಲ್ಯಮಾಪನಗಳು ಅಕಾಡೆಮಿಯ ಫೈಲುಗಳಲ್ಲಿಯೇ ಉಳಿದು ಹೋಗದಂತೆ ಅವುಗಳನ್ನು ಪುಸ್ತಕ ರೂಪದಲ್ಲಿ ಸಂಗ್ರಹಿಸಿ, ಮುದ್ರಿಸಿ ಈ ಯೋಜನೆಯ ಫಲಿತವನ್ನು ಪಾರದರ್ಶಕಗೊಳಿಸುವುದು. ಸಹ ಒಂದು ಮಹತ್ವದ ಕಾರ್ಯ. ಹೀಗಾಗಿ ಅಕಾಡೆಮಿಯು ಪ್ರತಿವರ್ಷದ ಬಹುಮಾನಿತ ಕೃತಿಗಳ ಕೈಪಿಡಿಯನ್ನು ಹೊರತರುತ್ತಿದೆ. ಸದ್ಯ ೨೦೧೩ನೇ ವರ್ಷದ ಬಹುಮಾನಿತ ಕೃತಿಗಳ ಕೈಪಿಡಿ ಹೊರಬರುತ್ತಿದೆ. ಬಹುಮಾನಕ್ಕೆ ಅರ್ಹರಾದ ಎಲ್ಲ ಲೇಖಕರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಈ ಸಂದರ್ಭದಲ್ಲಿ ಅಭಿನಂದನೆ ಸಲ್ಲಿಸುತ್ತದೆ. ಜೊತೆಗೆ ಪುಸ್ತಕಗಳನ್ನು ಅಮೂಲಾಗ್ರವಾಗಿ ಪರಿಶೀಲಿಸಿ ತಮ್ಮ ಮೌಲಿಕ ಅಭಿಪ್ರಾಯಗಳನ್ನು ಬರೆದು ತಿಳಿಸಿದ ಎಲ್ಲ ವಿದ್ವಾಂಸ ವಿಮರ್ಶಕರ ಸಹಕಾರವನ್ನೂ ನೆನೆಯುತ್ತದೆ.

– ಡಾ. ಎಸ್.ಕೆ. ಕೊಪ್ಪಾ

ಸಂಪಾದಕರು

ಬಹುಮಾನಿತ ಕೃತಿಗಳು
೨೦೧೩

ಕಾವ್ಯ



ಎಲ್ಲರ ಬೆರಳಲ್ಲೂ ಅಂಟಿಕೊಂಡ ದು:ಖವೇ

ಸುಬ್ಬು ಹೊಲೆಯಾರ್

ಪ್ರಕಾಶಕರು: ಸಂಸ್ಕೃತಿ ಪ್ರಕಾಶನ ಬಳ್ಳಾರಿ
ಪ್ರಥಮ ಮುದ್ರಣ : 2013
ಪುಟಗಳು : 114, ಬೆಲೆ ರೂ. 100/-

ಎದೆಯನ್ನೇ ಸೀಳಿಕೊಂಡು ಬಂದಂತೆ ಕಾಣುವ ಈ ಕವಿತೆಗಳಲ್ಲಿ ಪ್ರಾಮಾಣಿಕತೆ ನಿಚ್ಚಳವಾಗಿ ಕಾಣುವ ಕಾರಣದಿಂದಲೇ ಇವು ನಮ್ಮನ್ನು ಓದಲು ಪ್ರೇರೇಪಿಸುತ್ತವೆ. ಗಾಢ ಸಂವೇದನೆಯಿಂದ ಮನಸ್ಸನ್ನು ಮುಟ್ಟುತ್ತವೆ. ಏಕ ಕಾಲಕ್ಕೆ ನಮ್ಮ ಭಾವಲೋಕವನ್ನು ಅರಿವಿನ ಲೋಕವನ್ನು ಸ್ಪರ್ಶಿಸಿ ಜಾಗೃತಗೊಳಿಸುತ್ತವೆ. ಅಸ್ಪೃಶ್ಯತೆಯ ನೋವು, ದು:ಖ, ಬದುಕಿನ ಸಂಭ್ರಮ, ಸಂಕಟಗಳನ್ನು ನಿರುದ್ವಿಗ್ನವಾಗಿ ಅಷ್ಟೇ ತೀವ್ರತರವಾಗಿ ಹೇಳುವ ಕ್ರಮ ಇಲ್ಲಿನ ಕವಿತೆಗಳ ಮುಖ್ಯ ಗುಣ. ಈ ಕವಿತೆಗಳಲ್ಲಿ ಆವೇಶವಿಲ್ಲ, ಆಕ್ರೋಶವಿಲ್ಲ, ಅಸಹನೆಯಿಲ್ಲ. ಬದಲಾಗಿ ಬುದ್ಧ, ಬಸವ, ಅಂಬೇಡ್ಕರ್ ಮೊದಲಾದವರ ವಿಚಾರಗಳ ಬೆಳಕಿನಲ್ಲಿ ಮಾನವೀಯ ನೆಲೆಯನ್ನು, ಪ್ರೀತಿಯ ಸೆಲೆಯನ್ನು ಅರಸುವ ವಿನಯವಿದೆ.

– ಸಂತೋಷ ಚೊಕ್ಕಾಡಿ

ದಲಿತ ಕಾವ್ಯದಲ್ಲಿ ಎರಡನೇ ತಲೆಮಾರಿನ ಮುಂಚೂಣಿಯ ಹೆಸರು ಸುಬ್ಬು ಹೊಲೆಯಾರ್. ಸದಾ ಹೊಟ್ಟೆಯಲ್ಲಿ ಕೆಂಡ ಕಟ್ಟಿಕೊಂಡು ಚಿಂತಿಸುತ್ತಾರೆ, ಬರೆಯುತ್ತಾರೆ. ದಲಿತ ಲೋಕದ ಅದರಲ್ಲೂ ಗ್ರಾಮೀಣ ಭಾಗದ ನೋವು, ಹಸಿವು, ಅವಮಾನಗಳನ್ನು ಕರುಳು ಕಲಕುವಂತೆ ಹೆಕ್ಕಿ ಬರೆಯುತ್ತಾರೆ. ರೂಪಕಗಳನ್ನು

ಬಳಸುವಾಗಲೂ ಅಷ್ಟೆ ಅಪರೂಪದ ಪ್ರತಿಮೆಗಳನ್ನು ಸಂಕೇತಗಳನ್ನು ಎತ್ತಿಕೊಳ್ಳುತ್ತಾರೆ. ಕೆಲವೊಮ್ಮೆ ಕವಿತೆಯ ಪ್ರಧಾನಧಾರೆ ಒಂದು ತಾರ್ಕಿಕ ಅಂತ್ಯವನ್ನು ಕಾಣುವುದರಲ್ಲಿ ಸೋಲುತ್ತದೆ. ಆದರೂ ಪರಿಣಾಮದಲ್ಲಿ ಕಡಿಮೆಯಾಗುವುದಿಲ್ಲ. ಕೆಲವೊಮ್ಮೆ ವಾಚ್ಯವೆನಿಸಿದರೂ ಢಾಳಾದ ವಾಸ್ತವಗಳನ್ನು ತೆರೆದಿಡುವುದರಿಂದ ಇಷ್ಟವಾಗಿ ಬಿಡುತ್ತವೆ. ಬದುಕನ್ನು ಕಾಡುವ ದು:ಖ ಇಲ್ಲಿ ಬೆರಳಿಗೆ ಮಾತ್ರ ಅಂಟಿಕೊಂಡಿದೆಯೇ? ಇವರ ಕಾವ್ಯ ತೆರೆದುಕೊಳ್ಳುವುದೇ ಇಲ್ಲಿ.

– ಡಾ. ಮೂಡ್ನಾಕೂಡು ಚಿನ್ನಸ್ವಾಮಿ

'ದಲಿತಪ್ರಪಂಚ'ದ ಆಯಾಮಗಳು ಕವಿತೆಗಳಲ್ಲಿ ತೆರೆದುಕೊಳ್ಳುತ್ತವೆ. ಗಾಂಧಿ, ಅಂಬೇಡ್ಕರ, ದಲಿತ ಸಂಘರ್ಷ ಸಮಿತಿ, ದೇಶ, ಭಾಷೆ, ನಗರೀಕರಣ, ರಾಜಕೀಯ, ಸಮಾಜ – – 'ಎಲ್ಲರ ಬೆರಳಲ್ಲೂ ಅಂಟಿಕೊಂಡ ದು:ಖ'ದ ಮಗ್ಗುಲುಗಳನ್ನು ಬಿಡಿಬಿಡಿಸಿ ಬಡಬಗ್ಗರ, ದೀನದಲಿತರ ದು:ಖಕ್ಕೆ ಬಿಕ್ಕುವ ಸಾಲುಗಳಿಲ್ಲಿವೆ. ಇಲ್ಲಿ ಆಡುವ, ಮಾತಾಡುವ, ಕಾಣುವ, ಕಾಣಿಸುವ ಪ್ರಪಂಚವೆಲ್ಲ ದಲಿತ ಸಮುದಾಯದ ಗಂಡಿಗೆ ಸೀಮಿತವಾದದ್ದು. ಇದು ವಸ್ತುವಿನ ಮಿತಿ. ಇದೇ ಭಾಷೆ, ಶೈಲಿ ಹಾಗೂ ನಿರೂಪಣೆಗಳನ್ನು ನಿರ್ದೇಶಿಸಿ ಬಿಟ್ಟಿದೆ ಅನ್ನಿಸುತ್ತದೆ.

– ಮಮತಾ ಜಿ. ಸಾಗರ



ಆತ್ಮವೃತ್ತಾಂತ

ರಜನಿ ನರಹಳ್ಳಿ

ಪ್ರಕಾಶಕರು: ಮನೋಹರ ಗ್ರಂಥಮಾಲಾ ಧಾರವಾಡ
ಪ್ರಥಮ ಮುದ್ರಣ : 2013
ಪುಟಗಳು : 414
ಬೆಲೆ ರೂ. 300/-

'ಆತ್ಮವೃತ್ತಾಂತ' ಒಂದು ವಿಶಿಷ್ಟ ವಸ್ತು ವಿನ್ಯಾಸಗಳ ಕೃತಿ. ಮನುಷ್ಯಲೋಕದ ಒಟ್ಟಿಗೆ ಬೆರೆತು ಬದುಕುವ ಪ್ರೀತಿಯ ಪ್ರಾಣಿಗಳ ಬಂಧುತ್ವವನ್ನು ಅಪಾರ ಮಾನವೀಯ ನೆಲೆಯಲ್ಲಿರಿಸಿ, ಅದಕ್ಕೆ ಮನುಷ್ಯ ಸ್ವಭಾವದ ಗುಣಾವಗುಣಗಳಿರುವುದನ್ನು ಋಜುಗೊಳಿಸುತ್ತಾ ಬಂದಿರುವ ವಿಶಿಷ್ಟ ಕಾದಂಬರಿ. ನಾಯಿ 'ಲಿಯೋ' ಮಾರಣಾಂತಿಕ ಕಾಯಿಲೆಯಿಂದ ಬಳಲಿ ಸಾವು ಬದುಕಿನ ನಡುವೆ ಇರುವಾಗ ಸಾಕಿ ಸಲುಹಿದವರ ಸಂಕಟವನ್ನು ಕಾಣುತ್ತಾ ಅವರ ಮಾತಿಗೆ ವೈದ್ಯರು ಕಾಣುವ ಮತ್ತು ವೈದ್ಯನಿಗೆ ತಮ್ಮ ಕರುಳು ಕಥೆಯ ಬಗ್ಗೆ ಹೇಳುವ ಕೊನೆ ಮಾತನ್ನು ಮರಣ ಮಂಚದಲ್ಲಿ ಮಲಗಿ ಕೇಳಿಸಿಕೊಳ್ಳುವ ದಾರುಣವೂ ಅನಿವಾರ್ಯವೂ ಆದ ಸಂದರ್ಭದ ಚಿತ್ರಣ; ಎಲ್ಲ ಜೀವಲೋಕ ವಾಸ್ತವವನ್ನು ಸುಮ್ಮನೆ ಸವರಿ ಎಚ್ಚರಿಸುತ್ತದೆ. ಬದುಕಿನ ವ್ಯಂಗ್ಯಕ್ಕೊಂದು ವಾಸ್ತವದ ಮುದ್ರೆ ಲಭಿಸುತ್ತದೆ. ಮನುಷ್ಯನ ಆಯುಷ್ಯದ ಕಾಲುಭಾಗದಷ್ಟು ಬದುಕಲಾರದ ಪ್ರಾಣಿ ಜೀವವೊಂದು ನೂರು ವರ್ಷದ ಲೆಕ್ಕಾಚಾರದಲ್ಲಿ ಬದುಕುವ ಮನುಷ್ಯ ಜಾತಿಗೆ ತೋರಿದ ವಿಧೇಯತೆ. ವಿನಮ್ರತೆ, ಮಮತೆ, ಅದು ಹುಟ್ಟಿಸುವ ಕಾರುಣ್ಯ ವಿಶೇಷವೂ ವಿಶಿಷ್ಟವೂ ಆದದ್ದು. ತಾನೇ ಸಾಕಿದ ಕರುಳ ಕುಡಿಯ ಕುರಿತು ಆತ್ಮಕಥೆಯಾಗಿ ಬರೆದಂತಿರುವ ಈ ಕೃತಿ ವಿಶೇಷವಾದದ್ದು, ಕನ್ನಡ ಕಾದಂಬರಿ ಲೋಕಕ್ಕೆ ಉತ್ತಮ ಸೇರ್ಪಡೆ.

– ಡಾ. ಎಸ್. ತುಕಾರಾಮ್


'ಆತ್ಮವೃತ್ತಾಂತ' ಪ್ರಯೋಗದಲ್ಲಿ, ತಂತ್ರದಲ್ಲಿ, ವಸ್ತುವಿನಲ್ಲಿ ಒಂದು ವಿನೂತನ ಕಾದಂಬರಿಯಾಗಿದೆ. ಪರಕಾಯಪ್ರವೇಶ ಮಾಡಿ ತನ್ನ ಅತ್ಯಂತ ಆಪ್ತ ಸಂಗಾತಿಯಾದ 'ಲಿಯೋ' ಎಂಬ ಸಾಕುನಾಯಿಯ ಕಥೆಯನ್ನು ನಾಯಿಯ ಮೂಲಕವೇ ಲೇಖಕಿ ಹೇಳಲು ತೊಡುಗುತ್ತಾರೆ. ಆತ್ಮವೃತ್ತಾಂತದ ಏಳುಬೀಳುಗಳನ್ನು, ಸಾವುನೋವುಗಳನ್ನು, ಆತ್ಮನಿಷ್ಠವಾದ ಪ್ರಥಮ ಪುರುಷದ ಬರವಣಿಗೆಯ ನಿರೂಪಣೆಯಲ್ಲಿ ಕಥೆಯು ಕಟ್ಟಲ್ಪಟ್ಟಿದ್ದರೂ ಆತ್ಮ ನಿಷ್ಠತೆಯನ್ನು ದಾಟಿ ವಸ್ತು ನಿಷ್ಠತೆಯ ಕಡೆಗೆ, ಸಾರ್ವಕಾಲಿಕ ಹಾಗೂ ವಿಶ್ವಾತ್ಮಕತೆಯ ಕಡೆಗೆ ಈ ಕತೆಯು ಜಿಗಿತವನ್ನು ಕಾಣುವುದರ ಮೂಲಕ ತನ್ನ ಹೆಚ್ಚುಗಾರಿಕೆಯನ್ನು ಗಳಿಸಿಕೊಂಡಿದೆ.

ಆತ್ಮಕತೆಯ ಧಾಟಿಯಲ್ಲಿಯೇ ಆರಂಭವಾಗುವ ಈ ಕತೆಯ ಒಂದನೇ ಭಾಗದಲ್ಲಿ ತನ್ನ ಅಸ್ತಿತ್ವ, ಪರಿಸರ, ಮಾನವ ಸಂಬಂಧಗಳನ್ನು ಸ್ಥಾಪಿಸಿಕೊಂಡರೆ; ಎರಡನೇ ಭಾಗದಲ್ಲಿ ಮೊದಲನೆಯ ಭಾಗದ ಪ್ರಾಣಿಲೋಕದ ಹಳೆಯ ತಲೆಮಾರುಗಳ ಇತಿಹಾಸದ ವೃತ್ತಾಂತ ಬಿಚ್ಚಿಕೊಳ್ಳುತ್ತದೆ. ಅಂತಿಮವಾಗಿ ಮೂರನೇ ಭಾಗದಲ್ಲಿ ಕಾದಂಬರಿಯ ಕಥೆ ಮತ್ತೆ ನೆನಪಿನ ಲೋಕದಿಂದ ವಾಸ್ತವ ಲೋಕಕ್ಕೆ ಬಂದು ಲಿಯೋನ ಯಾತನೆ, ನರಳಾಟ, ಮರಣದಲ್ಲಿ ಪರ್ಯಾವಸಾನಗೊಳ್ಳುತ್ತದೆ. ಮನುಷ್ಯತ್ವದ ಬದುಕಿನ ಮೂಲಧಾತುವನ್ನು ಪ್ರಾಣಿಯೊಂದರ ಮೂಲಕ ಅನಾವರಣಗೊಳಿಸಿರುವ ಪ್ರಯೋಗ ನವೀನವಾಗಿದೆ. ಇದೊಂದು ವಿಸ್ಮಯಕಾರಿಯಾದ ಸಂಕಥನ.

– ಡಾ. ಕರೀಗೌಡ ಬೀಚನಹಳ್ಳಿ

ಪ್ರಾಣಿ ಮತ್ತು ಮನುಷ್ಯರ ನಡುವಿನ ಸಂಬಂಧಗಳ ಬಗ್ಗೆ ಅದರ ನೈಜ ವಿವರಗಳನ್ನು ಹೊತ್ತ ಕಥನಗಳು ಕನ್ನಡದಲ್ಲಿ ಇಲ್ಲ. ಈ ಕಾದಂಬರಿ ಪ್ರಾಣಿಯೊಂದರ ಅಂತರಂಗದ ತುಮುಲತೆಯನ್ನು ಅತ್ಯಂತ ಹೃದ್ಯ ಭಾಷೆಯಲ್ಲಿ ಕಟ್ಟಿಕೊಡುತ್ತದೆ. ಇದು ಕನ್ನಡಕ್ಕೆ ಹೊಸದಾದ ರೀತಿಯಲ್ಲಿ ಪ್ರಾಣಿ ಪ್ರಜ್ಞೆಯಿಂದ ಮೂಡಿಬಂದ ಕಾದಂಬರಿಯಾಗಿದೆ. ಇಲ್ಲಿ ನಾಯಿಯೊಂದು ತನ್ನ ಅಂತರಂಗದ ಮಾತುಗಳನ್ನು ಮನೆಯ ಒಡೆಯ ಮತ್ತು ಒಡತಿಯೊಂದಿಗೆ ಗುರುತಿಸಿಕೊಂಡ ತನ್ನ ಸಂಬಂಧವನ್ನು ಕಥನ ರೂಪದಲ್ಲಿ ಹೇಳುತ್ತಾ ಹೋಗುತ್ತದೆ. ಬೆಳೆಯುತ್ತಿರುವ ಬೆಂಗಳೂರು, ಶಿಥಿಲಗೊಳ್ಳುವ ಸಂಬಂಧಗಳ ಅರ್ಥ, ಇತ್ಯಾದಿಗಳನ್ನು ಹೇಳುತ್ತಲೇ ಸಸ್ಯಾಹಾರ ಮತ್ತು ಮಾಂಸಾಹಾರದ ಬಗ್ಗೆಯೂ ಮಾತಾಡುತ್ತದೆ. 'ಬೆಕ್ಕಿಗಾದರೆ ಒಳಗೆ 'ಹಾಲು' ಹೊರಗೆ 'ಇಲಿ' ಅದೃಷ್ಟವೋ ಅದೃಷ್ಟ. 'ಲಿಯೋ' ಹೊಟ್ಟೆಕಿಚ್ಚುಪಡುತ್ತದೆ. ಮಾಂಸಕೊಟ್ಟರೆ ತಿನ್ನುವ ಅದರ ಆಸೆ'..... ಇಂತಹ ಹಲವು ಹತ್ತು ಘಟನೆಗಳ ಮೂಲಕ ಕಾದಂಬರಿ ಪ್ರಿಯವಾಗುತ್ತ ಹೋಗುತ್ತದೆ.

– ಡಾ. ಬಾಳಾಸಾಹೇಬ ಲೋಕಾಪುರ



ಸಲ್ಮಾನ್‌ಖಾನನ ಡಿಫಿಕಲ್ಟೀಸು

ಎಂ.ಎಸ್. ಶ್ರೀರಾಮ್

ಪ್ರಕಾಶಕರು: ಅಂಕಿತ ಪುಸ್ತಕ
53, ಶ್ಯಾಮ್‌ಸಿಂಗ್‌ಕಾಂಪ್ಲೆಕ್ಸ್
ಗಾಂಧಿಬಜಾರ್ ಮುಖ್ಯರಸ್ತೆ,
ಬೆಂಗಳೂರು–560004
ಪ್ರಥಮ ಮುದ್ರಣ : 2013
ಪುಟಗಳು : 136, ಬೆಲೆ ರೂ. 95/–

ನಗರ ಬದುಕಿನ ಸಂಕೀರ್ಣತೆಗಳು, ಜನರ ಬದುಕಿನಲ್ಲಿ ಹಾಸುಹೊಕ್ಕಾಗಿರುವ ರಾಜಕೀಯ, ಬದಲಾಗುತ್ತಿರುವ ವರ್ತಮಾನ ಸಮಾಜದ ಆರ್ಥಿಕತೆ, ಮಹಿಳಾ ಸಬಲೀಕರಣ, ಸ್ವಯಂಸೇವಾ ಸಂಸ್ಥೆಗಳ ನಯವಾದ ರಾಜಕಾರಣ ಮತ್ತು ಅತೀ ಸಾಮಾನ್ಯರ ಬದುಕಿನ ಆಶೋತ್ತರಗಳು.... ಹೀಗೆ ಎಂ.ಎಸ್. ಶ್ರೀರಾಮ್ ಅವರ ಕಥಾವಸ್ತುಗಳ ಹರಿವಿದೆ. ಒಂದೊಮ್ಮೆ ನಗರ–ಗ್ರಾಮೀಣ ಪ್ರದೇಶದ ಆಂಧ್ರದ ತರುಣರನ್ನು ಸೂಜಿಗಲ್ಲಿನಂತೆ ಸೆಳೆದ ಎಡಪಂಥೀಯ ತೀವ್ರವಾದ ಹಾಗೂ ಆಂಧ್ರದ ಸಾಮಾನ್ಯರ ಬದುಕು ಕಥೆಗಳಲ್ಲಿ ಪ್ರತಿಫಲಿಸುವುದುಂಟು. ವಿಶಾಲ ನೆಲೆಯ ಗ್ರಹಿಕೆ, ಸದೂರ, ನಿರುದ್ವಿಗ್ನತೆ, ಭಾವುಕತೆಗಿಂತ ಬೌದ್ಧಿಕ ಶಬ್ದದಾಟಕ್ಕೆ ನೀಡುವ ಮಹತ್ವ ಇವರ ಶಕ್ತಿ, ವಿಶಿಷ್ಟತೆ. ನಗರಗಳ ಕಥೆಗಾರರು ವಸ್ತುವನ್ನು ಗ್ರಹಿಸುವ, ಕಥಿಸುವ ಬಗೆಯನ್ನು ಅರಿತುಕೊಳ್ಳಲು ಇವರ ಕಥೆಗಳು ಸಹಕಾರಿ. ಹೊಸವಸ್ತು, ಸಂಕೀರ್ಣ ವೈನೋದಿಕ ಶೈಲಿಗೆ ಕಥೆಗಾರರು ಪ್ರಸಿದ್ಧರು.

– ಕೇಶವ ಮಳಗಿ


ಮೇಲ್ನೋಟಕ್ಕೆ ಪತ್ತೇದಾರಿ ಕಥೆಯ ಎಲ್ಲಾ ಲಕ್ಷಣವನ್ನು ಇಲ್ಲಿನ ಕಥೆಗಳಲ್ಲಿ ಕಾಣಿಸಿದರೂ ಪತ್ತೇದಾರಿ ಕಥೆಗಳಾಗಿಲ್ಲದಿರುವುದು, ಆಂಧ್ರ ಸೀಮೆಯ ಫ್ಯೂಡಲಿಸಂ,

ನಕ್ಸಲೈಟ್ ಚಟುವಟಿಕೆಗಳನ್ನು ಇಷ್ಟು ಕಲಾತ್ಮಕವಾಗಿ ಕಟ್ಟಿರುವುದು, ಕುಂವೀ ಅವರನ್ನು ಬಿಟ್ಟರೆ ನನಗೆ ಶ್ರೀರಾಮ್ ಮಾತ್ರ ಎನಿಸುತ್ತದೆ. ಇಲ್ಲಿನ ಕಥೆಗಳ ವಸ್ತು ಕೂಡ ಹೈದರಾಬಾದಿನ ಪರಿಸರದ ಘಟನೆಗಳೇ. ಆದರೆ ಅವು ಒಂದಕ್ಕೊಂದು ಬೆರೆತು ಘಟನೆಗಳಿಗೆ ಬೇರೊಂದು ಘಟನೆ ಸೇರ್ಪಡೆಯಾಗಿ ಬೇರೆಯದೇ ಆದ ಲೋಕವನ್ನು ತೆರೆದು ತೋರಿಸುತ್ತವೆ. ಮನುಷ್ಯನ ಮನೋವ್ಯಾಪಾರಗಳನ್ನು ಆಧುನಿಕ ಲೇಖಕ ಹೇಗೆ ಗ್ರಹಿಸುತ್ತಾನೆ ಎಂಬುದಕ್ಕೆ ಇವರ ಕಥೆಗಳು ನಿದರ್ಶನವಾಗುತ್ತವೆ. ರಾಯಲ ಸೀಮೆಯ ತೆಲುಗು ಭಾಷೆಯ ಕೆಲವು ಮಾತುಗಳನ್ನು ಬಿಟ್ಟರೆ ಹೊಸಕಾಲದ ಹೊಸಗನ್ನಡದಲ್ಲಿ ಈ ಕಥೆಗಳು ಅರಳಿವೆ. ಶ್ರೀರಾಮ್ ಕಥೆಕಟ್ಟುವ ಹೊಸಬಗೆಯನ್ನು ಇಲ್ಲಿ ಕಾಣಿಸಿದ್ದಾರೆ.

– ಡಾ. ಹಾಲತಿ ಸೋಮಶೇಖರ್

ಕಥನಕಾರ ತನ್ನೊಳಗೆ ಅಡಗಿರುವ ವಿಷಯಗಳಿಗೆ ತಕ್ಷಣ ಅಭಿವ್ಯಕ್ತಿ ಕೊಡದೆ ಬೇರೆ ಬೇರೆ ಆಯಾಮಗಳಿಂದ ನೋಡಲೆತ್ನಿಸಿದ ಪರಿಣಾಮ ಕಥನ ಬೇರೆ ಬೇರೆ ತಿರುವುಗಳನ್ನು, ರೂಪಗಳನ್ನು, ಪದರುಗಳನ್ನು ಪಡೆದುಕೊಳ್ಳುತ್ತಾ. ಓದುಗರನ್ನು ತನ್ನೆಡೆಗೆ ಸೆಳೆದುಕೊಂಡು ಬಿಡಲು ಪ್ರಯತ್ನಿಸುತ್ತದೆ. ಕಥನದ ಕೇಂದ್ರ ಬೇರೆ ಯಾವುದೋ ದೇಶದ್ದು, ಕಾಲದ್ದು ಎಂದುಕೊಂಡರೂ ಅದಕ್ಕೆ ಸ್ಥಳೀಯ ಸಂವಾದಗಳನ್ನು ಒದಗಿಸಲು, ವಾಸ್ತವ ಪ್ರಪಂಚದಲ್ಲಿ ಪಯಣಿಸುವಂತೆ ಮಾಡುವ ತವಕವನ್ನು ಕಥೆಗಾರನಲ್ಲಿ ಕಾಣಬಹುದಾದ್ದರಿಂದ ಆಪ್ತವೆನಿಸುವ ಧಾಟಿಗೆ ಕಥೆ ತಲುಪುತ್ತದೆ. ಮನುಷ್ಯರ ದ್ವಂದ್ವಗಳನ್ನು ಹುಡುಕುವ ಮೂಲಭೂತ ಶೋಧ ನಡೆಸುವುದರಿಂದ ರಾಜಕೀಯ ಸ್ವರೂಪ ಕಥನಗಳಿಗೆ ಬಂದುಬಿಡುತ್ತದೆ. ಸಿನೆಮಾ ನಟನೊಬ್ಬನ ಬಗ್ಗೆ ಹುಡಗಿಯೊಬ್ಬಳು ತಳೆಯುವ ನಿಲುವು ಓದುಗನನ್ನು ಒಂದರಗಳಿಗೆ ಸೆಳೆದು ತನ್ನ ಲೋಕಕ್ಕೆ ಕೆಡವಿಕೊಂಡು ಬಿಡುತ್ತದೆ.

– ಡಾ. ಮೋಹನ ಚಂದ್ರಗುತ್ತಿ



ಅನಭಿಜ್ಞ ಶಾಕುಂತಲ

ಡಾ. ಕೆ. ವೈ. ನಾರಾಯಣಸ್ವಾಮಿ

ಪ್ರಕಾಶಕರು: ಕೋ ಪ್ರಕಾಶನ,
ನಂ-29/8, 2ನೇ ಮಹಡಿ,
1ನೇ ಮಹಡಿ, ರಾಜಾಜಿನಗರ,
ಬೆಂಗಳೂರು-10
ಪ್ರಥಮ ಮುದ್ರಣ : 2013,
ಪುಟಗಳು : 88, ಬೆಲೆ ರೂ. 80/-

ಸೀತಾ ಪರಿತ್ಯಾಗ ಮತ್ತು ಶಕುಂತಲಾ ಪರಿತ್ಯಾಗಗಳು ವಿಮರ್ಶೆಯ ನೆಲೆಯಲ್ಲಿ ಹಲವು ಚರ್ಚೆಗಳನ್ನು ಹುಟ್ಟು ಹಾಕಿವೆ. ಸಂಪ್ರದಾಯದ ನೆಲೆಯಲ್ಲಿಯೂ ಮತ್ತು ಸ್ತ್ರೀವಾದದ ಆಧುನಿಕ ನೆಲೆಯಲ್ಲಿಯೂ ಚರ್ಚಿತವಾಗಿವೆ. ಪ್ರಸ್ತುತ ನಾಟಕಕಾರರು 'ಅಭಿಜ್ಞಾನ ಶಾಕುಂತಲೆ' ಯನ್ನು 'ಅನಭಿಜ್ಞ ಶಾಕುಂತಲೆ'ಯನ್ನಾಗಿ ನೋಡಹೊರಟಿದ್ದಾರೆ. ಗಂಡು ನೆಲೆಯಲ್ಲಿ ಮತ್ತು ಹೆಣ್ಣು ನೆಲೆಯಲ್ಲಿ ಕಾಣುವ ವಿಭಿನ್ನ ನೋಟಗಳು ಇಲ್ಲಿ ಆಕಾರ ಪಡೆದಿವೆ. ದುಷ್ಯಂತ ಶಕುಂತಲೆಯರ ಕಥೆಯನ್ನು ಕಾಳಿದಾಸ ಮಹಾಕವಿಯ ವೈಯಕ್ತಿಕ ನೆಲೆಯ ಶಕುಂತಲೆಯರಲ್ಲಿ ಶೋಧ ಮಾಡಲು ಹೊರಟಿದ್ದಾರೆ.

'ನ್ಯಾಸ್ತನೆ ನೆಲಬಾಲನೆ' ಗೀತೆಯ ಪುನರ್ ಪ್ರತಿಪಾದನೆ, ಹಿಮ್ಮುಖ ತಂತ್ರದ ಚಲನೆ, ಆಧುನಿಕ ರಂಗತಂತ್ರಗಳು, ಕಾವ್ಯಗಂಧಿಯಾದ ಚುರುಕು ಸಂಭಾಷಣೆಗಳು, ಇಂದಿನ ನ್ಯಾಯಾಧೀಶನ ತನಿಖೆ- ಇವು ಭೂತದ ಕಥೆಯನ್ನು ವರ್ತಮಾನಕ್ಕೆ ಮುಖಾಮುಖಿಯಾಗಿಸಿ ಉತ್ಕೃಷ್ಟ ಪರಿಣಾಮ ಬೀರುತ್ತವೆ. 'ಅನಭಿಜ್ಞ ಶಾಕುಂತಲ' ಆಧುನಿಕ ಕನ್ನಡ ರಂಗಪರಂಪರೆಗೆ ನೀಡಿದ ಶ್ರೇಷ್ಠ ಕೊಡುಗೆಯಾಗಿದೆ.


- ಪ್ರೊ. ಎಂ.ಜಿ. ಈಶ್ವರಪ್ಪ

ಮಹಾಕವಿ ಕಾಳಿದಾಸನ ಜೀವನ ವೃತ್ತಾಂತದ ಸುತ್ತ ಸುತ್ತಿರುವ ಅನೇಕ ಊಹಾಪೋಹ ಘಟನಾವಳಿಗಳ ಎಳೆ ಹಿಡಿದು ಸಿದ್ಧವಾಗಿರುವ ನಾಟಕಕೃತಿ 'ಅನಭಿಜ್ಞ ಶಾಕುಂತಲ'. ಜಾನಪದದ ಎಳೆಗಳನ್ನು ಸೇರಿಸಿಕೊಂಡು ಹತ್ತು ದೃಶ್ಯಗಳಿಂದ ಕೂಡಿದ ನಾಟಕ ಹೊಸಹೊಸ ಹೊಳಹನ್ನು ಪ್ರದರ್ಶಿಸುತ್ತಾ. ಕುತೂಹಲವನ್ನು ಕೆರಳಿಸುತ್ತಾ ಮುಂದುವರೆಯುತ್ತದೆ. ಕಾಳಿದಾಸನ ಕಾವ್ಯ ರಚನೆಗೆ ಸಶಕ್ತ ಹಿನ್ನೆಲೆಗಳನ್ನು ರೂಪಿಸುತ್ತಾ ಆತನ ಕಾವ್ಯಶಕ್ತಿಗೆ ಮನ್ನಣೆ-ಅಸಹನೆ, ಆತನ ಪ್ರೀತಿ ಕಾರಣಾಂತರಗಳಿಂದ ಸಾಧಿತವಾಗದಿರುವಿಕೆ, ರಾಜಕುಮಾರಿಯ ಅಧಿಕಾರಯುತ ಆಸೆ, ಮಲ್ಲಿಕಾಳ ಅಭಿಮಾನ, ಆಪಾದಿತೆ ಗಂಧರ್ವಕನ್ಯೆಯ ಅಳಲು, ಮಗನ ವಿನಾಶಕಾರಿ ಕೃತ್ಯ ಎಲ್ಲವೂ ನಾಟಕದ ಓಟಕ್ಕೆ ಪೂರಕವಾಗಿ ದೃಶ್ಯ ಪುಷ್ಟಿಕೊಟ್ಟಿವೆ. ಪ್ರಕೃತಿ ಪರಿಸರ, ಅರಮನೆ ಅಧಿಕಾರ, ಸೆರೆಮನೆ ಸಾವು ಎಲ್ಲವೂ ಕೂಡಿ ಬರುತ್ತವೆ. ಎಲ್ಲ ರೀತಿಯ ಪಾತ್ರಗಳ ವೈವಿಧ್ಯತೆಯಿಂದಾಗಿ, ಸಂಭಾಷಣೆ, ಹಾಡು, ದೃಶ್ಯ ನಿರ್ಮಿತಿ ಮತ್ತು ಒಟ್ಟು ಸಂರಚನೆಯಿಂದಾಗಿ ಅನಭಿಜ್ಞ ಶಾಕುಂತಲ ನಾಟಕ ಒಂದು ಉತ್ತಮ ರಚನೆಯಾಗಿದೆ.

– ಡಾ. ರಾಜಾರಾಂ. ಬಿ.ವಿ.

ಕಾಳಿದಾಸನ ಅಭಿಜ್ಞಾನ ಶಾಕುಂತಲವನ್ನು ಒಂದು ರೀತಿಯ ಮರು ಓದಿಗೆ, ಮರುವಿಶ್ಲೇಷಣೆಗೆ ಒಳಪಡಿಸುವ 'ಅನಭಿಜ್ಞ ಶಾಕುಂತಲ' ಎಂಬ ನಾಟಕವನ್ನು ನಾರಾಯಣಸ್ವಾಮಿ ಬರೆದಿದ್ದಾರೆ. ಕಾಳಿದಾಸನ ಅಭಿಜ್ಞಾನವನ್ನು ಅನಭಿಜ್ಞಾನವೆಂದು ಮುರಿದು ಕಟ್ಟುವ (Deconstruction)ಮೂಲಕ ಕಾಳಿದಾಸನ ನಾಟಕವನ್ನು ಹೊಸಬೆಳಕಿನಲ್ಲಿ ನೋಡಲು ಒತ್ತಾಯಿಸುತ್ತಾರೆ. ಈ ನಾಟಕ ಕವಿ ಕಾಳಿದಾಸನನ್ನೇ ಪಾತ್ರವಾಗಿ ಇಟ್ಟುಕೊಂಡು ಶಾಕುಂತಲೆಯನ್ನು ಪರೀಕ್ಷಿಸುವ ಹಾಗೂ ಮೂವರು 'ಗುರುತು' ಇಲ್ಲದ ಶಕುಂತಲೆಯರ ಮೂಲಕ ಕಾಳಿದಾಸನನ್ನು ಪರೀಕ್ಷಿಸುವ ಹಾಗಿನ ರಚನೆ ಈ ನಾಟಕದ್ದು. ಇದರಲ್ಲಿ ನಾಟಕಕಾರ ನಾಲ್ಕು ರೀತಿಯ ಪಠ್ಯವನ್ನು ಬಳಸುವ ಪ್ರಯತ್ನ ಮಾಡುತ್ತಾರೆ. ೧) ಕಾಳಿದಾಸನ ಅಭಿಜ್ಞಾನ ಶಾಕುಂತಲಂ. ೨) ಕವಿಕಾಳಿದಾಸನ ಸುತ್ತಲಿರುವ ಐತಿಹ್ಯಗಳು. ಕಟ್ಟುಕಥೆಗಳು, ದಂತಕಥೆಗಳು ಇತ್ಯಾದಿ ೩) ವಿವಾಹಿತ ಹೆಣ್ಣುಮಗಳೊಬ್ಬಳು ತನ್ನ ಉಂಗುರುವನ್ನು ಕಳೆದುಕೊಂಡು ಚಂದ್ರನಿಗೆ ಅದನ್ನು ನಿವೇದಿಸಿಕೊಳ್ಳುವ ಕೋಲಾಟದ ಹಾಡು. ೪) ಹಿಂದಿಯ ಪ್ರಸಿದ್ಧ ನಾಟಕಕಾರ ಮೋಹನ್ ರಾಕೇಶರ ನಾಟಕ 'ಆಷಾಡದ ಒಂದುದಿನ.'ಸುಮಾರಾಗಿ ಈ ಮೇಲಿನ ಪಠ್ಯಗಳು ಈ ನಾಟಕಕ್ಕೆ ಒದಗಿ ಬಂದಿವೆ. ಒಂದು ಪಠ್ಯದ ಜೊತೆ ಹಲವು ಪಠ್ಯಗಳು ಸೇರಿ ಆಗಿರುವ ಈ ಅನಭಿಜ್ಞ ಶಾಕುಂತಲ ನಾಟಕ ಸರಳ ರೇಖೆಯಲ್ಲಿರದೇ 'ಸ್ಪೈರಲ್' ರಚನೆಯನ್ನು ಹೊಂದಿದೆ.

– ನಟರಾಜ್ ಹೊನ್ನವಳ್ಳಿ



ಮಹಾಮಾತೆ ಮಲ್ಲಕ್ಕ ಮತ್ತು ಇತರ ಪ್ರಬಂಧಗಳು

ಎಂ.ಡಿ. ಗೋಗೇರಿ

ಪ್ರಕಾಶಕರು: ಎಂ.ಆರ್. ಪ್ರಕಾಶನ
ನಂ–ಬಿ 55/1, 3ನೇ ಕ್ರಾಸ್, ಹೆಗ್ಗೇರಿ ಕಾಲೋನಿ
ಹಳೇ ಹುಬ್ಬಳ್ಳಿ, ಹುಬ್ಬಳ್ಳಿ–580 024.
ಪ್ರಥಮ ಮುದ್ರಣ : 2013
ಪುಟಗಳು : 212, ಬೆಲೆ ರೂ. 160/–

ಈ ಸಂಕಲನದಲ್ಲಿ ಆತ್ಮಕಥಾನಕದ ತುಣುಕುಗಳು ಸೇರ್ಪಡೆಯಾಗಿವೆ. ತಮ್ಮ ಹಾಸ್ಯ ಲೇಖನಗಳಲ್ಲಿ ಗೋಗೇರಿಯವರು ತಮ್ಮನ್ನೇ ಹಾಸ್ಯಕ್ಕೆ ಈಡು ಮಾಡಿಕೊಳ್ಳುವುದು ಅವರ ವಿಶೇಷತೆ ಎಂದು ಮುನ್ನುಡಿಯಲ್ಲಿ ಕಮಲಾ ಹೆಮ್ಮಿಗೆಯವರು ಗುರುತಿಸಿರುವುದು ಸರಿಯಾಗಿದೆ. ಹಾಗೆಯೇ ಸ್ವರ್ಗ ನರಕ, ಚಮಚಾ, ನಮಸ್ಕಾರದಂತಹ ವಿವರಣಾತ್ಮಕವಾದ ಪ್ರಬಂಧಗಳು ಈ ಸಂಕಲನದಲ್ಲಿವೆ. ಸಾಹೇಬರ ಸಿಪಾಯಿ, ಮಹಾಮಾತೆ ಮಲ್ಲಕ್ಕದಂತಹ ಪ್ರಬಂಧಗಳು ಪಾತ್ರವೊಂದರ ಸುತ್ತ ಹೆಣೆದಂತಹ ಪ್ರಬಂಧಗಳು. ಚಮಚಾ, ಮಂಗಳಾರತಿಯಂತಹ ಪ್ರಬಂಧಗಳು ಈ ಪದಗಳ ಅರ್ಥವಿಸ್ತರಣೆಯನ್ನು ಕಟ್ಟಿಕೊಡುವಂತಹದ್ದಾಗಿವೆ. ಪಿಂಜಾರ ಸಮುದಾಯದ ಬದುಕಿನ ಹೊಳಹುಗಳು ಒಂದೆರಡು ಕಡೆ ಕಾಣುತ್ತದೆ ಎಂಬುದು ವಿಶಿಷ್ಟ. ತಕ್ಷಣದ ರಂಜನೆಯಷ್ಟೇ ಮುಖ್ಯವಾಗಿರುವ ಈ ಸಂಕಲನದಲ್ಲಿ ಉತ್ತರ ಕರ್ನಾಟಕದ ಭಾಷಾ ಬಳಕೆ ಎದ್ದು ಕಾಣುವುದು ವೈಶಿಷ್ಟ್ಯ.

– ಸಿ. ಜಿ. ಮಂಜುಳಾ

ಉತ್ತರ ಕರ್ನಾಟಕದ ಅಪ್ಪಟ ಗ್ರಾಮೀಣ ಭಾಷೆಯ ನುಡಿಗಟ್ಟುಗಳನ್ನು ತಲೆಬರಹವಾಗಿಸಿಕೊಂಡು ಅವುಗಳನ್ನು ನಿರೂಪಿಸುವಲ್ಲಿ ಪ್ರಬಂಧಕಾರ ಯಶಸ್ಸು ಗಳಿಸಿದ್ದಾರೆ. 'ಕಷ್ಟ'ದ ಬೆನ್ನುಹತ್ತಿಹೋಗಿರುವ ಪ್ರಬಂಧಕಾರ ಕಷ್ಟ ಎಂದರೆ ಅವಸ್ಥೆಯಲ್ಲ ಇದೊಂದು ಕ್ರಿಯೆ – ಕೆಲವು ಕಡೆಗೆ 'ಮಕಾಷ್ಟ' ಎಂಬ ಶಬ್ದವನ್ನು

ಕೂಡಾ ಬಳಸುವ ರೂಢಿಯಿದೆ. ಮಕಾಷ್ಟ ಎಂದರೆ ದಾಡಿ ಬೋಳಿಸಿಕೊಳ್ಳುವುದು ಎಂದರ್ಥ. ಕಷ್ಟ ಪ್ರಬಂಧ ಒಂದು ತಲೆಮಾರಿನ ಮತ್ತು ಒಂದು ಜನಾಂಗದ ತಲ್ಲಣವನ್ನು ತಿಳಿಹಾಸ್ಯದೋಪಾದಿಯಲ್ಲಿ ತಿಳಿಯಪಡಿಸುತ್ತದೆ. ಕವಿಗೋಷ್ಠಿ, ಕುಡುಕರ ಮಾತು ಪ್ರಬಂಧಗಳು ವಾಸ್ತವಕ್ಕೆ ಹಿಡಿದ ಕೈಗನ್ನಡಿ.

ಭಾಷೆ, ನಿರೂಪಣೆ, ಶೈಲಿ, ವಸ್ತುವಿನ ಆಯ್ಕೆಯಲ್ಲಿ ಸಂಪೂರ್ಣವಾಗಿ ತನ್ನದೇ ಆದ ವೈಶಿಷ್ಟ್ಯವನ್ನು ಹೊಂದಿರುವ ಈ ಸಂಕಲನ ಲಲಿತ ಪ್ರಬಂಧಕ್ಕೆ ಬೇಕಾಗಿರುವ ಸರಳ ಶೈಲಿ ಮತ್ತು ವಸ್ತುವಿನ ಆಯ್ಕೆಯಿಂದ ಯಶಸ್ಸು ಕಂಡಿದೆ.ಬದುಕಿನ ಪ್ರತಿಯೊಂದು ಆಯಾಮಗಳು ಹಾಸ್ಯಕ್ಕೆ ಪ್ರಚೋದನೆ ನೀಡುತ್ತವೆ. ಕನ್ನಡದ ಜಾಯಮಾನಕ್ಕೆ ಒಗ್ಗಿಕೊಂಡು ಬರೆಯುವುದು ಬಹಳ ಕಷ್ಟ. ಈ ಹಿನ್ನೆಲೆಯಲ್ಲಿ ಗೋಗೇರಿಯವರ ಪ್ರಬಂಧ ಸಂಕಲನ ವಿಶಿಷ್ಟವಾಗಿದೆ ಎಂದರೆ ತಪ್ಪಾಗದು.

– ಡಾ. ಎನ್. ಶಾಂತನಾಯ್ಕ

ಸಾಹೇಬರ ಸಿಪಾಯಿ ಆದಿಯಾಗಿ ಮಹಾಮಾತೆ ಮಲ್ಲಕ್ಕನವರಿಗೆ ಚಾಚಿದ ಲೇಖಕರ ಕಣ್ಣಿನ ಬೀಸು ದಕ್ಕಿಸಿಕೊಂಡ ಅನುಭವದ ವಿಶೇಷಗಳು ಈ ಪ್ರಬಂಧಗಳನ್ನು ರೂಪಿಸಿವೆ. ಬದುಕಿನ ಯಾನದಲ್ಲಿ ಸಂಚರಿಸುವ ಕವಿಹೃದಯ, ವ್ಯಕ್ತಿ, ಸಂಸ್ಥೆ, ಕ್ರಿಯೆ, ಘಟನೆ, ತಾತ್ವಿಕತೆ ಹೀಗೆ ವಿಭಿನ್ನ ಸ್ತರ, ತರತಮಗಳೊಂದಿಗೆ, ನಡೆಸುವ ನೇರ ಮತ್ತು ಪರೋಕ್ಷ ಅನುಸಂಧಾನ ಹಾಸ್ಯ, ವಿಡಂಬನೆ, ಚಮತ್ಕಾರ, ವ್ಯಂಗ್ಯ, ವಿಷಾದ, ಗೌರವ, ಅಭಿಮಾನ, ಪ್ರೀತಿ ಇತ್ಯಾದಿ ದ್ರವ್ಯಗಳು ಸ್ಪರ್ಶಪಡೆದು ಹೊಸರೂಪ, ಲಾವಣ್ಯ ಲಯ, ಹಾಸ್ಯಗಳಲ್ಲಿ ಜೀವತಳೆದು ನಿಲ್ಲುವ ಬೆರಗಿಗೆ ತನ್ನನ್ನು ಒಡ್ಡಿಕೊಳ್ಳುತ್ತದೆ. ಈ ಪ್ರಕ್ರಿಯೆ ಆತ್ಮವಿಮರ್ಶೆ, ಸಮಾಜ ವಿಮರ್ಶೆಗಳೆರಡನ್ನು ಸಾಧಿಸುವ ಹಂಬಲವನ್ನು ಹೊಂದಿರುತ್ತದೆ. ಇದಕ್ಕೆ ಈ ಸಂಕಲನದ ಸಾಹೇಬರ ಸಿಪಾಯಿ, ಕವಿಗೋಷ್ಠಿ, ಮಾನಾಕಳೆದ ಲೂನಾ, ಇವತ್ತು ಬರೀ ನಾಂದೀ ಆತು, ನಾಳೆ ಬರ್ರಿ ಆಟ ಆಡ್ತೇವಿ ಇವುಗಳನ್ನು ಪ್ರಾತಿನಿಧಿಕವಾಗಿ ಉದಾಹರಿಸಬಹುದು. **'ಸಾಹಿತ್ಯ ಸಮ್ಮೇಳನ'**ದಲ್ಲಿ ಪ್ರಬಂಧ ಅದರ ಅವಗಢಗಳನ್ನು ಮಾರ್ಮಿಕವಾಗಿ ವಿಡಂಬಿಸಿದರೆ, **ಶಾಲಾಗುರುಗಳು** ಪ್ರಬಂಧ ಲೇಖಕರ ಶೈಕ್ಷಣಿಕ ಬದುಕಿನ ನೆನಪುಗಳನ್ನು ದಾಖಲಿಸುತ್ತದೆ. **ನನ್ನ ಅವ್ವ ನನ್ನ ಅಪ್ಪ** ಪ್ರಬಂಧ ಭಿನ್ನ ಧಾತುವಿನಿಂದ ರೂಪಿತವಾಗಿದ್ದು, ಬಾಲ್ಯದ ನೆನವುಗಳೊಂದಿಗೆ ಬೆಳೆದು ಶಿಕ್ಷಕ ವೃತ್ತಿ ಕೈಕೊಳ್ಳುವವರೆಗಿನ ಜೀವನ ಚರಿತ್ರೆಯ ಭಾಗಶಃ ವಿವರಗಳನ್ನು ಒಳಗೊಂಡ ಪ್ರಬಂಧವಾಗಿದೆ. ಹೀಗೆ ವಿಷಯ ಸಮೃದ್ಧಿಯಿಂದಲೂ ಆಕರ್ಷಿಸುವ ಸಂಕಲನ ಇದಾಗಿದೆ.

– ಡಾ. ಬಾಳಣ್ಣಾ ಶೀಗೀಹಳ್ಳಿ



ಅಂಡಮಾನ್ ಕಂಡ ಹಾಗೆ...

ಡಾ. ಎಚ್.ಎಸ್. ಅನುಪಮಾ

ಪ್ರಕಾಶಕರು: ಲಡಾಯಿ ಪ್ರಕಾಶನ
ಪ್ರಸಾದ್ ಹಾಸ್ಟೆಲ್
ಗದಗ–582101
ಪ್ರಥಮ ಮುದ್ರಣ : 2013
ಪುಟಗಳು : 104, ಬೆಲೆ ರೂ. 80/–

ಗಂಭೀರವಾದ ಸಾಮಾಜಿಕ ದನಿ, ಸಹಜವಾದ ಚಿಕಿತ್ಸಕ ದೃಷ್ಟಿ, ಇವರೆಡಕ್ಕೂ ಸಮಷ್ಟಿಯಾದ ಲೇಖಕರ ಮನಸ್ಸು ಗಂಭೀರವಾದ ವಾಸ್ತವವನ್ನು ಮನಮುಟ್ಟುವಂತೆ ನಿರೂಪಿಸಿರುವುದು ಪುಸ್ತಕದ ನಿಜಮೌಲ್ಯವನ್ನು ಎತ್ತರಕ್ಕೆ ಕೊಂಡೊಯ್ದಿದೆ. ನವನವೀನ ತಾತ್ವಿಕ ಹಾಗೂ ತಾರ್ಕಿಕ ನೆಲೆಗಟ್ಟಿನಲ್ಲಿ ನಿರೂಪಿಸಿರುವ ಬರಹ, ಸರಳಭಾಷೆ, ಸೂಕ್ಷ್ಮ ಗ್ರಹಿಕೆ ಮತ್ತು ಮಾನವೀಯ ಒಳನೋಟಗಳಿಂದ ಗಮನ ಸೆಳೆಯುತ್ತದೆ. ನಾಗರಿಕ ಜಗತ್ತು ಮತ್ತು ಸುನಾಮಿ ಎರಡನ್ನೂ ಎದುರಿಸಿದ ಅಂಡಮಾನ್ ಬಗೆಗಿನ ಅಭಿಮಾನ, ಮಮಕಾರ ಮತ್ತು ಅಂತ:ಕರಣ ಲೇಖಕರಲ್ಲಿ ಸಹಜವಾಗಿ ಪ್ರಕಟವಾಗಿದೆ. ಬದುಕಿನ ಬಿಕ್ಕಟ್ಟುಗಳನ್ನು ಬರಹಗಾರ ಪ್ರವಾಸದ ಮೂಸೆಯಲ್ಲಿಟ್ಟು ಕಾಯಿಸಿ, ಬೇಯಿಸಿ ನಿರೂಪಿಸಿರುವ ಪರಿ ಆಕರ್ಷಕವಾಗಿದೆ.

ಸೃಜನಾತ್ಮಕ, ಧ್ವನಿಪೂರ್ಣವಾದ ಭಾಷೆ, ಸ್ಪಷ್ಟ ನಿರೂಪಣೆ ಮತ್ತು ಮಾನವೀಯ ಮೌಲ್ಯಗಳು ಪ್ರವಾಸಿ ಮನಸ್ಸಿನಲ್ಲಿ ಹೇಗೆ ಪ್ರಕಟಗೊಳ್ಳುತ್ತಾ ಹೋಗುತ್ತವೆ ಎಂಬುದನ್ನು ಮನೋಜ್ಞವಾಗಿ ಚಿತ್ರಿಸಿದ್ದಾರೆ. ದಿಗ್ಲಿಪುರದ ವೃದ್ಧೆ ಮತ್ತವಳ ಮಗನ ವೃತ್ತಾಂತವು ನಿರಂತರವಾಗಿ ಓದುಗನನ್ನು ಕಾಡುವ ಸಾಹಿತ್ಯವಾಗಿವೆ. ಕೋಮುವಾದ, ಜಾಗತೀಕರಣ, ಪ್ರಾದೇಶಿಕತೆ, ಭಯೋತ್ಪಾದನೆ ನಮ್ಮ ಬದುಕಿನ ಬುಡವನ್ನೆ

ಅಲುಗಿಸುತ್ತಿರುವ ಈ ಸಂದರ್ಭದಲ್ಲಿ ಈ ಪುಸ್ತಕ ಮನುಷ್ಯತ್ವದ ಮೇಲೆ ಭರವಸೆ ಮೂಡಿಸುತ್ತದೆ.

– ಧನಂಜಯ ಜೀವಾಳ ಬಿ.ಕೆ

ಅಂಡಮಾನ್ ಕಂಡ ಹಾಗೆ.... ಪ್ರವಾಸಕಥನದಲ್ಲಿ ಲೇಖಕಿ ನಾಗರಿಕ ಜಗತ್ತು ಮತ್ತು ಆದಿವಾಸಿಗಳ ಬದುಕನ್ನು ಮುಖಾಮುಖಿ ಮಾಡಿ ಪರಿಶೀಲಿಸುತ್ತಾರೆ. ಲೇಖಕಿ ಹೇಳುವಂತೆ ಜರವಾ ಬುಡಕಟ್ಟು ಜನರ ಬದುಕು, ಈ ನಾಗರಿಕ ಬದುಕು, ಆಸ್ತಿ, ಕುಟುಂಬ, ಲೈಂಗಿಕತೆ, ದಾಂಪತ್ಯ, ಸೌಂದರ್ಯ ಈ ಎಲ್ಲದರ ಆಚೆ ನಿಂತು ಬದುಕನ್ನು ಕುರಿತು. ಯೋಚಿಸಲು ಹಚ್ಚಿಸುತ್ತದೆ. ಲಿಪಿ, ಲೇಖನಿ ತಿಳಿಯದ ಅವರ ಶಬ್ದಕೋಶ, ಅನಾಥ ಎಂಬ ಪದವೇ ಇಲ್ಲದಿರುವುದು, ಇಡೀ ಬುಡಕಟ್ಟು ಸಮುದಾಯವೇ ಒಂದು ಕುಟುಂಬದಂತಿರುವುದು, ಬೇಟೆಯೇ ಆಹಾರವಾಗಿದ್ದರೂ ಆ ಕಾರಣಕ್ಕೆ ಪ್ರಾಣಿಗಳು ಅಳಿಯದಿರುವುದು, ಆಧುನಿಕ ವೈದ್ಯ ತಿಳಿಯದೇ ಕಟ್ಟುಮಸ್ತಾಗಿ ಬದುಕಿರುವುದು, ಯಾವ ನಾಗರಿಕ ರಕ್ಷಣೆ ಇಲ್ಲದೇ ಪ್ರಾಕೃತಿಕ ಸವಾಲುಗಳನ್ನು ಎದುರಿಸಿ ಬದುಕುತ್ತಿರುವುದು – ಈ ಎಲ್ಲವೂ ಲೇಖಕಿಗೆ ಭಿನ್ನಲೋಕವೊಂದರ ಹುಡುಕಾಟದ ಪ್ರವಾಸವಾಗುತ್ತದೆ.

ಜೊತೆಗೆ ಮೂರ್‍ನಾಲ್ಕು ಶತಮಾನದ ಹಿಂದಷ್ಟೆ ನಾಗರಿಕ ಜನರು ಕಾಲಿರಿಸಲು ಹೆದರುತ್ತಿದ್ದ ಅಂದಮಾನ್ ದ್ವೀಪ ಈಗ ಜನರಿಂದ ತುಂಬಿತುಳುಕುತ್ತಿರುವ ಅಂಡಮಾನ್ ಆಗಿ ರಕ್ಷಣೆ, ಪುನರ್ವಸತಿ ನೆಲೆಯಾಗಿ ವಿಕಾಸಗೊಂಡ ರೀತಿಯನ್ನೂ ಪ್ರಸ್ತಾಪಿಸಿದ್ದಾರೆ. ಹಾಗೇ ಜರವಾ ಫಾರೆಸ್ಟ್ ದಾರಿಯಲ್ಲಿ ಸಿಕ್ಕ ಜರವಾ ದಂಪತಿಗಳು, ಇವರ ಕಡೆ ನೋಡದ ಜರವಾ ಆದಿವಾಸಿಗಳ ತಂಡ, ಅವರ ಮೈಕಟ್ಟು–ಕಾಂತಿ, ಹಾವಭಾವಗಳನ್ನೂ ಅವಲೋಕಿಸಿದ್ದಾರೆ.

– ಡಾ. ವಾಸುದೇವ ಬೆಳ್ಳೆ.

'ಅಂಡಮಾನ್ ಕಂಡ ಹಾಗೆ....' ಕೃತಿ ಅಂಡಮಾನ್ ಕುರಿತ ಪ್ರವಾಸ ಕಥನವಾಗಿದೆ. ಲೇಖಕಿ ಡಾ. ಎಚ್.ಎಸ್. ಅನುಪಮಾ ಅವರು ಡಾ. ರಹಮತ್ ತರಿಕೇರೆ ಹಾಗೂ ಪೂರ್ಣಚಂದ್ರ ತೇಜಸ್ವಿಯವರ ಕೃತಿಗಳಿಂದ ಪ್ರೇರಣೆಗೊಂಡು ಅಂಡಮಾನಿನ ಪ್ರವಾಸ ಮಾಡಿದ್ದಾರೆ. ಈ ಕೃತಿಯನ್ನು ರಚಿಸಿದ್ದಾರೆ.

ಈ ಕೃತಿಯ ಬರವಣಿಗೆ ಸ್ಪಷ್ಟ ಹಾಗೂ ಸ್ಫುಟವಾಗಿದೆ. ಪ್ರತಿಪಾದಿಸುವ ಶೈಲಿ ಆಪ್ತವಾಗಿದೆ. ಓದಿಸಿಕೊಂಡು ಹೋಗುವ ಗುಣ ಹೊಂದಿದೆ. ಇಲ್ಲಿನ ಅಂಡಮಾನಿನ ಚಿತ್ರಣ ಸಮಗ್ರವಾಗಿದೆ, ಸುಂದರವಾಗಿದೆ. ಪರಿಣಾಮಕಾರಿಯೂ ಆಗಿದೆ. ಆದರೆ ಲೇಖಕಿ ಇಲ್ಲಿ ಪ್ರವಾಸದ ಅನುಭವಗಳನ್ನು ಕಥನವಾಗಿಸುವಲ್ಲಿ ವಿಫಲವಾಗಿದ್ದಾರೆ. ಕೃತಿಯ ಬಹುತೇಕ ಭಾಗ ಅನ್ಯ ಆಕರಗಳಿಂದ ಮಾಹಿತಿ ಸಂಗ್ರಹಿಸಿ ಬರೆದಂತಿದೆ.

– ಡಾ. ಗುರುಲಿಂಗಪ್ಪ ಧಬಾಲೆ



ಅಲೆಮಾರಿಯ ಅಂತರಂಗ

ಕುಪ್ಪೆ ನಾಗರಾಜ

ಪ್ರಕಾಶಕರು: ನವ ಕರ್ನಾಟಕ ಪಬ್ಲಿಕೇಷನ್ಸ್
ಪ್ರೈವೇಟ್ ಲಿಮಿಟೆಡ್
ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ
ಬೆಂಗಳೂರು–01.
ಪ್ರಥಮ ಮುದ್ರಣ : 2013
ಪುಟಗಳು : 216, ಬೆಲೆ ರೂ. 125/–

ಅಲೆಮಾರಿಯ ಅಂತರಂಗವು ಸಾಮಾಜಿಕವಾಗಿ ಮಹತ್ವದ ಆತ್ಮಕಥನವಾಗಿದೆ. ಅಲೆಮಾರಿ ಜನಾಂಗವನ್ನು ಕುರಿತ ಸ್ವತ: ಅನುಭವ ಕಥನವಿದು. ಅರೆ ಅಲೆಮಾರಿಗಳು ಹಾಗೂ ಅಲೆಮಾರಿ ಜನಾಂಗಗಳ ಬದುಕು ಉಳಿದ ದಲಿತ–ಸಮುದಾಯಗಳಿಗಿಂತ ಭಿನ್ನವಾದುದು, ಹಾಗೇ ವಿಶಿಷ್ಟವೂ ಹೌದು. ದೊಂಬಿದಾಸರು ಎಂಬ ಜನಾಂಗದಲ್ಲಿಯೇ ಹುಟ್ಟಿದ ಕುಪ್ಪೆಯವರು ತನ್ನ ತಂದೆ ಹಾಗೂ ಕುಲದ, ಜನಾಂಗದ ರೀತಿ ನೀತಿ, ಸಂಪ್ರದಾಯಗಳನ್ನು ಆತ್ಮಕಥನದ ಮೂಲಕ ನಮಗೆ ಕೊಟ್ಟಿದ್ದಾರೆ. ಒಂದರ್ಥದಲ್ಲಿ ಇದು ಜನಾಂಗದ ಕಥನವು ಹೌದು.

ವಿದ್ಯಾರ್ಥಿ ದೆಸೆಯಿಂದಲೆ ಕುಪ್ಪೆ ಶಿಕ್ಷಣ ಪಡೆಯಲು ಪಟ್ಟ ಪಾಡು ಎಷ್ಟೊಂದು! ಊರೂರು ಅಲೆಯುವ ಈ ಜನಾಂಗದ ಮಕ್ಕಳಿಗೆ ಓದೇ ಇಲ್ಲ. ಅನ್ನ ನೀರಿಗೂ ಪರದಾಡುತ್ತಾ ಭಿಕ್ಷೆ ಬೇಡಿ ತಂದ ಪದಾರ್ಥಗಳೇ ಊಟ. ಇಂಥದ್ದರಲ್ಲಿ ಶಿಕ್ಷಣ ಪಡೆದ ನಾಗರಾಜರು ದೊಂಬಿದಾಸ ಸಮುದಾಯದ ಕರಳು–ಬಳ್ಳಿಯ ಸಂಬಂಧ, ಬದುಕು–ಬವಣೆಯ ನಿವೇದನೆ, ಕಲೆ ಸಂಸ್ಕೃತಿಯ ಕುರಿತು ಅತ್ಯಂತ ಸರಳ ಭಾಷೆಯಲ್ಲಿ ನಿರೂಪಿಸಿದ್ದಾರೆ.

– ಡಾ. ವಿಜಯಲಕ್ಷ್ಮಿ ಭೋಸಲೆ

ಅಲೆಮಾರಿಯ ಅಂತರಂಗ ಕೃತಿ ಸಾಮಾಜಿಕ ಮಹತ್ವದ ಆತ್ಮಕಥನವಾಗಿದೆ. ವಸ್ತುವಿಗೆ ತಕ್ಕ ಸರಳಭಾಷೆ, ನೇರ ಸಹಜ ನಿರೂಪಣೆ, ಸುಲಲಿತ ಶೈಲಿ, ಅಧ್ಯಾಯಗಳ ವಿಂಗಡಣೆ – ಎಲ್ಲಾ ಅಂಶಗಳು ಸಮರ್ಥವಾಗಿ ಅಭಿವ್ಯಕ್ತವಾಗಿವೆ. ಕೃತಿ ತನ್ನ ಮಿತಿಯಲ್ಲಿ ಒಂದು ವ್ಯಕ್ತಿಯ ಆತ್ಮಕಥೆಯಾಗಿ, ದೊಂಬಿದಾಸ ಅಲೆಮಾರಿ ಸಮುದಾಯದ ಜೀವನ ಚರಿತೆಯಾಗಿ, ಕರ್ನಾಟಕದ ದಲಿತ ಜನಾಂಗದ ಎಚ್ಚೆತ್ತ ಕಾಲಘಟ್ಟದ ದಾಖಲೆಯೂ ಆಗಿ ವಿವಿಧ ಆಯಾಮಗಳನ್ನು ಪಡೆದಿದೆ. ವ್ಯಕ್ತಿಯ ವಿಕಾಸ ಬೆಳವಣಿಗೆಯ ಜತೆ ಜತೆಯಲ್ಲೆ ಅಲೆಮಾರಿ ಜನಾಂಗ ದೊಂಬಿದಾಸ ಸಮುದಾಯದೊಳಗಿನ ಕೌಟುಂಬಿಕ ಸಂಬಂಧಗಳು, ಸಾಮುದಾಯಿಕ ನಂಬಿಕೆ–ಆಚರಣೆ, ಸ್ವಭಾವ–ನಡಾವಳಿ, ಕಾರ್ಯಕೌಶಲ್ಯ, ಪ್ರತಿಭೆ, ಸಂಸ್ಕೃತಿಯ ವಿವರಗಳಿವೆ.


ಕೃತಿಯು ವಸ್ತುವಿನಲ್ಲಾಗಲಿ, ನಿರೂಪಣೆಯಲ್ಲಾಗಲಿ ಬಳಸಿರುವ ಭಾಷೆಯಲ್ಲಾಗಲಿ, ಉಂಟುಮಾಡುವ ಸಂವೇದನೆಗಳಲ್ಲಾಗಲಿ ಉತ್ಪ್ರೇಕ್ಷೆ, ಅತಿರಂಜಕತೆ, ಅತಿ ಭಾವಾವೇಶ, ಆಕ್ರೋಶ, ಸ್ವಮರುಕ ಮುಂತಾದ ಕೃತಕವಾದ ಅಂಶಗಳು ಕಂಡುಬರುವುದಿಲ್ಲ. ಬದಲಾಗಿ ನಿರೂಪಕನ ಅನುಭವದ ಪ್ರಾಮಾಣಿಕತೆ ಸಹಜವಾಗಿ ಓದುಗನ ಮನ ಮುಟ್ಟುತ್ತದೆ.

– **ಡಾ. ಲತಾ ಕೆ.ಎ.**

‘ಧರಣಿ ಮಂಡಲ ಮಧ್ಯದೊಳಗೆ’ ಎಂದು ಹಾಡುತ್ತಾ ಬೆಳೆಯುವ ಕನ್ನಡಿಗರ ನಡುವೆ ಧರಣಿಯ ಮಧ್ಯದಲ್ಲಿ ನೆಲಸದೆ ಧರಣಿಯನ್ನೆಲ್ಲ ನೆಲೆಯಾಗಿಸಿಕೊಂಡ ಅಲೆಮಾರಿ ಜನಾಂಗದ ಲೇಖಕನ ಈ ಆತ್ಮಕಥೆ ಜಂಗಮವಾಗಿದ್ದ ಸಮುದಾಯ ಸ್ಥಾವರವಾಗುವತ್ತ ಚಲಿಸುವ ಕಥೆಯನ್ನು ಮತ್ತು ಆ ಮುಖಾಂತರ ಬದಲಾದ ಕಾಲಘಟ್ಟದಲ್ಲಿ ಬದಲಾದ ಸಾಮಾಜಿಕ, ಆರ್ಥಿಕ, ರಾಜಕೀಯ ವ್ಯವಸ್ಥೆಯಲ್ಲಿ ‘ಜಂಗಮಕ್ಕೇ ಅಳಿವು’ ಇರುವುದೇ ಎಂದು ಮೌನವಾಗಿ ಪ್ರಶ್ನಿಸುತ್ತದೆ.

ಈ ಆತ್ಮಕಥೆಯ ನಿಜವಾದ ಅಗ್ಗಳಿಕೆ ಇರುವುದು ಈ ತನಕ ಬರೆಯಲ್ಪಡದ ಈ ಸಮುದಾಯದ ಕಥೆ ಹೇಳುವಾಗ ಸಮುದಾಯವನ್ನು ‘Museum’ ಆಗಿಸದೆಯೂ ಆಕ್ರಂದನ, ಆಕ್ರೋಶದಲ್ಲಿ ತೇಲಿಸದೆಯೂ ಅದೇ ಹೊತ್ತಿಗೆ ತೀರ ನಿರ್ಲಿಪ್ತವಾಗದೆಯೇ ನಿರೂಪಿಸಿರುವುದು. ಬಹುಭಿನ್ನವಾದ ಅಷ್ಟೇ ಶ್ರೀಮಂತವಾದ ಜೀವಂತಿಕೆವುಳ್ಳ ಸಾಂಸ್ಕೃತಿಕ ಲೋಕ ಈ ಕಥೆಯೊಳಕ್ಕೆ ಇದೆ.

– **ಸಂವರ್ತ**



ಕವಿತೆಯ ಓದು

ಪ್ರೊ. ಪ್ರಭಾಕರ ಆಚಾರ್ಯ

ಪ್ರಕಾಶಕರು: ದೇಸಿ ಪುಸ್ತಕ,
ನಂ-121, 13ನೇ ಮೇನ್,
ಎಂ.ಸಿ.ಲೇಔಟ್, ವಿಜಯನಗರ,
ಬೆಂಗಳೂರು-40
ಪ್ರಥಮ ಮುದ್ರಣ : 2013
ಪುಟಗಳು : 202, ಬೆಲೆ ರೂ. 150/-

ಇದೊಂದು ಕುತೂಹಲಕರವಾದ ಮತ್ತು ನಮ್ಮ ಕಾಲಕ್ಕೆ ಅಗತ್ಯವಾದ ಪುಸ್ತಕ. ಅಂಕಣವೊಂದರಲ್ಲಿ ನಿಯತವಾಗಿ ಪ್ರಕಟವಾದ ಲೇಖನಗಳು ಇದೀಗ ಒಂದು ಪುಸ್ತಕವಾಗಿ ಇಲ್ಲಿ ಕಾಣಿಸಿಕೊಂಡಿದೆ. ಕವಿತೆಯ ಓದಿನ ಅನುಭವವನ್ನು ಓದುಗರೊಂದಿಗೆ ಹಂಚಿಕೊಳ್ಳುತ್ತಾ ಓದುಗನನ್ನೂ ಬೆಳೆಸುವುದು ಈ ಕೃತಿಯ ಪ್ರಧಾನ ಉದ್ದೇಶ. ಕವಿತೆ ಓದುವಾಗ ಕಂಡುಬರುವ ಅದರ ಲಯ, ಅದರಲ್ಲಿ ಕಂಡುಬರುವ ಪ್ರತಿಮೆ ಮತ್ತು ಪ್ರತೀಕಗಳು, ಧ್ವನಿ, ವ್ಯಕ್ತಿತ್ವ ನಿರಸನತೆ, ಮೊದಲಾದ ಅಂಶಗಳನ್ನು ಇಲ್ಲಿ ಸಮಾಧಾನದಿಂದ ಆದರೆ ಉತ್ಸಾಹದಿಂದ, ಸಾಮಾನ್ಯ ಓದುಗನಿಗೂ ಅರ್ಥವಾಗುವಂತೆ ವಿವರಿಸಲಾಗಿದೆ. ಈ ವಿವರಣೆಯಲ್ಲಿ ಕನ್ನಡದ ಮಹತ್ವದ ಕವಿಗಳಾದ ಬೇಂದ್ರೆ, ರಾಮಾನುಜಂ, ರಾಜರತ್ನಂ, ಮುದ್ದಣ, ಕೀಟ್ಸ್, ಗಂಗಾಧರ ಚಿತ್ತಾಲ, ಮೊದಲಾದವರೆಲ್ಲ ಪ್ರಾಸಂಗಿಕವಾಗಿ ಬಂದುಹೋಗುತ್ತಾರೆ. ಹಾಗೆಯೇ ಭಾರತೀಯ ಕಾವ್ಯಮೀಮಾಂಸೆಯ ಪ್ರಧಾನ ಚರ್ಚೆಗಳಾದ ಧ್ವನಿಸಿದ್ಧಾಂತ, ರಸಸಿದ್ಧಾಂತ ಮೊದಲಾದವು ಕೂಡ ಓದುಗರಿಗೆ ಪರಿಚಯವಾಗುತ್ತದೆ. ನಡುನಡುವೆ ಸಾಹಿತಿಗಳ ಮಧ್ಯೆ ಇದ್ದ ಸಂಬಂಧಗಳು ಹಸನಾಗಿ ತೆರೆದುಕೊಳ್ಳುತ್ತವೆ. ಈ ಪುಸ್ತಕವು ಕಾವ್ಯವನ್ನು ಅರ್ಥಮಾಡಿಕೊಳ್ಳ ಬಯಸುವವರಿಗೆ ಒಂದು ಕೈಪಿಡಿಯಂತೆ ಕೆಲಸ ಮಾಡುತ್ತದೆ.


– ಡಾ. ಪುರುಷೋತ್ತಮ ಬಿಳಿಮಲೆ

ಇಲ್ಲಿನ ಲೇಖನಗಳು ಕಾವ್ಯದ ಬಗೆಗಿನ ವೃತ್ತಪತ್ರಿಕೆಯಲ್ಲಿ ಪ್ರಕಟವಾದ ಬರಹಗಳಾದರೂ ಈ ಕೃತಿಗೆ Monograph ನ ರಚನೆ, ಸ್ವರೂಪ (Structure) ಇದೆ. ಕವನವನ್ನು ಓದುವುದು ಹೇಗೆ ಎಂಬ ಸವಾಲಿಗೆ ಓದುಗನನ್ನು ಸಜ್ಜುಗೊಳಿಸಲು ಬೇಕಾಗಿರುವ ತಾತ್ವಿಕ ಪರಿಕರಗಳನ್ನು ಕೊಡುವ ಪ್ರಯತ್ನ ಪ್ರೊ. ಆಚಾರ್ಯ ಅವರದು. ಹಾಗಾಗಿ ಲೇಖನಗಳು ಒಂದಕ್ಕೊಂದು ಸಂಬಂಧ ಹೊಂದಿವೆ. ಹಾಗೂ ಪೂರಕವಾಗಿ ಕೆಲಸ ಮಾಡುತ್ತವೆ. ಆಂಗ್ಲಸಾಹಿತ್ಯ ಪ್ರಾಧ್ಯಾಪಕರಾದ ಪ್ರೊ. ಆಚಾರ್ಯ ಅವರಿಗೆ ತಾತ್ವಿಕ ಪ್ರಶ್ನೆಗಳನ್ನು ಸರಳವಾಗಿ ನಿರೂಪಿಸಿ, ಉದಾಹರಣೆಗಳ ಮೂಲಕ ಸ್ಪಷ್ಟಪಡಿಸುವ ಶಕ್ತಿ ಇದೆ. ಇದರ ಮೂಲಕ ಆಧುನಿಕ ಕನ್ನಡ ಮತ್ತು ಆಂಗ್ಲಸಾಹಿತ್ಯಗಳ ಸಾಮ್ಯತೆ, ಭಿನ್ನತೆಗಳನ್ನು ಚೆನ್ನಾಗಿ ನಿರ್ವಹಿಸುತ್ತಾರೆ. ಕ್ಲಿಷ್ಟ ವಿಚಾರಗಳನ್ನು ಸರಳವಾಗಿ ತರಗತಿಯೊಳಗೆ ವಿವರಿಸುವ ಅದ್ಭುತ ಅಧ್ಯಾಪಕನ ಧ್ವನಿಯೊಂದು ಅವರ ಬರಹದಲ್ಲಿದೆ. ಛಂದಸ್ಸು, ಭಾಷೆಯ ಬಳಕೆ, ಲಯ, ಧ್ವನಿ, ಪ್ರತಿಮೆ ಹೀಗೆ ಹಲವು ವಿಚಾರಗಳನ್ನು ಓದುಗರ ಮುಂದಿಡುತ್ತಾರೆ. ಪ್ರತಿಯೊಬ್ಬ ಕನ್ನಡ ಸಾಹಿತ್ಯದ ವಿದ್ಯಾರ್ಥಿಯು ಓದಲೇಬೇಕಾಗಿರುವ ಕೃತಿ ಇದು.

– ಡಾ. ಪೃಥ್ವಿದತ್ತ ಚಂದ್ರ ಶೋಭಿ

ಈ ಲೇಖಕರು ನುರಿತ, ಪರಿಣಾಮಕಾರಿ ಆಧ್ಯಾಪಕರು ಎಂಬುದನ್ನು, ಕಾವ್ಯರಸಾಸ್ವಾದನೆಯಲ್ಲಿ ವಿಶೇಷ ಕಾಣುವವರು ಎಂಬುದನ್ನು ಈ ಪುಸ್ತಕ ಉದ್ದಕ್ಕೂ ಸಾಬೀತುಪಡಿಸುತ್ತದೆ. ನಿರೂಪಣೆ ಉದ್ದಕ್ಕೂ ಸುಲಲಿತವೂ ಸ್ಫುಟವೂ ಆಗಿದೆ. ಪಾರಿಭಾಷಿಕ ಪದಗಳ ಹೆಚ್ಚಿನ ಹಂಗಿಲ್ಲದೆ, ಸಾಮಾನ್ಯ ಓದುಗರಿಗೂ ವಿದ್ಯಾರ್ಥಿಗಳಿಗೂ ಅಧ್ಯಾಪಕರುಗಳಿಗೂ ಅಪ್ಯಾಯಮಾನ ಎನಿಸುವಂತಿದೆ. ಪೇಜಾವರ ಸದಾಶಿವರಾಯರು ಮತ್ತು ನಂದಳಿಕೆ ಲಕ್ಷ್ಮೀನಾರಣಪ್ಪ (ಮುದ್ದಣ) ಇವರ ಸೂಕ್ಷ್ಮ ಹೊಸ ಓದು ಅವರಿಬ್ಬರಿಗೂ ಸಲ್ಲಬೇಕಾದ ಹೊಚ್ಚಹೊಸ ಗೌರವವನ್ನು ಸಲ್ಲಿಸಿದೆ; ಇಲ್ಲಂತೂ ಬರವಣಿಗೆ ಬಹಳ ಚೇತೋಹಾರಿಯಾಗಿದೆ. ಇದೊಂದು ಸಾಹಿತ್ಯಾಸಕ್ತರು ಓದಲೇಬೇಕಾದ ಪುಸ್ತಕ.

– ಡಾ. ಎಚ್. ಪಟ್ಟಾಭಿರಾಮ ಸೋಮಯಾಜಿ



ಹಾರದಿರಲಿ ಪ್ರಾಣಪಕ್ಷಿ

ಹ.ಸ. ಬ್ಯಾಕೋಡ

ಪ್ರಕಾಶಕರು: ಶ್ರೀ ಅಮ್ಮ ಪ್ರಕಾಶನ
ಸರಸ್ವತಿ ನಿಲಯ, ತಿಮ್ಮಯ್ಯ ಕಾಂಪೌಂಡ್
ಹಿಮ್ಮಡಿಹಳ್ಳಿ ಮುಖ್ಯರಸ್ತೆ, ವೈಟ್‌ಫೀಲ್ಡ್,
ಬೆಂಗಳೂರು–66
ಪ್ರಥಮ ಮುದ್ರಣ : 2013
ಪುಟಗಳು : 90, ಬೆಲೆ ರೂ. 70/-

ಬೆಂಗಳೂರಿನಂಥ ಪ್ರತಿದಿನವೂ ಬದಲಾವಣೆಗೆ ಹೊರಳುತ್ತಿರುವ ಶಹರದಲ್ಲಿ ಮರ, ಹಸಿರಿನ ಸಹಜ ಪ್ರಕೃತಿ, ಆಶ್ರಯಿಸುವ ಪಕ್ಷಿಗಳು ಪಡುವ ಪಾಡು ಈ ಕಾದಂಬರಿಯಲ್ಲಿ ಕಥೆಯಾಗಿ ಹರವಿಕೊಂಡಿದೆ. ಲಾಲ್‌ಬಾಗ್, ಕಬ್ಬನ್‌ಪಾರ್ಕ್, ವಿಲ್ಸನ್ ಗಾರ್ಡನ್ ಹೀಗೆ ಹಲವಾರು ಕಡೆ ಮರಗಳನ್ನು ಉರುಳಿಸುವ, ಮೆಟ್ರೋ ರೈಲಿಗಾಗಿ ದಾರಿಮಾಡಿಕೊಳ್ಳುವ ಸದ್ಯದ ವಿದ್ಯಮಾನವನ್ನೆ ವಸ್ತುವಾಗಿಸಿಕೊಂಡ ಕಥೆಯಲ್ಲಿ ಅಲ್ಲಿನ ದಟ್ಟವಾಗಿ, ವಿಶಾಲವಾಗಿ ಹರಡಿದ ಮರಗಳಲ್ಲಿ ಕುಟುಂಬ ಕುಟುಂಬವಾಗಿ ಜೀವ ಕಂಡುಕೊಂಡ ಹಕ್ಕಿಗಳು ಅಲ್ಲಿಂದ ಅನಿವಾರ್ಯವಾಗಿ ಜಾಗ ಬದಲಾಯಿಸುವ, ಪಡುವ ಬವಣೆ ಭಾವನಾತ್ಮಕವಾಗಿ ಕಲಕುವಂತೆ ಚಿತ್ರಿತವಾಗಿವೆ.

ಹಕ್ಕಿಗಳ ಬದುಕಿನ ಚಿತ್ರಣದ ಮೂಲಕ ಮನುಷ್ಯರ ಬದುಕಿನ ಹಂಬಲ, ನೋವುಗಳನ್ನೇ ಈ ಕಾದಂಬರಿ ಪರೋಕ್ಷವಾಗಿ ಮುಂದಿಟ್ಟಿದೆ. ಮಾನವೀಕರಣ ಗೊಳಿಸಿ ಪ್ರಾಣಿ, ಪಕ್ಷಿಗಳನ್ನು ಬಳಸಿಕೊಂಡು ಕಥೆಗಳನ್ನು ಕಟ್ಟುತ್ತ ಬಂದ ಪರಂಪರೆ ಭಾರತದಲ್ಲಿ ಬಹಳ ಹಿಂದಿನಿಂದಲೇ ಬಂದಿದೆ. ಹಕ್ಕಿಗಳದೇ ಬದುಕು, ಅವುಗಳದೇ ಸಮಸ್ಯೆಗಳು, ನೋವುಗಳು ಇವುಗಳನ್ನೇ ಊಹಿಸಿಕೊಂಡು ಕಲ್ಪಿಸಿಕೊಂಡುದು ಈ ಕಥೆ. ಹೀಗೆ ಕಲ್ಪಿಸಿಕೊಳ್ಳುವಲ್ಲಿ ಮನುಷ್ಯರ ಭಾವಲೋಕವನ್ನೆ

ಪ್ರಧಾನವಾಗಿ ಆಧರಿಸಿರುವುದು ನಮ್ಮನ್ನೆಲ್ಲ ಆತ್ಯಂತಿಕವಾಗಿ ತಟ್ಟಲು ಕಾರಣ ವಾಗಿದೆ.

– **ಡಾ. ಆನಂದ ಪಾಟೀಲ**

ಮನುಷ್ಯನು ಬುದ್ಧಿವಂತನಾದಷ್ಟೂ ಪ್ರಕೃತಿಗೆ ಮಾರಕವಾಗುತ್ತಿರುವುದು ಇವತ್ತಿನ ದುರಂತಗಳಲ್ಲಿ ಒಂದು. ಅತ್ಯಂತ ಸ್ವಾರ್ಥಿಯಾಗಿ ಬದಲಾಗುತ್ತಿರುವ ಮಾನವ ತನ್ನ ಸುಖ, ಸೌಲಭ್ಯಗಳಿಗಾಗಿ ಆಹಾರವನ್ನು, ಜೀವಜಲವನ್ನು, ಪ್ರಾಣವಾಯುವನ್ನು ಅಷ್ಟೇ ಏಕೆ ಜೀವಜಾಲವನ್ನೂ ಹಾಳು ಮಾಡಲು ಹೊರಟಿರುವುದು ಕಣ್ಣ ಮುಂದೆಯೇ ನಡೆಯುತ್ತಿದೆ. ಮೆಟ್ರೋ ರೈಲುಹಾದಿಯ ನಿರ್ಮಾಣಕ್ಕಾಗಿ ಬೆಂಗಳೂರಿನ ಒಂದು ಭಾಗದಿಂದ ಬೇರೆ ಬೇರೆ ಭಾಗಗಳೆಡೆಯಲ್ಲಿ ಕಡಿದು ಕಡಿದು ಮರಗಳ ಮಾರಣ ಹೋಮ ಮಾಡುತ್ತಿರುವುದನ್ನು, ಇಂಥ ಕಾಮಗಾರಿಯಿಂದಾಗಿ ಹಕ್ಕಿಪಕ್ಕಿಗಳ ಬದುಕು, ಭಾವಗಳಿಗೆ ಆಗುತ್ತಿರುವ ಅಪಾರ ಹಾನಿಯನ್ನು ಹ.ಸ. ಬ್ಯಾಕೋಡ ಅವರು ಈ ಕಾದಂಬರಿಯಲ್ಲಿ ಮಾರ್ಮಿಕವಾಗಿ ಚಿತ್ರಿಸಿದ್ದಾರೆ.

ಅವರ ಈ ಕಾದಂಬರಿ ನಾ.ಡಿಸೋಜರ 'ಹಕ್ಕಿಗೊಂದು ಗೂಡು ಕೊಡಿ' ಕಾದಂಬರಿಯಿಂದ ಬಹಳಷ್ಟು ಪ್ರಭಾವವನ್ನು ಪಡೆದಿದ್ದರೂ ಕಥೆಗೆ ಸ್ಥಳೀಯತೆಯನ್ನು ಒದಗಿಸಿ, ಭಿನ್ನರೀತಿಯಲ್ಲಿ ಕಥಾ ನಿರೂಪಣೆಮಾಡಿದ್ದಾರೆ. ಹಕ್ಕಿಗಳಿಗೆ ಉಂಟಾಗುವ ತೊಂದರೆ ತಾಪತ್ರಯಗಳು ಓದುಗರ ಮನಸ್ಸಿಗೆ ನಾಟಿ ಕಣ್ಣುಗಳನ್ನು ಒದ್ದೆಯಾಗಿಸುತ್ತದೆ. ಉದ್ದೇಶಿತ ವಸ್ತು ಆಕರ್ಷಕ ನಿರೂಪಣೆಯೊಂದಿಗೆ ಮನದಲ್ಲಿ ಅಚ್ಚೊತ್ತಿ ನಿಲ್ಲುತ್ತದೆ. ಪುಸ್ತಕದ ರಕ್ಷಾಪುಟ, ಒಳಪುಟಗಳಲ್ಲಿನ ಚಿತ್ರಗಳು ಹಾಗೂ ಬಳಸಿರುವ ಕಾಗದ ಎಲ್ಲ ಆಕರ್ಷಕವಾಗಿವೆ. ಮಕ್ಕಳ ಪುಸ್ತಕದ ಒಂದು ಮಾದರಿ ಎನ್ನುವಂತಿದೆ.

– **ಟಿ.ಎಸ್. ನಾಗರಾಜಶೆಟ್ಟಿ**

ಆಧುನೀಕರಣದ ಭರಾಟೆಯಿಂದ ಅಗಲವಾದ ರಸ್ತೆನಿರ್ಮಾಣ, ಮೆಟ್ರೋ ಕಾಮಗಾರಿ ನಿವೇಶನಗಳ ನಿರ್ಮಾಣದ ಮುಖಾಂತರ ನಮ್ಮ ಪರಿಸರ ನಿತ್ಯ ನಾಶವಾಗುತ್ತಿದೆ. ಒಂದು ಮೆಟ್ರೋ ಬಂದರೆ ಗಿಡಮರ ಸಂಕುಲಕ್ಕೆ ಮತ್ತು ಅದನ್ನು ಆಶ್ರಯಿಸಿಕೊಂಡು ಬದುಕುವ ಜೀವಸಂಕುಲಕ್ಕೆ ಎಷ್ಟು ತೊಂದರೆಯಾಗುತ್ತದೆ ಎಂಬುದನ್ನು ಬೆಂಗಳೂರು ನಗರದ ಮೆಟ್ರೋ ಕಾಮಗಾರಿಯನ್ನು ನೆಪವಾಗಿಟ್ಟುಕೊಂಡು ಕಣ್ಣಿಗೆ ಕಟ್ಟುವಂತೆ, ಮನಕ್ಕೆ ಚುಚ್ಚುವಂತೆ ಹ.ಸ. ಬ್ಯಾಕೋಡ

ಬರೆದಿದ್ದಾರೆ. ಮಕ್ಕಳ ಕಾದಂಬರಿಯಲ್ಲಿ ಪಕ್ಷಿ ಸಂಕುಲನದ ಪರಿಸರವನ್ನು ಬಿಚ್ಚಿ ತೋರಿಸಿದ್ದಾರೆ.

ಇಂದು ನಮ್ಮ ಮಕ್ಕಳಿಗೆ ಗುಬ್ಬಿ ಎಂದರೆ ಗೊತ್ತಿಲ್ಲದ ಪರಿಸ್ಥಿತಿ ಒದಗಿಬಂದಿದೆ. ಹೊನ್ನಕ್ಕಿ, ಶ್ಯಾಮಕ್ಕಿ, ಹಾಲಕ್ಕಿ, ಕಾಜಾಣ, ನೀಲಕಂಠ, ಕುಟಗಿ, ಬಡಗಿ, ಪಾರಿವಾಳಗಳು ಮೊದಲಾದ ಹಕ್ಕಿಗಳ ಹೆಸರುಗಳು ಮಕ್ಕಳಿಗೆ ಹೊಸತೆನಿಸುತ್ತವೆ. ಅಷ್ಟೇ ಏಕೆ ದೊಡ್ಡವರಿಗೂ ಕೂಡ. ಒಂದು ಮರ ಉರುಳಿಬಿದ್ದರೆ ಪಕ್ಷಿ ಸಂಕುಲಕ್ಕೆ ಎಷ್ಟು ಧಕ್ಕೆಯಾಗುತ್ತದೆ ಎಂಬುದನ್ನು ಕರುಳಿಗೆ ಮುಟ್ಟುವಂತೆ ಚಿತ್ರಿಸಿದ್ದಾರೆ. ತನ್ಮೂಲಕ ಮರಗಿಡಗಳನ್ನು ಬೆಳೆಸುವ, ಪರಿಸರವನ್ನು ಉಳಿಸುವ ದಾರಿಗೆ ಮಕ್ಕಳು ನಡೆಯಲಿ ಎಂಬುದೇ ಬ್ಯಾಕೋಡ ಅವರ ಅಪೇಕ್ಷೆ. ಪ್ರಕೃತಿ ಮತ್ತು ಪರಿಸರದ ಕುರಿತು. ಕುತೂಹಲ ಹುಟ್ಟಿಸುವ ಈ ಕೃತಿ ಆಲೋಚನೆಯ ಹರಹನ್ನು ವಿಸ್ತಾರಗೊಳಿಸುತ್ತದೆ.

– ಚಂದ್ರಕಾಂತ ಕರದಳ್ಳಿ



ಕಾಡು ಕಲಿಸುವ ಪಾಠ

ಟಿ.ಎಸ್. ಗೋಪಾಲ್

ಪ್ರಕಾಶಕರು: ನವ ಕರ್ನಾಟಕ ಪಬ್ಲಿಕೇಷನ್ಸ್
ಪ್ರೈವೇಟ್ ಲಿಮಿಟೆಡ್
ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ
ಬೆಂಗಳೂರು–01.
ಪ್ರಥಮ ಮುದ್ರಣ : 2013
ಪುಟಗಳು : 112, ಬೆಲೆ ರೂ. 110/–

ಟಿ.ಎಸ್. ಗೋಪಾಲ್‌ರವರ ಕಾಡು ಕಲಿಸುವ ಪಾಠ, ಪರಿಸರ ಒಂದನ್ನು ವೈಜ್ಞಾನಿಕವಾಗಿ ಪರಿಚಯಿಸುವ ಕೃತಿಯಾಗಿ ಗಮನಸೆಳೆಯುತ್ತದೆ. ಇಡೀ ಕೃತಿ ಜೀವ ಪರಿಸರವನ್ನು ಕಡು ವ್ಯಾಮೋಹದಿಂದ ಪ್ರೀತಿಸುವ ಪರಿಸರ ಪ್ರೇಮಿಯೊಬ್ಬನ ಭಾವತೀವ್ರತೆಯ ಕಥಾನಕದಂತಿದೆ. ಆದರೆ ಈ ಭಾವತೀವ್ರತೆ ಕೇವಲ ಕುರುಡು ಪರಿಸರ ಪ್ರೇಮದಿಂದ ಪ್ರೇರಣೆಗೊಂಡದ್ದಲ್ಲ. ವೈಜ್ಞಾನಿಕ ಸಂಗತಿಗಳಿಂದ ಮುಪ್ಪುರಿಗೊಂಡ ತಾತ್ವಿಕ ಚಿಂತನೆಗಳ ಗಟ್ಟಿ ಅಸ್ತಿಭಾರದಲ್ಲಿ ಪಡಿಮೂಡಿದ ಸೌಧದಂತೆ ಕಾಣುತ್ತದೆ. ಅದಕ್ಕೆ ಕೃತಿಯಲ್ಲಿ ಸಾಕಷ್ಟು ವಿವರಗಳು ದೊರಕುತ್ತವೆ.

ಓದುಗನನ್ನು ನೇರವಾಗಿಯೇ ಸಂವಾದಕ್ಕೆಳೆಯುವಂತಹ, ನಿರೂಪಣೆಯಲ್ಲಿ ಕಾಡಿನ ಅಂತರಂಗದ ವಿವರಗಳು ದಕ್ಕುತ್ತಾ ಹೋಗುವುದು ಈ ಕೃತಿಯ ಹೆಚ್ಚುಗಾರಿಕೆ. ಕಾಡಿನ, ವನ್ಯಜೀವಿಗಳ, ಜೀವವೈವಿಧ್ಯದ ಬಗ್ಗೆ ಸಾಮಾನ್ಯ ಜನರಿಗಿರುವ ಮರೆವುಗಳನ್ನು ಹೇಳುತ್ತಲೇ ಜೀವಲೋಕದ ಸಂಕೀರ್ಣ ಸಂಬಂಧಗಳನ್ನು ಲೇಖಕರು ಅನಾವರಣಗೊಳಿಸುತ್ತಾರೆ. ಇದಕ್ಕೆ ಅವರು ತಮ್ಮ ಅನುಭವಗಳಿಂದಲೇ ದೃಷ್ಟಾಂತಗಳನ್ನು ನೀಡುವುದು ಈ ಕೃತಿಗೆ ಹೆಚ್ಚು ವೈಜ್ಞಾನಿಕ ನಿಖರತೆಯನ್ನು ತಂದುಕೊಟ್ಟಿದೆ. ಕಾಡಿನ ಚಾರಣವು, ಅರಣ್ಯದೊಳಗಣ ಅನೂಹ್ಯ ಸತ್ಯಗಳನ್ನು ಬಯಲಿಗೆಳೆಯುವುದು ಬೆರಗುಗೊಳಿಸುವಂತೆ ಇಲ್ಲಿ ನಿರೂಪಣೆಗೊಂಡಿದೆ.

– ಡಾ. ಕೆ. ಪುಟ್ಟಸ್ವಾಮಿ

ಕಾಡು ಕಲಿಸುವ ಪಾಠ ವನ್ಯಜೀವಿ ಸಂರಕ್ಷಣೆಯಲ್ಲಿ ತಮ್ಮ ವೃತ್ತಿಜೀವನ ಕಳೆದ ಮತ್ತು ಇಂದಿಗೂ ಮಕ್ಕಳಲ್ಲಿ ಪರಿಸರ ಪ್ರಜ್ಞೆ, ಅರಣ್ಯ ಮತ್ತು ವನ್ಯಜೀವಿ ಸಂರಕ್ಷಣೆಯ ಅಗತ್ಯ ಮತ್ತು ಅನಿವಾರ್ಯತೆಗಳನ್ನು ಪರಿಚಯಿಸಿ ಅವರನ್ನು ಈ ಕಾರ್ಯದಲ್ಲಿ ತೊಡಗಿಕೊಳ್ಳುವಂತೆ ಮಾಡಬೇಕೆಂಬ ಮಹದಾಸೆಯಿಂದ ನಿಸರ್ಗ ಶಿಕ್ಷಣಕ್ಕೆ ತಮ್ಮನ್ನು ತಾವು ಸಮರ್ಪಿಸಿಕೊಂಡು ವ್ರತನಿಷ್ಠೆಯಿಂದ ಕಾರ್ಯನಿರ್ವಹಿಸುತ್ತಿರುವ ಕೋಟ್ರಂಗಡ ಚಿಣ್ಣಪ್ಪನವರ ಸ್ಲೈಡ್‌ಶೋ ಮತ್ತು ಅವರ ಪ್ರಕೃತಿ ಶಿಬಿರಗಳ ಚಟುವಟಿಕೆಗಳನ್ನು ವಿವರಿಸುವ ಮಾದರಿ ಲೇಖನಗಳ ಸಂಗ್ರಹ. ಟಿ.ಎಸ್.ಗೋಪಾಲ್ ಈ ಕೃತಿಯ ಲೇಖಕರು. ಸೇವಾವ್ರತಿಯಾಗಿ ಅತ್ಯಂತ ವೃತ್ತಿಪರ ಅರಣ್ಯ ಸಂರಕ್ಷರಾಗಿ ನಿಸರ್ಗ ಚಟುವಟಿಕೆಗಳನ್ನು ಗೋಪಾಲ್ ಪುಸ್ತಕ ರೂಪಕ್ಕಿಳಿಸಿದ್ದಾರೆ. ಚಿಣ್ಣಪ್ಪನವರ ಅನುಭವಗಳನ್ನು ಅವರ ನಿರೂಪಣಾ ಶೈಲಿಯಲ್ಲಿಯೇ ಪರಿಚಯಿಸುವ ಪ್ರಯತ್ನ ಈ ಕೃತಿಯಲ್ಲಿದೆ.

ಮನುಷ್ಯ ತನ್ನನ್ನು ತಾನೆ ಸರ್ವಶ್ರೇಷ್ಠ ಎಂದು ಘೋಷಣೆ ಮಾಡಿಕೊಂಡು ಅಹಂಕಾರಿಯಾಗಿ ಮೆರೆಯುತ್ತಿದ್ದಾನೆ. ಉಳಿದೆಲ್ಲಾ ಪ್ರಾಣಿಗಳು ತಾವಿರುವ ಪರಿಸರಕ್ಕೆ ಹೊಂದಿಕೊಂಡು ಬದುಕಲು ಯತ್ನಿಸುತ್ತವೆ. ಆದರೆ ತನ್ನ ಅನುಕೂಲಕ್ಕೆ ತಕ್ಕಂತೆ ಪರಿಸರವನ್ನು ಬದಲಿಸಿಕೊಳ್ಳುವ ಶಕ್ತಿಯಿರುವುದು ಮನುಷ್ಯನಿಗೆ ಮಾತ್ರ ಎಂಬ ಸತ್ಯವನ್ನು ಮಕ್ಕಳಿಗೆ ಮನವರಿಕೆ ಮಾಡಿಕೊಡುವ ಅವರ ಕ್ರಮ ಅನನ್ಯವಾಗಿದೆ.

– ಸಿ. ಯತಿರಾಜು

ಈಚೀನ ದಿನಗಳಲ್ಲಿ ಪ್ರಕೃತಿ ವಿಕೋಪಗಳಿಂದ ಕಂಗೆಟ್ಟಿರುವ ಮಾನವ ನಿಸರ್ಗದ ಅಭ್ಯಾಸ, ರಕ್ಷಣೆ, ಅದಕ್ಕೆ ಅಗತ್ಯವಾದ ಶಿಕ್ಷಣದತ್ತ ಒಲವು ತೋರಿಸುತ್ತಿದ್ದಾನೆ. ವನ್ಯಜೀವಿಗಳ ಕಾಡು ಮೇಡುಗಳಲ್ಲಿ ಚಾರಣ ಮಾಡುವವರ ಸಂಖ್ಯೆಯೂ ಬೆಳೆಯುತ್ತಿದೆ. ಅದರಲ್ಲೂ ಮಕ್ಕಳಿಗೆ ಸಣ್ಣ ವಯಸ್ಸಿನಲ್ಲೆ ಈ ಹವ್ಯಾಸದ ಗೀಳು ಹಿಡಿಸಿದರೆ ಅವರು ಮುಂದೆ ಉತ್ತಮ ಪರಿಸರ ಪ್ರೇಮಿಗಳಾಗುತ್ತಾರೆ. ಅವರ ಬದುಕಿನಲ್ಲಿ ಶಿಸ್ತು, ಹೊಂದಿಕೊಂಡು ಬದುಕುವ ಮನೋಭಾವ ಮೂಡುತ್ತದೆ. ಯಾವುದನ್ನು ತಪ್ಪಾಗಿ 'ಜಂಗಲ್ ಲಾ' ಎಂದು ತಾತ್ಸಾರದಿಂದ ತಳ್ಳಿಹಾಕುತ್ತೇವೆಯೋ ಅಂತಹ ಕಾಡಿನ ಪ್ರಾಣಿಗಳಲ್ಲಿನ ಅಚ್ಚುಕಟ್ಟಾದ ಬದುಕಿನ ಅನುಭವವಾಗುತ್ತದೆ. ಇಂತಹ ಚಾರಣದ ಹವ್ಯಾಸವನ್ನು ಗೋಪಾಲ್ ಮೇಷ್ಟ್ರು ಅತ್ಯಂತ ರೋಚಕವಾಗಿ, ಸರಳ ಕನ್ನಡದಲ್ಲಿ ವಿವರಿಸಿದ್ದಾರೆ. ಒಮ್ಮೆ ಕೈಗೆತ್ತಿಕೊಂಡರೆ ಇಡೀ ಪುಸ್ತಕವನ್ನು ಓದಿ ಮುಗಿಸುವವರೆಗೆ ಕೆಳಕ್ಕಿಡುವ ಮನಸ್ಸಾಗುವುದಿಲ್ಲ.

ಕೇವಲ ಮಾಹಿತಿಗಳ ಭಾರದಿಂದ ತೂಕಡಿಕೆ ಬರಿಸುವ ಬದಲು ಎಲ್ಲಿಯೂ ಮಾಹಿತಿಗಳನ್ನು ಕೈ ಬಿಡದೆ ಕಾಡಿನ ವಿಹಾರದಲ್ಲಿ ಅನುಭವಕ್ಕೆ ಬರುವ ರೋಚಕ ಸನ್ನಿವೇಶಗಳನ್ನು ಖಚಿತವಾದ ಸ್ಪಷ್ಟ ಮಾತುಗಳಲ್ಲಿ ನಿರೂಪಣೆ ಮಾಡಲಾಗಿದೆ. ಒಟ್ಟಿನಲ್ಲಿ ಚಾರಣ ಪ್ರಿಯರಿಗೆ ಇದೊಂದು ಉತ್ತಮ ಕೈಪಿಡಿ.

– ಎಚ್. ಆರ್. ರಾಮಕೃಷ್ಣರಾವ್



ಎಂದೂ ಮುಗಿಯದ ಯುದ್ಧ

ಡಾ. ಎನ್. ಜಗದೀಶ್ ಕೊಪ್ಪ

ಪ್ರಕಾಶಕರು: ಸ್ವಪ್ನ ಬುಕ್ ಹೌಸ್ ಪ್ರೈ.ಲಿ.
ನಂ-11, 3ನೇ ಮುಖ್ಯರಸ್ತೆ
ಗಾಂಧಿನಗರ
ಬೆಂಗಳೂರು-09.
ಪ್ರಥಮ ಮುದ್ರಣ : 2013
ಪುಟಗಳು : 228, ಬೆಲೆ ರೂ. 130/-

ಭಾರತದಲ್ಲಿ ನಕ್ಸಲ್ ಚಳುವಳಿಯ ಚರಿತ್ರೆಯನ್ನು ಅವಲೋಕಿಸುತ್ತಾ ಹಿಂಸಾ ಮಾರ್ಗದ ಸಮಸ್ಯೆಗಳನ್ನು ಬಿಚ್ಚಿಟ್ಟು ಅದನ್ನು ತೊರೆಯಲು ಪ್ರೇರಣೆ ನೀಡುವ ಕೃತಿ ಇದಾಗಿದೆ. ನಕ್ಸಲ್ ಚಳುವಳಿಗೆ ವಿದ್ಯಾವಂತರು ಯಾಕೆ ಕೈ ಜೋಡಿಸಿದ್ದಾರೆ ಎಂಬುದನ್ನು ಸಹ ಎಳೆಎಳೆಯಾಗಿ ವಿಶ್ಲೇಷಿಸಲಾಗಿದೆ. ಹೆಚ್ಚಿನ ಓದಿಗೆ ಅಗತ್ಯವಿರುವ ಗ್ರಂಥ ಸೂಚಿಯ ಪಟ್ಟಿಯನ್ನು ನೀಡಲಾಗಿದೆ.

ನಿಖರ ಅಂಕಿ ಅಂಶಗಳು, ವಸ್ತುನಿಷ್ಠ ವಿಮರ್ಶೆ ಮತ್ತು ಸೂಕ್ಷ್ಮವಾಗಿ ವಿಷಯವನ್ನು ನಿಭಾಯಿಸಿದ ರೀತಿಯಿಂದಾಗಿ ಪುಸ್ತಕದ ಘನತೆ ಹೆಚ್ಚಾಗಿದೆ.

– ಡಾ. ರಾಬರ್ಟ್ ಜೋಸ್

ಈ ಕೃತಿಯು ನಕ್ಸಲಿಸಂ ಹುಟ್ಟಿಕೊಂಡ ಕಾಲ ಸಂದರ್ಭ, ಅದಕ್ಕೆ ಕಾರಣ, ಪ್ರೇರಣೆ, ಸೈದ್ಧಾಂತಿಕ ನಿಲುವುಗಳು, ಸಮಸ್ಯೆ ಸವಾಲುಗಳು ಈ ಮುಂತಾದವುಗಳನ್ನು ವಿವರಿಸುವುದೇ ಇದರ ಕೇಂದ್ರ ವಸ್ತು. ಆರಂಭದಿಂದ ಅಂತ್ಯದವರೆಗೆ ನಕ್ಸಲ್ ಹೋರಾಟವು ಜಮೀನ್ದಾರರ ವಿರುದ್ಧ ನಡೆಸಿದ ರೋಚಕ ಕಥನಗಳನ್ನು ಬಿತ್ತರಿಸುತ್ತದೆ. ಪೊಲೀಸರ ಗುಂಡಿಗೆ ನಿರಪರಾಧಿಗಳು ಬಲಿಯಾದ ಕರುಣಾಜನಕ ಕಥೆ ಮತ್ತು


ನಕ್ಸಲರ-ಜಮೀನ್ದಾರರ ಮಧ್ಯದ ರಕ್ತಸಿಕ್ತವಾದ ಹಿಂಸಾತ್ಮಕ ಚರಿತ್ರೆಯನ್ನು ಸವಿವರವಾಗಿ ಈ ಕೃತಿ ದಾಖಲಿಸಿದೆ. ಕಥನ ಓದುಗರ ಮನ ಮಿಡಿಯುವಂತೆ ಲೇಖಕರು ನಿರೂಪಿಸಿದ್ದಾರೆ. ವಿಶಿಷ್ಟ ಅನುಭವನಗಳನ್ನು ಕೊಡುವ ಕೃತಿ ಇದಾಗಿದೆ.

– ಡಾ. ಲಿಂಗಪ್ಪ ಗೋನಾಲ

ಡಾ. ಎನ್. ಜಗದೀಶ್ ಕೊಪ್ಪ ಅವರು ನಕ್ಸಲ್ ಎಂದರೇನು? ನಕ್ಸಲಿಸಂ ಎಂದರೇನು? ಎಲ್ಲಿಂದ ಶುರುವಾಯಿತು, ಹೇಗೆ ಶುರುವಾಯಿತು? ಅದರ ಗುರಿ ಏನು? ಅದರ ಮುಂದಿರುವ ಸವಾಲುಗಳೇನು? ಹೀಗೆ ಪ್ರತಿಯೊಂದು ಪ್ರಶ್ನೆಗಳನ್ನು ಮುಂದಿಟ್ಟುಕೊಂಡು ನಕ್ಸಲ್ ಪೀಡಿತ ಪ್ರದೇಶಗಳನ್ನೆಲ್ಲ ಸುತ್ತಾಡಿ “ಎಂದೂ ಮುಗಿಯದ ಯುದ್ಧ” ಕೃತಿಯನ್ನು ರಚಿಸಿದ್ದಾರೆ. ನಕ್ಸಲ್ ರಣರಂಗವನ್ನು ಕಣ್ಣಾರೆ ಕಂಡು ಯುದ್ಧವನ್ನು ಸ್ಥಾಯಿಭಾವಗೊಳಿಸಿ ಆತಂಕಗೊಂಡಿದ್ದಾರೆ.

ನಕ್ಸಲರಕುರಿತಾಗಿ ಸ್ವಯಂ ಲೇಖಕರಲ್ಲೆ ಅನುಕಂಪ ಇದ್ದಾಗ್ಯೂ-ನಿರ್ಧಾರದ ವಿಷಯದಲ್ಲಿ ಅವರ ನಿಲುವು ನಿರ್ದಾಕ್ಷಿಣ್ಯದಿಂದಕೂಡಿದೆ.

– ಆರ್. ಸ್ವಾಮಿ ಆನಂದ್



ಮೈಯೇ ಸೂರು ಮನವೇ ಮಾತು

ಬಸವರಾಜ ಕಲ್ಗುಡಿ

ಪ್ರಕಾಶಕರು: ಅಭಿನವ ಪ್ರಕಾಶನ
7/18–2, ಮೊದಲನೆಯ ಮುಖ್ಯರಸ್ತೆ,
ಮಾರೇನಹಳ್ಳಿ, ವಿಜಯನಗರ,
ಬೆಂಗಳೂರು–40
ಪ್ರಥಮ ಮುದ್ರಣ : 2013
ಪುಟಗಳು : 370, ಬೆಲೆ ರೂ. 275/–

ಈ ಕೃತಿಯ ಲೇಖನಗಳನ್ನು ಗಮನಿಸಿದರೆ ಸಾಂಸ್ಕೃತಿಕ ಸಂಶೋಧನೆ ಅಡಿ ಈ ಕೃತಿಯನ್ನು ಗಮನಿಸಬಹುದಾಗಿದೆ. ಬರವಣಿಗೆ, ಲೇಖಕರ ಸಾಂಸ್ಕೃತಿಕ ತಿಳುವಳಿಕೆ, ವಿಮರ್ಶಾತ್ಮಕ ವಿಶ್ಲೇಷಣೆಗಳು ಗಮನಾರ್ಹವಾಗಿವೆ. ಸಂಶೋಧನಾ ಕ್ಷೇತ್ರದ ಬಹುಮಾನಕ್ಕಾಗಿ ಗಣಿಸಬಹುದಾದ ಕೃತಿಯಾಗಿದೆ.

– ಡಾ. ವೀರಣ್ಣ ದಂಡೆ

ಇಲ್ಲಿ ಚರ್ಚೆಗೆತ್ತಿಕೊಂಡಿರುವ ವಿಷಯಗಳು ಹಲವಾರು. ಅವುಗಳನ್ನು ಪಟ್ಟಿ ಮಾಡುವ ಬದಲು ಅವು ಇಡಿಯಾಗಿ ಭಾಷೆ, ಸಾಹಿತ್ಯ, ಸಂಸ್ಕೃತಿ ಮತ್ತು ಇವುಗಳನ್ನು ಒಟ್ಟಾಗಿ ಗ್ರಹಿಸಬೇಕಾದ ಗ್ರಹಿಕೆಯ ಕ್ರಮಗಳನ್ನು ಕುರಿತವು ಎನ್ನಬಹುದು. ತಾತ್ವಿಕ ಆಳದ ವ್ಯಾಖ್ಯಾನಪ್ರಧಾನ ಬರಹಗಾರರಾದ ಲೇಖಕರು ವಿಷಯಗ್ರಹಿಕೆ, ವಿಶ್ಲೇಷಣೆ, ಮಂಡನೆ ಮತ್ತು ಮೌಲ್ಯಮಾಪನದ ಒಟ್ಟಾರೆ ಪ್ರಕ್ರಿಯೆಯಲ್ಲಿ ಒಂದು ಖಚಿತವಾದ ಸಮತೋಲನವನ್ನು ಕಾಯ್ದುಕೊಂಡಿದ್ದಾರೆ.

ಚರ್ಚೆಗೆತ್ತಿಕೊಳ್ಳುವ ವಸ್ತು ವಿಷಯವನ್ನು ಉತ್ಪಾದಿತ ಸರಕು ಎಂದು ಭಾವಿಸದೆ, ಅದರೊಳಗಿನ ವೈರುಧ್ಯಾತ್ಮಕ ಚಲನಶೀಲತೆಗಳನ್ನು ಗುರುತಿಸುವ,

ಪರಿಶೀಲಿಸುವ, ಅದರ ಹಿಂದಿನ ಪ್ರಭಾವ ಮತ್ತು ಮುಂದಿನ ಪರಿಣಾಮಗಳ ನಾನಾ ಮಗ್ಗಲುಗಳನ್ನು ವಿಶ್ಲೇಷಿಸಿ, ವ್ಯಾಖ್ಯಾನಿಸುವ ಮಾದರಿ ಇಲ್ಲಿನ ಬರಹಗಳಲ್ಲಿದೆ. ಅನುಭವವು ಅರಿವಾಗುವ, ಆ ಅರಿವಿನ ಮೂಲಕ ಅನುಭವಗಳನ್ನು ಭಾಷಿಕವಾಗಿ ಗ್ರಹಿಸುವ ಪ್ರಕ್ರಿಯಾ ಮೀಮಾಂಸೆ ಈ ಬರಹಗಳ ಹಿಂದಿನ ಮುಖ್ಯ ಚಾಲಕ ಶಕ್ತಿಯಾಗಿದೆ.

– ಡಾ. ಬಿ. ಎಂ. ಪುಟ್ಟಯ್ಯ

ಡಾ. ಬಸವರಾಜ ಕಲ್ಗುಡಿಯವರ ಈ ಕೃತಿಯು ಸಂಸ್ಕೃತಿ ಮತ್ತು ಸಾಹಿತ್ಯವನ್ನು ಕುರಿತಾದ ಲೇಖನಗಳ ಸಂಕಲನವಾಗಿದೆ. ಇಲ್ಲಿಯ ಬಹುಪಾಲು ಲೇಖನಗಳು ಆಳವಾದ ಅಧ್ಯಯನ ಮತ್ತು ಚಿಂತನೆಯ ಫಲವಾಗಿ ರೂಪಗೊಂಡಿವೆ. ಸೂಕ್ಷ್ಮವಾದ ಒಳನೋಟಗಳನ್ನು ಹೊಂದಿರುವ ಲೇಖನಗಳು ವ್ಯಾಖ್ಯಾನಮುಖಿ ಸಂಶೋಧನೆಯ ಮಾದರಿಗೆ ಸೇರುತ್ತವೆ. ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಗೆ ಸಂಬಂಧಿಸಿದಂತೆ ವಿವಿಧ ಸಂಗತಿಗಳ ಬಗ್ಗೆ ಲೇಖಕ ಮೂಲ ಆಕರಗಳ ರೂಪನಿಷ್ಠ ಶೋಧಕ್ಕಿಂತ ಹೆಚ್ಚಾಗಿ ಗುಣನಿಷ್ಠ ಶೋಧದ ಕಡೆಗೆ ಗಮನಕೊಟ್ಟಿದ್ದಾರೆ. ಕನ್ನಡದ ಜ್ಞಾನಚಿಂತನೆಯ ದೃಷ್ಟಿಯಿಂದ ಇಲ್ಲಿನ ಲೇಖನಗಳು ಮೌಲಿಕವೆನಿಸುತ್ತವೆ.

– ಡಾ. ಮಹೇಶ ಚಿಂತಾಮಣಿ

ಅನುವಾದ -1 (ಸೃಜನಶೀಲ)



ಬೇಗುದಿ (ಕಾದಂಬರಿ)

ಅನು: ಡಾ. ಆರ್. ಲಕ್ಷ್ಮೀನಾರಾಯಣ

ಇಂಗ್ಲಿಷ್ ಮೂಲ: ಕಿರಣ್ ನಗರ್‌ಕರ್

ಪ್ರಕಾಶಕರು: ಕೇಂದ್ರ ಸಾಹಿತ್ಯ ಅಕಾಡೆಮಿ
ರವೀಂದ್ರ ಭವನ, 35,
ಫಿರೋಜ್ ಷಾ ರಸ್ತೆ
ನವದೆಹಲಿ–110001.
ಪ್ರಥಮ ಮುದ್ರಣ : 2013
ಪುಟಗಳು : 700 ಬೆಲೆ ರೂ. 350/–

ಕಿರಣ್ ನಗರ್‌ಕರ್ ಅವರ ಬೃಹತ್ ಕಾದಂಬರಿ 'ಕಕೋಲ್ಡ್'ನ ಅನುವಾದ ಆರ್. ಲಕ್ಷ್ಮೀನಾರಾಯಣರವರ ಲೇಖನಿಯಲ್ಲಿ 'ಬೇಗುದಿ'ಯಾಗಿ ಹೊರಹೊಮ್ಮಿದೆ. ಭಾರತೀಯ ಇತಿಹಾಸದ ೧೬ನೇ ಶತಮಾನದ ಪ್ರಕ್ಷುಬ್ಧ ಕಾಲಘಟ್ಟದಲ್ಲಿ ಮೇವಾಡದ ಅರಮನೆಯಲ್ಲಿ ನಡೆಯುವ ರಾಜಕಾರಣದ ಘಟನೆಗಳು, ಆಗುಹೋಗುಗಳು ಚಿತ್ರಿತವಾಗಿವೆ. ಜೊತೆಗೆ ಮೊಗಲ ಸಾಮ್ರಾಜ್ಯದ ಸ್ಥಾಪನೆಗಾಗಿ ಬಾಬರ ನಡೆಸಿದ ಪ್ರಯತ್ನಗಳೆಲ್ಲವನ್ನೂ ನಿರೂಪಿಸಲಾಗಿದೆ.

ಈ ಕಾದಂಬರಿ ಅನುವಾದದಲ್ಲಿ ಕಂಡು ಬರಬಹುದಾದ ತೊಡಕುಗಳನ್ನು ನಿವಾರಿಸಿಕೊಂಡು ಸುಲಲಿತವಾದ ಶೈಲಿಯಲ್ಲಿ, ಸುಲಭವಾಗಿ ಓದಿಸಿಕೊಂಡು ಹೋಗುವ ಪರಿ ಪ್ರಶಂಸನೀಯ. ಬೇಸರ ತರಿಸುವ ಐತಿಹಾಸಿಕ ಘಟನೆಗಳಷ್ಟೇ ಆಗದೇ ಇದನ್ನು ಕಾದಂಬರಿ ರೂಪದಲ್ಲಿ ತಂದಿರುವ ವಿಧಾನವು ಅನುವಾದದಲ್ಲೂ ಕಂಡುಬರುವುದು ಇಲ್ಲಿಯ ವೈಶಿಷ್ಟ್ಯವಾಗಿದೆ. ಇಂಗ್ಲಿಷಿನಲ್ಲಿ ಉತ್ಕೃಷ್ಟ ಕಾದಂಬರಿಯಾಗಿರುವ ಈ ಕೃತಿ ಸಮರ್ಥ ಅನುವಾದದಿಂದಾಗಿ ಕನ್ನಡದ ಪ್ರಮುಖ ಅನುವಾದಿತ ಕಾದಂಬರಿಗಳ ಪಟ್ಟಿಯಲ್ಲಿ ಸ್ಥಾನ ಪಡೆಯುತ್ತದೆ.


– ಪ್ರೊ. ಎಂ.ಎಸ್. ರಘುನಾಥ್

ಲೇಖಕರೇ ಹೇಳುವಂತೆ ಒಂದು ಬೃಹತ್ ಪ್ರಮಾಣದ ಇತಿಹಾಸವು ಕಾದಂಬರಿಯೊಳಗೆ ಸಂಚಿನಿಂದ ನುಸುಳಿಬಿಟ್ಟಿದೆ. ಇದಕ್ಕೆ ಕಾರಣ ರಾಜಕುಮಾರಿ ಹಾಗೂ ಕಾದಂಬರಿಯ ನಿರೂಪಕನಾದ ಮೇವಾಡ ಉತ್ತರಾಧಿಕಾರಿ ಮಹಾರಾಜ ಕುಮಾರರು. ಒಂದೆಡೆ ಕಬೀರ, ಜ್ಞಾನೇಶ್ವರ, ತ್ಯಾಗರಾಜ, ತುಕಾರಾಮ ಗುಂಪಿನ ಮಹಾನ್ ದೊಡ್ಡ ಸ್ತ್ರೀವಾದಿ ಯೋಗಿನಿ ಮೀರಾಬಾಯಿಯ ದೇವರೊಂದಿಗಿನ ಪ್ರೇಮಪ್ರಕರಣ, ಯಾವ ಸಾಮ್ರಾಜ್ಯದ ಕಡೆಗೆ ಕಣ್ಣೆತ್ತಿಯೂ ನೋಡದೇ ತನ್ನ ಲೋಕದಲ್ಲಿ ತಾನಿರುವ ಧ್ಯಾನಸ್ಥ ಸ್ಥಿತಿ, ಓದುಗರಿಗೆ ಆಧ್ಯಾತ್ಮದ ದರ್ಶನ ಮಾಡಿಸಿದರೆ ಇನ್ನೊಂದೆಡೆ ೧೬ನೇ ಶತಮಾನದ ಆ ಕಾಲಘಟ್ಟದ ಮೇವಾಡದಲ್ಲಿ ರಜಪೂತ ಸಾಮ್ರಾಜ್ಯವು ತನ್ನ ಅಧಿಕಾರದ ತುತ್ತ ತುದಿಯಲ್ಲಿರುವುದನ್ನು ಕಾಣಿಸುತ್ತದೆ. ಇಂತಹ ಇಂಗ್ಲಿಷ್ ಕಾದಂಬರಿಯನ್ನು ಕನ್ನಡಕ್ಕೆ ಅನುವಾದಿಸಿರುವ ಲಕ್ಷ್ಮೀನಾರಾಯಣ ಅವರು ಅತ್ಯಂತ ಶ್ರದ್ಧೆಯಿಂದ ಈ ಕಾರ್ಯವನ್ನು ಸಾರ್ಥಕಗೊಳಿಸಿದ್ದಾರೆ. ಚರಿತ್ರೆಯ ಆಸಕ್ತರಿಗೆ ಇದು ಒಂದು ಅತ್ಯುತ್ತಮ ಕಾದಂಬರಿ ಓದಿದ ಅನುಭವವನ್ನು ಕೊಡುತ್ತದೆ. ಕೃತಿಯ ವ್ಯಾಪ್ತಿ ದೊಡ್ಡದಾದರೂ ಅಂದಿನ ರಾಜಕೀಯ ಕಾಲಘಟ್ಟವನ್ನೂ ವೈಯಕ್ತಿಕ ಬದುಕಿನ ತುಮುಲವನ್ನೂ ಸಮರ್ಥವಾಗಿ ನಿರೂಪಿಸುವಲ್ಲಿ ಕಾದಂಬರಿಯ ಗೆಲುವಿದೆ.

– ರೇಣುಕಾ ನಿಡಗುಂದಿ

ಖ್ಯಾತ ಇಂಗ್ಲಿಷ್, ಮರಾಠಿ ಲೇಖಕ ಕಿರಣ್ ನಗರ್‌ಕರ್ ಅವರ 'ಕಕೋಲ್ಡ್' ಎನ್ನುವ ಇಂಗ್ಲಿಷ್ ಕಾದಂಬರಿಯ ಕನ್ನಡ ರೂಪ'ಬೇಗುದಿ' ಕನ್ನಡಕ್ಕೆ ತಂದವರು ಡಾ. ಆರ್.ಲಕ್ಷ್ಮೀನಾರಾಯಣ ಅವರು. ಭಾರತೀಯ ಇತಿಹಾಸದ ಅತ್ಯಂತ ಪ್ರಕ್ಷುಬ್ಧ ಕಾಲಘಟ್ಟವಾದ ೧೬ನೇ ಶತಮಾನದ ವಿಸ್ತೃತ ಐತಿಹಾಸಿಕ ಹಿನ್ನಲೆಯಲ್ಲಿ ಈ ಕೃತಿ ರಚಿತವಾಗಿದೆ. ಸಮಕಾಲದ ಐತಿಹಾಸಿಕ ಸಂಗತಿಗಳು, ಐತಿಹ್ಯಗಳು, ಸನ್ನಿವೇಶಗಳೊಂದಿಗೆ ಕಲ್ಪನೆಯನ್ನು ಮೇಳವಿಸಿ ಈ ಕಾದಂಬರಿಯನ್ನು ಕಟ್ಟಲಾಗಿದೆ. ಸಂತ ಮೀರಾಬಾಯಿಯ ಐತಿಹ್ಯವನ್ನು ಈ ಕಾದಂಬರಿಯೊಳಗೆ ಬೆಸೆದು ಅವಳ ಅಸಾಮಾನ್ಯ ವ್ಯಕ್ತಿತ್ವದ ಪ್ರಭಾವಳಿಯಲ್ಲಿ ನಾಮ ಮಾತ್ರವಾಗಿಬಿಟ್ಟಿದ್ದ ಮೇವಾಡದ ಮಹಾರಾಜಕುಮಾರ ಹಾಗೂ ಮೀರಾಳ ವ್ಯಕ್ತಿತ್ವವನ್ನು ಈ ಕಾದಂಬರಿಯಲ್ಲಿ ಕಟ್ಟಿಕೊಡಲಾಗಿದೆ. ಜೊತೆಗೆ ರಜಪೂತರ ಶೌರ್ಯ, ಸಾಹಸ, ದೇಶಭಕ್ತಿ, ಮೊಗಲರ ರಾಜ್ಯಾಕ್ರಮಣದ ಮಸಲತ್ತುಗಳು ಈ ಕಾದಂಬರಿಯೊಳಗೆ ನಿರೂಪಿತವಾಗಿವೆ. ಇಂಗ್ಲಿಷ್ ಕಾದಂಬರಿಯುನ್ನು ಅನುವಾದಿಸುವಾಗ ಎದುರಾಗಬಹುದಾದ ಎಲ್ಲ ಸಮಸ್ಯೆಗಳನ್ನು ಸಲಿಲವಾಗಿ ಪರಿಹರಿಸಿಕೊಂಡು ಕನ್ನಡದ ಸೃಜನಶೀಲ ಕಾದಂಬರಿಯೆನ್ನುವಂತೆ ಲಕ್ಷ್ಮೀನಾರಾಯಣರು ಇಳಿಸಿಕೊಟ್ಟಿದ್ದಾರೆ.

– ಡಾ. ಎ.ವಿ. ನಾವಡ



ತೆಲಂಗಾಣ ಹೋರಾಟ

ಅನು: ಡಾ. ಬಿ. ಸುಜ್ಞಾನಮೂರ್ತಿ
ತೆಲುಗು ಮೂಲ: ಪಿ. ಸುಂದರಯ್ಯ

ಪ್ರಕಾಶಕರು: ಪಲ್ಲವ ಪ್ರಕಾಶನ
ಚನ್ನಪಟ್ಟಣ,
ಬಳ್ಳಾರಿ ಜಿಲ್ಲೆ–583113
ಪ್ರಥಮ ಮುದ್ರಣ : 2013
ಪುಟಗಳು : 554, ಬೆಲೆ ರೂ. 400/–

ನಾನು ಇತ್ತೀಚೆಗೆ ಓದಿದ, ತೆಲುಗಿನಿಂದ ಕನ್ನಡಕ್ಕೆ ಬಂದ ಅಪರೂಪದ ಪುಸ್ತಕವಿದು. ೧೯೪೬ ರಿಂದ ೧೯೫೧ರ ವರೆಗೆ ಸುಮಾರು ಅರ್ಧಶತಕ ಕಾಲ ನಡೆದ ಆಂಧ್ರಪ್ರದೇಶದ ದುಡಿಯುವ ರೈತಾಪಿ ಜನರ ಹೋರಾಟದ ಈ ಕಥೆಯನ್ನು ಓದಿದರೆ ಮೈನವಿರೇಳುತ್ತದೆ. ಬ್ರಿಟಿಷ್ ಸಾಮ್ರಾಜ್ಯಶಾಹಿ, ಪಾಳೆಯಗಾರಿಕೆ, ಜೀವವಿರೋಧಿ, ಆಡಳಿತದ ವಿರುದ್ಧ ಹೋರಾಡಿದ, ಈ ಹೋರಾಟಕ್ಕೆ ನಾಯಕತ್ವ ನೀಡಿದ ದೇಶದ ಹಿರಿಯ ಕಮ್ಯುನಿಸ್ಟ್ ನಾಯಕ ಪಿ ಸುಂದರಯ್ಯ ಅವರ ಈ ಕೃತಿಯನ್ನು ಬಿ. ಸುಜ್ಞಾನಮೂರ್ತಿ ಅತ್ಯಂತ ಆಕರ್ಷಕವಾಗಿ ಅನುವಾದಿಸಿದ್ದಾರೆ. ಅನುವಾದ ಶೈಲಿ ಎಷ್ಟು ಸರಳವಾಗಿದೆ ಅಂದರೆ ಸುಂದರಯ್ಯನವರು ಕನ್ನಡದಲ್ಲಿ ಬರೆದರೇನೋ ಎಂದೆನಿಸುತ್ತದೆ.

– ಸನತ್‌ಕುಮಾರ ಬೆಳಗಲಿ


ನೈಜಾಂ ಪ್ರಾಂತದಲ್ಲಿ, ವಿಶೇಷವಾಗಿ ತೆಲಂಗಾಣ ಪ್ರದೇಶದಲ್ಲಿಯ ಊಳಿಗಮಾನ್ಯ ವ್ಯವಸ್ಥೆ, ಜೀತ ಪದ್ಧತಿಯ ವಿರುದ್ಧ ನಡೆದ ಸಶಸ್ತ್ರ ಹೋರಾಟದ ಕಥೆಯನ್ನು ದಾಖಲಿಸುವ ಕೃತಿಯಿದು. ಲೇಖಕ ಪಿ. ಸುಂದರಯ್ಯ ಅವರು ತೆಲಂಗಾಣ

ಪ್ರದೇಶದ ಕಮ್ಯುನಿಸ್ಟ್ ನಾಯಕರು. ಜೀತಮುಕ್ತಿಗಾಗಿ ನಡೆದ ಸಶಸ್ತ್ರ ಹೋರಾಟದ ಮುಂಚೂಣಿಯಲ್ಲಿದ್ದವರು. ಇವರು ತಮ್ಮ ಅನುಭವನಗಳನ್ನು ಹೋರಾಟದ ರೂಪರೇಷೆ, ಅದರ ಪರಿಣಾಮಗಳನ್ನು ಅಧಿಕೃತವಾಗಿ ದಾಖಲಿಸಿದ್ದಾರೆ. ಕಾರಣ ಈ ಕೃತಿಗೆ ಐತಿಹಾಸಿಕ ಮಹತ್ವವಿದೆ. ೧೯೪೬ ರಿಂದ ೧೯೫೧ ರ ವರೆಗೆ ನಡೆದ ಸಶಸ್ತ್ರ ಹೋರಾಟದ ದೃಶ್ಯಗಳನ್ನು ಕಟ್ಟಿಕೊಡುವ ಈ ಕೃತಿಯ ಅನುವಾದ ಸೊಗಸಾಗಿದೆ.

– ಡಾ. ರಾಮಕೃಷ್ಣ ಮರಾಠೆ

ಇದೊಂದು ಅನುಭವ ಕಥನ. ತೆಲಂಗಾಣ ರೈತರ ಸಶಸ್ತ್ರ ಚಳುವಳಿಯ ಜೀವಂತ ಕಥೆಯೇ ಇದರ ಮುಖ್ಯ ತಿರುಳು. ೧೯೪೬ ರಲ್ಲಿ ಆರಂಭಗೊಂಡ ಈ ಚಳುವಳಿ ನಿಜಾಮಶಾಹಿ ಆಡಳಿತದ ವಿರುದ್ಧ, ಜಮೀನ್ದಾರಿ ವ್ಯವಸ್ಥೆಯ ವಿರುದ್ಧ, ಅಂದಿನ ಸರ್ಕಾರದ ವಿರುದ್ಧ ಹೋರಾಡಿತು. ಸಾವಿರಾರು ರೈತರು ಕಮ್ಯುನಿಸ್ಟರು, ಗ್ರಾಮಿಗಳು ಸಾವಿಗೀಡಾದರು. ಈ ಹೋರಾಟದ ವ್ಯಾಪ್ತಿ, ಪರಿಣಾಮ, ಬರಿ ತೆಲಂಗಾಣಕ್ಕಷ್ಟೇ ಸೀಮಿತವಾಗಿರಲಿಲ್ಲ ಅದು ಭಾರತದಲ್ಲಿ ಕಮ್ಯುನಿಸ್ಟ್, ತದನಂತರ ನಕ್ಸಲ್‌ಬಾರಿ ಹೋರಾಟಕ್ಕೆ ದಾರಿಮಾಡಿಕೊಟ್ಟಿತು. ಈ ಹೋರಾಟದಲ್ಲಿ ಭಾಗವಹಿಸಿ, ಅತೀ ಹತ್ತಿರದಿಂದ ನೋಡಿದ ಪಿ. ಸುಂದರಯ್ಯ ಅವರ ಕಥನದ ಅನುವಾದವೇ ತೆಲಂಗಾಣ ಹೋರಾಟ.

– ಡಾ. ಮುಜಾಫರ್ ಅಸ್ಸಾದಿ



ಬೆಟ್ಟ ಮಹಮದನ ಬಳಿಗೆ ಬಾರದಿದ್ದರೆ

ಲಕ್ಷ್ಮೀಶ ತೋಳ್ಪಾಡಿ

ಪ್ರಕಾಶಕರು: ಅಭಿನವ ಪ್ರಕಾಶನ
7/18–2, ಮೊದಲನೆಯ ಮುಖ್ಯರಸ್ತೆ,
ಮಾರೇನಹಳ್ಳಿ, ವಿಜಯನಗರ,
ಬೆಂಗಳೂರು–40
ಪ್ರಥಮ ಮುದ್ರಣ : 2013
ಪುಟಗಳು : 160, ಬೆಲೆ ರೂ. 100/–

ಕಾವ್ಯಾತ್ಮಕ ಗದ್ಯ ಬರವಣಿಗೆ ಈ ಪುಸ್ತಕದ ಗಮನ ಸೆಳೆಯುವ ಅಂಶ. ಸರಾಗವಾಗಿ ಓದಿಸಿಕೊಂಡು ಹೋಗುವ ಗುಣವನ್ನು ಹೊಂದಿರುವ ಈ ಕೃತಿಯು ಅದೇ ಕಾರಣಕ್ಕಾಗಿ ಮನಸೂರೆಗೊಳ್ಳುತ್ತದೆ. ಅಧ್ಯಾತ್ಮದ ನಿಗೂಢ ಲೋಕವನ್ನು ಅನಾವರಣ ಮಾಡುವ ಬಯಕೆ ಹೊಂದಿದಂತೆ ಅನ್ನಿಸುವ ಈ ಪುಸ್ತಕವು ಅದನ್ನು ಯಶಸ್ವಿಯಾಗಿಯೇ ಪೂರೈಸಿದೆ. ಅನುಭವದ ಅರಿವನ್ನು ದಾಖಲಿಸುವ ವಿಭಿನ್ನ ಮತ್ತು ವಿಶಿಷ್ಟ ಪ್ರಯತ್ನ ಎದ್ದು ಕಾಣುತ್ತದೆ. ಈ ಪುಸ್ತಕದಲ್ಲಿ ಇಬ್ಬರು ಕಥಾನಾಯಕರ ಪ್ರಸ್ತಾಪ ಬರುತ್ತದೆ. ಹಾಗೆ ನೋಡಿದರೆ ಇದು ಇಬ್ಬರು ವ್ಯಕ್ತಿಗಳನ್ನು ಕುರಿತ ಪುಸ್ತಕ. ಆದರೆ ಅದು ಜೀವನ ಚರಿತ್ರೆಯಲ್ಲ. ಎರಡು ವ್ಯಕ್ತಿಗಳ ನಡುವಿನ ಸಂಬಂಧವನ್ನು ಸೂಕ್ಷ್ಮ ನೆಲೆಯಲ್ಲಿ ಬಿಚ್ಚಿಡುತ್ತ ಹೋಗುತ್ತದೆ. ಸ್ನೇಹ ಎನ್ನುವುದು ಜಾತಿ–ಮತ–ನಂಬಿಕೆಗಳಾಚೆಗೂ ಚಾಚುವಂತಹದು. ಮೇರೆಗಳನ್ನು ಮೀರುವ ನೆಟ್ಟಾರು ರಾಮಚಂದ್ರಭಟ್ಟ ಹಾಗೂ ಇಸ್ಮಾಯಿಲ್ ಕುಂಞಿಪ್ಪರ ನಡುವಿನ ಸಂಬಂಧವನ್ನು ಸ್ನೇಹವೆಂಬ ಚೌಕಟ್ಟಿಗೆ ಸೀಮಿತ ಮಾಡಲು ಆಗುವುದಿಲ್ಲ. ಚೌಕಟ್ಟುಗಳನ್ನು ಹಾಕುತ್ತಲೇ ಅದನ್ನು ಆಯಾಚಿತವಾಗಿ ಮೀರುವ ಪ್ರಯತ್ನ ಪುಸ್ತಕದುದ್ದಕ್ಕೂ ಇದೆ. ವಿಶಿಷ್ಟ ಅನುಭವದ ಲೋಕವನ್ನು ಸೊಗಸಾಗಿ ದಾಖಲಿಸಿರುವ ಈ ಪುಸ್ತಕವು ಓದಿನ ಸುಖವನ್ನು ಕೊಡುವ ಅಪರೂಪದ ಗ್ರಂಥ.

– ದೇವು ಪತ್ತಾರ


ಸಾಮಾನ್ಯವಾಗಿ ಅಂಕಣಗಳು ಅಂದರೆ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ, ಕ್ರೀಡಾ, ವಾಣಿಜ್ಯ ಮುಂತಾದ ಪ್ರಚಲಿತ ವಿಚಾರಗಳಿಗೆ ಅತೀ ಹೆಚ್ಚು ಪ್ರಾತಿನಿಧ್ಯ ನೀಡುತ್ತವೆ. ಇಂಥ ವಿಷಯಗಳನ್ನು ಹೊರತುಪಡಿಸಿದ ಸಂಗತಿಗಳ ಬಗ್ಗೆ ಅಂಕಣಗಳು ಇಲ್ಲವೇ ಎಂದು ಪ್ರಶ್ನಿಸಿದಲ್ಲಿ ಉತ್ತರ ಇಲ್ಲವೇ ಇಲ್ಲ ಎಂದೇನಿಲ್ಲ. ಆದರೆ ಅಂತವುಗಳ ಸಂಖ್ಯೆ ಅತಿ ವಿರಳ ಎನ್ನಲೇಬೇಕು. ಹೀಗೆ ವಿರಳ ವಿಷಯಗಳ ಸರಮಾಲೆಯೇ ಈ ಕೃತಿಯ ಜೀವಾಳ. ಮೇಲ್ನೋಟಕ್ಕೆ, ಸಾಮಾನ್ಯ ಜನರ ಲೆಕ್ಕಾಚಾರದಲ್ಲಿ ನೆಟ್ಟಾರು ರಾಮಚಂದ್ರಭಟ್ಟ ಹಾಗೂ ಬೆಳ್ಳಾರ ಪೇಟೆಯ ಮುಸ್ಲಿಂ ವ್ಯಾಪಾರಿ ಇಸ್ಮಾಯಿಲ್ ಕುಂಞಪ್ಪ ಪರಸ್ಪರ ಪರಿಚಿತರು. ಅವರಿಬ್ಬರ ಗೆಳೆತನ, ಉಭಯ ಕುಶಲೋಪರಿ, ಹರಟೆ, ಚರ್ಚೆ, ಜಗಳ ಮುಂತಾದವುಗಳ ಸ್ವಾರಸ್ಯಕರ ಜೀವನಾನುಭವಗಳ ಅವಲೋಕನಕ್ಕೆ ಕೃತಿ ಮೀಸಲಾಗಿರುವುದು ಒಂದು ವಿಶೇಷ. ಈ ಕೃತಿಯನ್ನು ಓದುತ್ತಾ ಹೋದಂತೆ ಓದುಗನನ್ನೆ ಪರಕಾಯ ಪ್ರವೇಶ ಮಾಡುವಂತೆ ಭಾಷೆಯನ್ನು ದುಡಿಸಿಕೊಂಡಿರುವುದು ಸಕಾರಾತ್ಮಕ ಅಂಶ.

– ಮನೋಹರ ಯಡವಟ್ಟಿ

ಲಕ್ಷ್ಮೀಶ ತೋಳ್ಪಾಡಿ ಅವರು ನೆಟ್ಟಾರು ರಾಮಚಂದ್ರ ಭಟ್ಟ ಮತ್ತು ಅವರ ಆಪ್ತಮಿತ್ರ ಇಸ್ಮಾಯಿಲ್ ಕುಂಞಪ್ಪ ಅವರ ಸಂಬಂಧದ ಹಿನ್ನೆಲೆಯಲ್ಲಿ ನಮ್ಮ ಕಾಲದ ಅವಧೂತ ಪರಂಪರೆಯೊಂದರ ಪರಿಚಯ ಮಾಡಿಕೊಡುತ್ತಾರೆ. ನೆಟ್ಟಾರು ರಾಮಚಂದ್ರ ಭಟ್ಟರು ಲೋಕಾನುಭವದ ಮೂಲಕವೇ ಹೊಸ ಜಗತ್ತೊಂದರ ಹರಿಕಾರರಾಗುತ್ತಾರೆ. ಅವರ ಅನುಭವ ಹಿಂಸೆಯನ್ನು ತಿರಸ್ಕರಿಸುತ್ತದೆ. ಜೀವಕಾರುಣ್ಯವನ್ನು ಎತ್ತಿ ಹಿಡಿಯುತ್ತದೆ. ಜನ ಅವರನ್ನು ಹುಚ್ಚ ಎಂದು ಪರಿಗಣಿಸಿದ್ದರೂ ತೋಳ್ಪಾಡಿ ಅವರು ಮಹಾಜ್ಞಾನಿ ಎಂದು ಸಾಬೀತು ಪಡಿಸಿದ್ದಾರೆ.

– ರಂಜಾನ್ ದರ್ಗಾ

ಲೇಖಕರ ಮೊದಲ ಸ್ವತಂತ್ರ ಕೃತಿ (ಆತ್ಮಕಥೆ)



ಬದುಕ ದಿಕ್ಕು ಬದಲಿಸಿದ ಆಸ್ಟಿಯೋ ಸರ್ಕೋಮಾ

ಬಿ.ಎಸ್. ಶ್ರುತಿ

ಪ್ರಕಾಶಕರು: ಗೋಮಿನಿ ಪ್ರಕಾಶನ
ಶ್ರೀ ವೀರಭದ್ರಸ್ವಾಮಿ ನಿಲಯ, ಒಂದನೇ ಮುಖ್ಯರಸ್ತೆ
5ನೇ ಅಡ್ಡರಸ್ತೆ, ವಿಶ್ವಣ್ಣ ಲೇಔಟ್
ಶಾಂತಿನಗರ, ತುಮಕೂರು–572105
ಪ್ರಥಮ ಮುದ್ರಣ : 2013
ಪುಟಗಳು : 120, ಬೆಲೆ ರೂ. 80/–

ಈ ಆತ್ಮಕಥೆಯನ್ನು ಓದಿದಾಗ ಬಿ.ಎಸ್. ಶ್ರುತಿಯ ಮೊದಲ ಕೃತಿಯೇ ಇದು ಎಂದು ಅಚ್ಚರಿಯಾಯಿತು. ಕನ್ನಡದಲ್ಲಿ ಆತ್ಮಕಥೆಗಳ ಸಂಖ್ಯೆಯೇ ಬಹಳ ಕಡಿಮೆ. ಅದರಲ್ಲಿಯೂ ಮಹಿಳೆಯರ ಆತ್ಮಕಥೆ ಇನ್ನೂ ಕಡಿಮೆ. ಅದರಲ್ಲಿಯೂ ಸಾವಿನೊಡನೆ ಸೆಣಸಿ ಬಂದವರು ಬರೆದಿರುವ ಕೆಲವೇ ಆತ್ಮಕಥೆಗಳಲ್ಲಿ ಶ್ರುತಿಯವರ ಈ ಕೃತಿ ಭಿನ್ನವಾಗಿ ನಿಲ್ಲುತ್ತದೆ. ೧೯–೨೦ ವರ್ಷದ ವಯಸ್ಸಿನ ಈ ಬರಹಗಾರ್ತಿ ತನ್ನದೇ ಬದುಕಿನ ಅತ್ಯಂತ ಕಠಿಣ ಪರಸ್ಥಿತಿಯಲ್ಲಿ ಸಾವನ್ನು ಎದುರಿಸಿದ ಬಗೆ, ಧೈರ್ಯ ಮತ್ತು ಆತ್ಮವಿಶ್ವಾಸ ಇವೆಲ್ಲವು ಆತ್ಮಕಥೆಯ ವಸ್ತು ಮಾತ್ರವಲ್ಲ ಇದು ಸಾವಿನೊಡನೆ ಗೆದ್ದುಬಂದ ಆಕೆಯ ಸ್ವಂತ ಅನುಭವದ ಕಥೆ. 'ಈ ನೋವು ನನ್ನೊಬ್ಬಳಿಗೇ ಬಂದಿದ್ದರೂ ಮಾನಸಿಕವಾಗಿ ನನ್ನ ಕುಟುಂಬದವರೆಲ್ಲರಿಗೂ ಕಾಡುವುದರಲ್ಲಿತ್ತು' ಎಂಬ ಆಲೋಚನೆಯೇ ಈಕೆಯ ಆಲೋಚನೆಯ ದಿಕ್ಕನ್ನು ಸೂಚಿಸುತ್ತದೆ. ಇಡೀ ಕ್ಯಾನ್ಸರ್ ವಿರುದ್ಧದ ಹೋರಾಟದಲ್ಲಿ ಈಕೆಯ ತಂದೆ, ಕುಟುಂಬದವರು, ಸ್ನೇಹಿತರು, ಡಾಕ್ಟರರು, ಆಸ್ಪತ್ರೆಯ ಇತರ ರೋಗಿಗಳು, ಅವರೊಡನೆ ಇದ್ದಂತಹ ಸಂಬಂಧಿಕರು ಎಲ್ಲರೊಡನೆ ಶ್ರುತಿ ಕಟ್ಟಿಕೊಂಡ ಬದುಕು ಅದ್ಭುತ.

ಮುಖ್ಯವಾಗಿ ಕನ್ನಡದ ಕೆಲವೇ ಆತ್ಮಕಥೆಗಳಲ್ಲಿ ತುಂಬಾ ಭಿನ್ನವಾಗಿ ನಿಲ್ಲುವ ಕೃತಿಗಳಲ್ಲಿ ಇದು ಒಂದು. ವಿಧಿಯ ಕೈಯೊಳಗಾಡೋ ಬೊಂಬೆಗಳು ನಾವು ಎಂಬ ತನ್ನದೇ ಒಂದು ಜೀವನದ ತಾತ್ವಿಕ ನಂಬಿಕೆಯೊಂದಿಗೆ, ಬರೆಯುತ್ತಾ ಹೋಗುವ ಈ ಹುಡುಗಿಯ ಮೊದಲ ಬರವಣಿಗೆ ಇದು. ಬದುಕಿನ ಬಗ್ಗೆ ಅಪಾರ ನಂಬಿಕೆಯನ್ನಿಟ್ಟುಕೊಂಡ ಈ ಹುಡುಗಿ ಅದನ್ನು ಆರಾಧಿಸುವುದೂ ಕೂಡ ನಮ್ಮ ಹೃದಯಕ್ಕಿಳಿಯುತ್ತದೆ.

– ಎ. ಭಾಗ್ಯಲಕ್ಷ್ಮಿ

ಚಿಕ್ಕ ವಯಸ್ಸಿನಲ್ಲಿಯೇ ಕ್ಯಾನ್ಸರಿಗೆ ತುತ್ತಾಗಿ ಅದರಿಂದ ಗೆದ್ದು ಬಂದದ್ದನ್ನು ಲೇಖಕಿ ಈ ಆತ್ಮಕಥೆಯಲ್ಲಿ ನಿವೇದಿಸಿದ್ದಾರೆ. ಕ್ಯಾನ್ಸರ್ ಪೀಡಿತರ ನೋವು ಅವರಿಗೇ ಗೊತ್ತು. ಚಿಕ್ಕ ವಯಸ್ಸಿನಲ್ಲಿಯೇ ಒಬ್ಬ ಪ್ರತಿಭಾವಂತ ಹೆಣ್ಣುಮಗಳು ಅನುಭವಿಸಿದ ನೋವು, ಅದನ್ನು ಎದುರಿಸಿ ನಿಂತ ಅವಳ ದೃಢಮನಸ್ಸು ಎಲ್ಲವನ್ನು ಶ್ರುತಿ ಇಲ್ಲಿ ಅಕ್ಷರರೂಪದಲ್ಲಿ ದಾಖಲಿಸಿದ್ದಾರೆ. ಆ ಸಂದರ್ಭದಲ್ಲಿ ಅನುಭವಿಸಿದ ಯಾತನೆಯನ್ನು ಇಂಚಿಂಚು ಬಿಡಿಸಿ ಓದುಗರಲ್ಲಿ ದು:ಖವನ್ನು ಮಡುಗಟ್ಟಿಸುತ್ತಾರೆ. ಓದುಗರ ಅನುಕಂಪೆಗೆ ಪಾತ್ರರಾಗುತ್ತಾರೆ. ತನ್ನೊಳಗಿನ ನೋವನ್ನು ಓದುಗರೂ ತಮ್ಮದೇ ಎಂಬಂತೆ ಭಾವಿಸುವಂತೆ ಮಾಡುತ್ತಾರೆ.

ಆರೋಗ್ಯಕ್ಕೂ ಮನಸ್ಥಿತಿಗೂ ಸಂಬಂಧ ಉಂಟು. ತನ್ನ ಮನಸ್ಥಿತಿಯನ್ನು ಹತೋಟಿಯಲ್ಲಿರಿಸಿಕೊಂಡು ಬರೆಯುವ ಶ್ರುತಿ ಪಕ್ಕದ ವಾರ್ಡಿನಲ್ಲಿ ಸಾವು ತನ್ನ ಸಮೀಪಿಸಬಹುದೆಂಬ ಭಯವಿದ್ದರೂ ದೇಹ ತನ್ನದಲ್ಲ, ಒಳಗಿನ ಆತ್ಮ ತನ್ನದು ಎಂದು ತತ್ವಜ್ಞಾನಿಯಂತೆ ಚಿಂತಿಸಿ ಬರೆಯುವ ಲೇಖಕಿ ತನ್ನೊಳಗಿನ ನಿರೂಪಕಿಯನ್ನು ಚೆನ್ನಾಗಿಯೇ ಈ ಆತ್ಮಕಥೆಯಲ್ಲಿ ದುಡಿಸಿದ್ದಾರೆ. ಈಕೆ ಆ ಸಂದರ್ಭದಲ್ಲಿ ಕಂಡುಕೊಂಡ ಜೀವನದ ಅನುಭವದೆದುರು ಭಾಷಾ ಪ್ರೌಢಿಮೆ ಗೌಣ ಎನ್ನಿಸಿಬಿಡುತ್ತದೆ. ನಿರೂಪಣ ವಿಧಾನ ಚೆನ್ನಾಗಿದೆ.

– ಡಾ. ಚಂದ್ರು ಕಾಳೇನಹಳ್ಳಿ


ಪ್ರಸ್ತುತ ಕೃತಿಯು ಒಂದು ದೊಡ್ಡ ವೈದ್ಯಕೀಯ ಅನುಭವವನ್ನು ಗರ್ಭೀಕರಿಸಿಕೊಂಡಿದೆ. ಕನ್ನಡದ ಓದುಗರಿಗೆ ಕ್ಯಾನ್ಸರ್ ರೋಗದ ಬಗ್ಗೆ ಒಂದು

ತಿಳುವಳಿಕೆಯನ್ನೂ ಒದಗಿಸುತ್ತದೆ. ಚಿಕ್ಕ ಹುಡುಗಿಯೊಬ್ಬಳು ತನಗೆ ಬಂದ ಭಯಾನಕ ರೋಗವೊಂದಕ್ಕೆ ಮುಖಾಮುಖಿಯಾಗಿ, ಎದುರಿಸಿ, ಅದರಿಂದ ತನ್ನ ಅನುಭವಗಳ ವ್ಯಾಪ್ತಿಯನ್ನು ವಿಸ್ತರಿಸಿಕೊಂಡು ಪ್ರಪಂಚದ ಇಂತಹ ರೋಗಗಳಿಂದ ನರಳುವವರನ್ನು ಬ್ಲಾಗ್, ಫೇಸ್‌ಬುಕ್, ಟ್ವೀಟರ್‌ಗಳಲ್ಲಿ ಸಂಧಿಸಿ ಓದುಗರಿಗೆ ಒಂದು ದೊಡ್ಡ ಉಪಕಾರವನ್ನು ಮಾಡಿದ್ದಾಳೆ. ಈಗಲೂ ಕಾಯಿಲೆಗಳಿಗೆ ತುತ್ತಾಗಿ, ಸಣ್ಣಪುಟ್ಟ ಸಮಸ್ಯೆಗಳಿಗೆ ಸಿಕ್ಕು ಇನ್ನೇನು ಜೀವನವೇ ಮುಗಿಯಿತು ಎಂದು ಕೈಚೆಲ್ಲಿ ಕುಳಿತುಕೊಳ್ಳುವವರು ಇದನ್ನು ಓದಿದರೆ ಅವರಲ್ಲಿಯೂ ಬದುಕಿನ ಸ್ಫೂರ್ತಿ ತೆರೆದುಕೊಳ್ಳಬಲ್ಲುದು. ವಯಸ್ಸಿಗೆ ಮೀರಿದ ಅನುಭವಗಳನ್ನು ದಕ್ಕಿಸಿಕೊಂಡ ಬರಹಗಾರ್ತಿ ಎದೆಗಾರ್ತಿಯಾಗಿದ್ದಾರೆ.

ಇಲ್ಲಿಯ ವಸ್ತು, ಶೈಲಿ, ಅನುಭವ ಕಥನವಾದ್ದರಿಂದ ಓದುಗರನ್ನು ಸೆರೆಹಿಡಿಯುತ್ತದೆ. ಕ್ಯಾನ್ಸರ್, ಬಯಾಪ್ಸಿ, ಪೆಲ್ವಿಕ್‌ಕಿಡ್ನಿ, ಕೀಮೋಥೆರಪಿ, ಆಸ್ಟಿಯೋ ಸರ್ಕೋಮಾ, ಅಕ್ಯುಪ್ರೆಶರ್ ಮುಂತಾದವುಗಳ ಬಗ್ಗೆ ಇಲ್ಲಿ ವಿವರ ದೊರೆಯುತ್ತವೆ. ಯಾವುದೇ ಪ್ರಾಣಾಂತಿಕ ರೋಗಪೀಡಿತರಿಗೆ ಇದೊಂದು ಉಪಯುಕ್ತ ಕೈಪಿಡಿಯೂ ಆಗುತ್ತದೆ. ಹತ್ತು ಹಲವು ಗುಣಗಳಿಂದ ಈ ಕೃತಿಯು ಕನ್ನಡದ ಒಂದು ಅರ್ಥಪೂರ್ಣ ಪುಸ್ತಕವಾಗುತ್ತದೆ.

–ಡಾ. ಸಿ.ಬಿ. ಚಿಲ್ಕರಾಗಿ

ಕಾದಂಬರಿ (ಚದುರಂಗ ದತ್ತಿನಿಧಿ ಬಹುಮಾನ)



ಅನಾವರಣ

ಡಾ. ಸಿ.ಆರ್. ಪಾರ್ಥಸಾರಥಿ

ಪ್ರಕಾಶಕರು: ಗಿರಿಪದ್ಮ ಪ್ರಕಾಶನ
ನಂ-655, 16ನೇ ಮುಖ್ಯರಸ್ತೆ, 7ನೇ ಬಿ ಕ್ರಾಸ್
ಎಂ.ಇ.ಐ. ಲೇಔಟ್, ಹೆಸರಘಟ್ಟ ಮುಖ್ಯರಸ್ತೆ
ನಾಗಸಂದ್ರ ಪೋಸ್ಟ್, ಬೆಂಗಳೂರು-73
ಪ್ರಥಮ ಮುದ್ರಣ : 2013
ಪುಟಗಳು : 372, ಬೆಲೆ ರೂ. 300/-

ಹುಟ್ಟಿನಿಂದ ಸಾವಿನವರೆಗೆ ವೈದ್ಯಕೀಯ ಲೋಕವು ಮಹತ್ವದ ಪಾತ್ರ ವಹಿಸುವುದನ್ನು ಎಲ್ಲರೂ ಬಲ್ಲರು. ಇದರ ಮಹತ್ವವನ್ನು ಒಬ್ಬ ವ್ಯಕ್ತಿ ಅಥವಾ ಒಂದು ಸಮೂಹ ಒಳಗೊಳ್ಳುತ್ತಾ, ಗ್ರಹಿಸುತ್ತಾ, ಪ್ರತಿಕ್ರಿಯಿಸುತ್ತಾ, ತನ್ನ ಬೇಕು ಬೇಡಗಳನ್ನು ಹೊರಹಾಕುತ್ತಾ ಒಂದು ಕ್ಷೇತ್ರಕ್ಕೆ ಮುಖಾಮುಖಿಯಾಗಿ ನಿಲ್ಲುವ ಮತ್ತು ಹಾಗೆ ನಿಂತಹೊತ್ತಿನಲ್ಲಿ ಆಗುವ ಪರಿಣಾಮಗಳನ್ನು ಪರಿಚಯಿಸಿಕೊಡುವ ವೈದ್ಯಲೋಕದ ನಿಷ್ಠಾವಂತ, ಛಲವಂತ ವೈದ್ಯನೊಬ್ಬನ ಪಯಣದ ಕಥಾನಕ ಅನಾವರಣ ಕಾದಂಬರಿಯ ವಸ್ತು.

ಡಾ. ಪಾರ್ಥಸಾರಥಿ ವೈದ್ಯರಾಗಿದ್ದುಕೊಂಡು ತಮ್ಮ ವೃತ್ತಿಜೀವನದ ಸುದೀರ್ಘ ಪಯಣದಲ್ಲಿ ಕಂಡದ್ದನ್ನು ಈ ಕಾದಂಬರಿಯಲ್ಲಿ ಅನಾವರಣಗೊಳಿಸಿದ್ದಾರೆ. ಹಾಗೆ ನೋಡಿದರೆ ಆತ್ಮಕಥಾನಕವಾಗುವ ಎಲ್ಲ ಹೊಳಹುಗಳನ್ನು ಇಟ್ಟುಕೊಂಡೆ ಇದು ತನ್ನ ಶೈಲಿಯಿಂದ ವಿಭಿನ್ನವಾಗಿದೆ. ಹೀಗಾಗಿ ಇದು ಏಕಕಾಲಕ್ಕೆ ಲೇಖಕರ ಆತ್ಮಕಥೆಯಂತೆಯೂ ಮತ್ತು ಯಾವುದೋ ಗ್ರಾಮೀಣ ಭಾಗದಲ್ಲಿ ನಡೆದ ಘಟನೆಯನ್ನು ಚಿತ್ರಿಸಿರುವಂತೆಯೂ ತೋರುತ್ತದೆ. ಈ ಕಾದಂಬರಿಯನ್ನು ಓದುವಾಗ ಹಳ್ಳಿಯ ಜಗತ್ತಿನೊಂದಿಗೆ ವೈದ್ಯ-ಜಗತ್ತು ಸಾಗುವ ಪರಿ, ಚಿತ್ರ ವಿಚಿತ್ರ ನಂಬಿಕೆ-

ಅಪನಂಬಿಕೆಗಳು, ನವಿರಾದ ಸಂಬಂಧಗಳು, ಅಮಾಯಕತೆ ಹಳ್ಳಿಯ ಮುಗ್ಧತೆ ಮತ್ತು ಮೌಢ್ಯತೆ ಹೀಗೆ ಅನೇಕ ಸಂಗತಿಗಳು ಕಣ್ಣಮುಂದೆ ಬರುತ್ತವೆ.

– ಡಾ. ಎಸ್. ತುಕಾರಾಮ್

ಅನಾವರಣ ಇದು ತನ್ನ ವಸ್ತು ಮತ್ತು ನಿರೂಪಣೆಯಿಂದಾಗಿ ಹೊಸತನವನ್ನು ಪ್ರಕಟಿಸುತ್ತದೆ. ವೈದ್ಯಲೋಕದ ಅನುಭವ ಮತ್ತು ವ್ಯವಸ್ಥೆಯ ಕುತಂತ್ರ ರಾಜಕಾರಣ ಇವುಗಳ ನಡುವಿನ ವಿನ್ಯಾಸವನ್ನು ಈ ವಸ್ತು ಶೋಧಿಸುತ್ತದೆ. ಪ್ರಾಮಾಣಿಕವಾಗಿ ಬದುಕುವ ವ್ಯಕ್ತಿಗಳು ವ್ಯವಸ್ಥೆಯ ಜೊತೆ ಶಾಮೀಲಾಗದಿದ್ದರೆ ಅವರು ಎದುರಿಸುವ ಸಮಸ್ಯೆಗಳು ಭೀಕರವಾಗಿರುತ್ತವೆ. ಅಂತಹ ಸಮಸ್ಯೆಗಳನ್ನು ತನ್ನ ನೈತಿಕ ಧೈರ್ಯ ಹಾಗೂ ವೈದ್ಯ ಪ್ರತಿಭಾ ಸಾಮರ್ಥ್ಯದಿಂದ ಎದುರಿಸುವ ಪ್ರವೃತ್ತಿ ಇಲ್ಲಿಯ ನಾಯಕ ಡಾ. ವಿಲಾಸನಲ್ಲಿ ನಿರ್ಭೀತಿಯಿಂದ ವ್ಯಕ್ತವಾಗುತ್ತದೆ. ಅವನ ಸೇವೆಗೆ ತಕ್ಕ ಪ್ರತಿಫಲ ಕೊನೆಯಲ್ಲಿ ದೊರೆಯುತ್ತದೆ.

ಅನಾವರಣ ವಾಸ್ತವವಾದಿ ಮಾರ್ಗದ ಕಾದಂಬರಿ. ನಗರದ ಪ್ರತಿಷ್ಠಿತ ಆಸ್ಪತ್ರೆಗಳಲ್ಲಿ ಸೇವೆ ಸಲ್ಲಿಸಿ ಅನುಭವ ಹೊಂದಿದ ಡಾ. ವಿಲಾಸನಿಗೆ ಹಳ್ಳಿಯಲ್ಲಿ ಹೋಗಿ ಸೇವೆ ಸಲ್ಲಿಸಬೇಕೆಂಬ ತುರ್ತು. ಅಲ್ಲಿ ಅವನಿಗೆ ಜನರಿಂದ ಸಹಕಾರ ಸಿಕ್ಕಿದರೂ ಬರಬರುತ್ತಾ ರಾಜಕೀಯ ಸಂಘರ್ಷ ಎದುರಾಗಿ ಅವನಿಗೆ ಅನೇಕ ಕಿರುಕುಳಗಳು ‑ಆರಂಭವಾಗುತ್ತವೆ. ಆದರೂ ವಿಲಾಸನ ಆದರ್ಶ ಜೀವನ, ಸೇವೆ ಎದ್ದು ಕಾಣುತ್ತದೆ. ಕಥೆಯ ನಿರೂಪಣೆ, ಶೈಲಿ ಚೆನ್ನಾಗಿದೆ. ಈ ಕಥೆಯಲ್ಲಿ ಆಸ್ಪತ್ರೆ, ಆ ಹಳ್ಳಿ ಎರಡೂ ಸಾರ್ವತ್ರಿಕವಾದ ವಸ್ತುಗಳಾಗಿವೆ. ವೈದ್ಯಲೋಕದ ವಿವರಗಳು ಇಲ್ಲಿ ದಟ್ಟವಾಗಿ, ಸೂಕ್ಷ್ಮವಾಗಿ ಮತ್ತು ವಸ್ತು ನಿಷ್ಠವಾಗಿವೆ.

– ಡಾ. ಕರೀಗೌಡ ಬೀಚನಹಳ್ಳಿ


ಹಿರಿಯ ವೈದ್ಯರಾದ ಡಾ. ಪಾರ್ಥಸಾರಥಿಯವರ ಈ ಕಾದಂಬರಿ ವೈದ್ಯಲೋಕದ ಸಚಿತ್ರ ಚಿತ್ರಣವಾಗಿದೆ. ನಗರದಿಂದ ಗ್ರಾಮಕ್ಕೆ ಬಂದ ಒಬ್ಬ ವೈದ್ಯನ ಸುತ್ತ ಗ್ರಾಮಜಗತ್ತಿನ ರಾಜಕೀಯ, ಸಾಮಾಜಿಕ, ಸಂಗತಿಗಳು ಹೇಗೆ ಅವನ ವ್ಯಕ್ತಿತ್ವವನ್ನು ಕುಗ್ಗಿಸುತ್ತಾ, ಹಿಗ್ಗಿಸುತ್ತಾ ಹೋಗುತ್ತವೆ ಎಂಬುದನ್ನು ಈ ಕಾದಂಬರಿ ಹೇಳುತ್ತಾ

ಹೋಗುತ್ತದೆ. ವೈದ್ಯ ವೃತ್ತಿಗೆ ತನ್ನದೇ ಆದ ಪಾವಿತ್ರ್ಯವಿದೆ. ವೈದ್ಯನನ್ನು ದೇವರು ಎನ್ನುವವರೂ ಇದ್ದಾರೆ. ಆದರೆ ಗ್ರಾಮದ ಕ್ಷುಲ್ಲಕ ರಾಜಕಾರಣದ ಮುಂದೆ ವೈದ್ಯರೂ ಕೂಡ ಒಬ್ಬ ಮನುಷ್ಯ ಎಂಬಂತೆ ಕಥಾನಾಯಕ ಡಾ.ವಿಲಾಸನ ಮೂಲಕ ಈ ಕಾದಂಬರಿ ಸಾದರಪಡಿಸುತ್ತದೆ.

ವೈದ್ಯಲೋಕದ ವಿಸ್ಮಯಗಳು, ಬದುಕಿನ ಆಕರ್ಷಣೆ ವಿಕರ್ಷಣೆ, ಲೋಭ-ಪ್ರಲೋಭ, ದ್ವೇಷ-ಸ್ನೇಹ ಮುಂತಾದ ಭಾವ ಜಗತ್ತು ಈ ಕಾದಂಬರಿಗಳಲ್ಲಿ ತೆರೆದುಕೊಂಡಿದೆ. ಗ್ರಾಮೀಣ ರಾಜಕೀಯ ದ್ವೇಷಗಳು ಸ್ವಾರ್ಥ ಲಾಲಸೆಗಳೊಂದಿಗೆ ಸ್ನೇಹ ಅನುರಾಗಗಳು ಮಿಳಿತವಾಗಿ, ಬದುಕು ಹದಗೊಂಡ ಸ್ಥಿತಿಯನ್ನು ಈ ಕಾದಂಬರಿ ಮನಗಾಣಿಸತ್ತದೆ.

- ಡಾ. ಬಾಳಾಸಾಹೇಬ ಲೋಕಾಪುರ

ಜೀವನ ಚರಿತ್ರೆ (ಸಿಂಪಿಲಿಂಗಣ್ಣ ದತ್ತಿನಿಧಿ ಬಹುಮಾನ)



ನೆಲದೊಡಲ ಚಿಗುರು (ನಾಡೋಜ ಡಾ. ಎಲ್. ನಾರಾಯಣರೆಡ್ಡಿ ಅವರ ಬದುಕು – ಚಿಂತನ)

ಎನ್.ಎಲ್. ಆನಂದ್ ಮತ್ತು ಗುಂಡಪ್ಪ ದೇವಿಕೇರಿ

ಪ್ರಕಾಶಕರು: ನವ ಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್
ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ
ಬೆಂಗಳೂರು–01.
ಪ್ರಥಮ ಮುದ್ರಣ : 2013
ಪುಟಗಳು : 168, ಬೆಲೆ ರೂ. 140/–

ಇದು ನಾರಾಯಣ ರೆಡ್ಡಿಯವರ ಸಾರ್ಥಕ ಜೀವನದ ಕಥೆ. ತುಂಬು ಕುಟುಂಬದ ಕೃಷಿಕ ಮಗನಾಗಿ ಹುಟ್ಟಿ, ವ್ಯವಸಾಯ ಮಾಡಲು ದೈಹಿಕವಾಗಿ ಅಶಕ್ತನಾಗಿರುವುದನ್ನು ತಿಳಿದು ಕಷ್ಟಪಟ್ಟು ಎಸ್.ಎಸ್.ಎಲ್.ಸಿ. ಓದಿ ಉನ್ನತ ವಿದ್ಯಾಭ್ಯಾಸಕ್ಕೆ ಬೆಂಗಳೂರಿಗೆ ಕಳುಹಿಸಿದರೆ ನಗರದ ಆಕರ್ಷಣೆಗೆ ಬಲಿಯಾಗಿ ವಿದ್ಯೆ ನೈವೇದ್ಯವಾಯಿತು. ಮನೆಯಲ್ಲಿ ವಿಷಯ ತಿಳಿದಾಗ ಅವಮಾನಿತನಾಗಿ ಹಳ್ಳಿಯಲ್ಲಿರಲು ಮನಸ್ಸಾಗದೆ ಮತ್ತೆ ನಗರಸೇರಿ ಜೀವನೋಪಾಯಕ್ಕೆ ಹೊಟೇಲೊಂದರಲ್ಲಿ ಕ್ಲೀನರ್ ಆಗಿ ಅಲ್ಲಿಂದ ಟ್ರಾನ್ಸ್‌ಪೋರ್ಟ್ ಕಂಪನಿ ಸೇರಿ ಮುಂಬಯಿ ವರೆಗೂ ಪಯಣಿಸಿ, ಪ್ರಾಮಾಣಿಕವಾಗಿ ಕೆಲಸ ಮಾಡಿ ಎಲ್ಲರಿಂದಲೂ ಸೈ ಎನ್ನಿಸಿಕೊಂಡು ಗೌರವ ಸಂಪಾದಿಸಿದ ರೆಡ್ಡಿಯವರಿಗೆ ಪಿತ್ರಾರ್ಜಿತವಾಗಿ ಬಂದ ಒಂದೂವರೆ ಎಕರೆ ಜಮೀನಿನಲ್ಲಿ ಮಾಡಿದ ಶ್ರಮ ಸಾರ್ಥಕವಾಯಿತು. ಕೃಷಿ ಕುರಿತ ಚಿಂತನೆಗಳು, ಹೊಸ ಆವಿಷ್ಕಾರ, ಅದರಲ್ಲಿ ಗೈದ ಸಾಧನೆ ಹಲವಾರು ಹೀಗಾಗಿ ಸಾವಯವ ಕೃಷಿಯ ಹರಿಕಾರರಾಗಿ ಅವರು ನಿಂತರು. ಈ ಎಲ್ಲ ಸಾಧನೆ ಕೇವಲ ನನ್ನೊಬ್ಬನದಲ್ಲ ಎಂದು ನೆನಪಿಸುವ ರೆಡ್ಡಿಯವರ ಯಶಸ್ಸಿನ ಹಿಂದೆ ಪತ್ನಿ ಶ್ರೀಮತಿ

ಸರೋಜಮ್ಮ ಇದ್ದಾರೆ. ಇದು ಸಾವಯವ ತಂತ್ರ ನಾರಾಯಣರೆಡ್ಡಿ ನಾಡೋಜರಾಗಲು ಕಾರಣ. ಇಂದಿನ ಭಾರತದ ಕೃಷಿ ಪರಿಸ್ಥಿತಿಗೆ ಕೈಚೆಲ್ಲಿಕುಳಿತ ರೈತರಿಗೆ ಸಾಧನೆಯ ಸೋಪಾನವೇರಲು ಉಪಯುಕ್ತವಾದ ಕೃಷಿಕನೊಬ್ಬನ ಯಶೋಗಾಥೆಯು ಭರವಸೆಯ ಬೆಳಕನ್ನು ಚೆಲ್ಲುವಂತಹದು.

– ಡಾ. ವಿಜಯಲಕ್ಷ್ಮಿ ಭೋಸಲೆ

ನೆಲದೊಡಲ ಚಿಗುರು ಎಂಬ ಶೀರ್ಷಿಕೆಯಿಂದ ಹಿಡಿದು ಕೃತಿಯ ವಸ್ತು– ನಿರೂಪಣೆ – ಶೈಲಿ– ಭಾಷಾ ಖಚಿತತೆ–ಪ್ರೌಢ ಗ್ರಹಿಕೆ ಮುಂತಾದ ಎಲ್ಲಾ ವಿಷಯ – ವಿವರಗಳಲ್ಲೂ ಈ ಕೃತಿ ಪರಿಪೂರ್ಣತೆ ಹೊಂದಿದ್ದು, ಅತ್ಯಂತ ಮೌಲಿಕವಾಗಿದೆ. ಕೃಷಿಕ್ಷೇತ್ರದ ನಾಡೋಜ ಡಾ. ಎಲ್. ನಾರಾಯಣರೆಡ್ಡಿಯವರ ಬದುಕು–ಚಿಂತನೆಗಳನ್ನು ಸರಳವಾಗಿ, ಪರಿಣಾಮಕಾರಿಯಾಗಿ ವಸ್ತುನಿಷ್ಠವಾಗಿ ಮನಮುಟ್ಟುವಂತೆ ಚಿತ್ರಿಸಿದ್ದಾರೆ.


ಅನಗತ್ಯ ಹೊಗಳಿಕೆ, ಅತಿ ಉತ್ಪ್ರೇಕ್ಷಗಳಿಲ್ಲದೇ ನಿರೂಪಣೆ ಮಾನಸಿಕ ದೂರವನ್ನು ಕಾಯ್ದುಕೊಂಡಿದೆ. ನಾರಾಯಣರೆಡ್ಡಿಯವರು ನಡೆದುಬಂದ ದಾರಿ ಸಾವಯವ ಕೃಷಿಯ ದಾರ್ಶನಿಕನಾದದ್ದು, ಇವರ ಯಶಸ್ಸಿನ ಅರ್ಧಭಾಗ ಬೆಂಬಲವಾಗಿರುವ ಅವರ ಪತ್ನಿ ಶ್ರೀಮತಿ ಸರೋಜಮ್ಮನವರ ಪರಿಚಯ ಔಚಿತ್ಯಪೂರ್ಣವಾಗಿದ್ದು ಕೃತಿಗೆ ಪೂರ್ಣತೆ ತಂದುಕೊಟ್ಟಿದೆ.

– ಡಾ. ಲತಾ ಕೆ.ಎ.

ಸರ್ಕಾರ, ಬಹುರಾಷ್ಟ್ರೀಯ ಕಂಪನಿ, ಸಹೋದ್ಯೋಗಿ ರೈತರುಗಳೊಂದಿಗೆ ಬದುಕಿ ಜಯಸಿದ ಡಾ.ನಾರಾಯಣರೆಡ್ಡಿಯವರ ಜೀವನ ಚರಿತ್ರೆಯಿದು. ಇಲ್ಲಿಯ ಹೆಗ್ಗಳಿಕೆ ಎಂದರೆ ಜಯದ ಸಂಭ್ರಮಾಚರಣೆ ನಡುವೆ ಅವರ ಸೋಲುಗಳು, ಅವರ ಸ್ಥಿತಿಗಳು, ಅವರ ತಪ್ಪು ಹೆಜ್ಜೆಗಳು, ಅವರ ಮಾರ್ಗದಲ್ಲಿದ್ದ ಸಂಶಯಗಳು ಮತ್ತು ಆ ಕಾಲದಲ್ಲಿ ಅವರು ಧೃತಿಗೆಟ್ಟದ್ದು ಯಾವುದೂ ಮರೆಯಾಗದೇ ಯಶಸ್ಸಿನ ಹಾದಿ ರೂಪುಗೊಂಡಿರುವುದು ರಕ್ತ ಮಾಂಸದಂತೆ ತುಂಬಿಕೊಂಡಿದೆ.

ಸಾಮಾನ್ಯರಲ್ಲಿ ಸಾಮಾನ್ಯ, ಬದುಕಿನಿಂದ ಅಸಾಮಾನ್ಯ ಜನಾದರಣೆ ಪಡೆದು ಬದುಕಿದ ರೆಡ್ಡಿಯವರ ಕೆಲವು ಅನುಭವಗಳು ಇಂದಿನ ಕಾರ್ಪೋರೇಟ್ ಅಬ್ಬರದ ನಡುವೆ ತೀರಾ ರೋಮ್ಯಾಂಟಿಕ್ ಅನಿಸಿದರೂ ಅದೊಂದು ಪರೀಕ್ಷಿತ ಪರ್ಯಾಯ ಮಾರ್ಗವಾಗಿ ಕಂಡು ಬರುತ್ತದೆ. ಮತ್ತು ಅದರ ಬಗೆಗೆ ಆಶಾವಾದ ಹೊಂದಲು ರೆಡ್ಡಿಯವರ ಬದುಕೇ ಒಂದು ಉದಾಹರಣೆಯಾಗುತ್ತದೆ.

– ಸಂವರ್ತ



ಸಾಹಿತ್ಯ ಸಿಂಚನ

ಡಾ. ಬಸವರಾಜ ಸಬರದ

ಪ್ರಕಾಶಕರು: ಪಲ್ಲವಿ ಪ್ರಕಾಶನ
ವಿಶ್ವವಿದ್ಯಾಲಯ ಅಂಚೆ
ಗುಲಬರ್ಗಾ–505106.
ಪ್ರಥಮ ಮುದ್ರಣ : 2013
ಪುಟಗಳು : 300, ಬೆಲೆ ರೂ. 280/–

ಈ ವಿಮರ್ಶಾ ಕೃತಿಯಲ್ಲಿ ಕನ್ನಡ ಕಾವ್ಯ ಪರಂಪರೆಯ ಬಗೆಗೆ ಹನ್ನೆರಡು ಲೇಖನಗಳೂ ಕಥನ ಪರಂಪರೆಯ ಬಗೆಗೆ ಆರು ಲೇಖನಗಳೂ ಇವೆ. ಕಾವ್ಯ ಪರಂಪರೆ ಕೆಲವು ಲೇಖನಗಳು ನವೋದಯ ಕಾವ್ಯಕ್ಕೆ ಸೀಮಿತವಾಗಿದ್ದು, ಮಾಸ್ತಿ, ಕುವೆಂಪು, ಕಾವ್ಯಾನಂದ, ಜಿ.ಎಸ್. ಶಿವರುದ್ರಪ್ಪ, ಕಣವಿಯಂಥ ಮಹತ್ವದ ಲೇಖಕರನ್ನು ಮತ್ತೆ ಕೆಲವು ಲೇಖನಗಳು ಮುಳ್ಳೂರು ನಾಗರಾಜ, ಬುದ್ಧಣ್ಣ ಹಿಂಗಮಿರೆ ಮತ್ತು ಸಿದ್ಧಲಿಂಗಯ್ಯರಂಥ ಬಂಡಾಯದ ಕವಿಗಳನ್ನೂ ಒಳಗೊಂಡಿದೆ. ಪುಸ್ತಕದ ಎರಡನೇ ಭಾಗದಲ್ಲಿ ಕಥನ ಪರಂಪರೆಯು ಒಟ್ಟಾರೆಯಾಗಿ ೨೦ನೇ ಶತಮಾನದ ಸಣ್ಣ ಕಥೆಗಳ ಸ್ವರೂಪ ಮತ್ತು ಪ್ರಯೋಗಶೀಲತೆಯನ್ನು ತಾಳ್ಮೆಯಿಂದ ವಿವರಿಸುತ್ತದೆ.

ಡಾ.ಸಬರದ ಅವರಿಗೆ ಹೊಸಗನ್ನಡ ಸಾಹಿತ್ಯದ ಮೇಲೆ ಒಳ್ಳೆಯ ಹಿಡಿತವಿದೆಯೆಂಬುದನ್ನು ಇಲ್ಲಿನ ಲೇಖನಗಳು ಚೆನ್ನಾಗಿ ಮನದಟ್ಟು ಮಾಡಿಕೊಡುತ್ತವೆ. ಹೊಸಗನ್ನಡ ಕಾವ್ಯ ಪರಂಪರೆ, ದಲಿತ ಕಾವ್ಯ ಪರಂಪರೆ ಮತ್ತು ಸಣ್ಣಕಥಾ ಪರಂಪರೆಗಳ ಬಗೆಗೆ ಇಲ್ಲಿರುವ ಸಮೀಕ್ಷಾ ರೂಪದ ಲೇಖನಗಳಲ್ಲಿ ಇದು ಸ್ಪಷ್ಟವಾಗುತ್ತದೆ. ಜಿ. ಎಸ್. ಆಮೂರರು ಹೇಳಿದಂತೆ, 'ಸಬರದ ಅವರು ಬಂಡಾಯ ಚಳುವಳಿಯಲ್ಲಿ ತಮ್ಮನ್ನು ತೊಡಗಿಸಿಕೊಂಡದ್ದರಿಂದ ಆ ಸಾಹಿತ್ಯ ಕುರಿತು ಇಲ್ಲಿ ಅವರು ಅಧಿಕೃತವಾಗಿ ಮಾತನಾಡಿದ್ದಾರೆ'. ಮಹಿಳಾ ಕಾವ್ಯದಲ್ಲಿ

ಯುಗಾದಿ ಲೇಖನವು ಸಬರದರವರ ವ್ಯಾಪಕ ಓದನ್ನು ಪರಿಚಯ ಮಾಡಿಕೊಡುತ್ತದೆ. ಉಳಿದಂತೆ ಅವರು ಪ್ರತಿಯೊಂದು ಲೇಖಕರ ಬಗೆಗೆ ಬರೆದ ಮಾತುಗಳು ಆಳವಾದ ಅಧ್ಯಯನದಿಂದ ನಿಷ್ಪನ್ನವಾದುವು. ವ್ಯಾಪಕವಾದ ಓದು ಮತ್ತು ತಾಳ್ಮೆಯ ಬರಹಗಳಿಂದಾಗಿ ಈ ಪುಸ್ತಕ ಮುಖ್ಯವಾಗಿದೆ.

– ಡಾ. ಪುರುಷೋತ್ತಮ ಬಿಳಿಮಲೆ

'ಸಾಹಿತ್ಯ ಸಿಂಚನ' ಹದಿನೆಂಟು ಲೇಖನಗಳ ಸಂಗ್ರಹ. ಇವುಗಳ ಪೈಕಿ ಹನ್ನೆರಡು ಆಧುನಿಕ ಕನ್ನಡ ಕಾವ್ಯದ ಬಗ್ಗೆ, ಆರು ಲೇಖನಗಳು ಕನ್ನಡ ಕಥನ ಪರಂಪರೆಯ ಬಗ್ಗೆ ಇವೆ. ಕುವೆಂಪು, ಮಾಸ್ತಿ, ಸಿದ್ದಯ್ಯ ಪುರಾಣಿಕ, ಜಿ.ಎಸ್.ಎಸ್, ಚೆನ್ನವೀರ ಕಣವಿಯವರಂಥ ಹಿರಿಯ ಕವಿಗಳು ಹಾಗೂ ಡಾ.ಸಿದ್ಧಲಿಂಗಯ್ಯ, ಮುಳ್ಳೂರ ನಾಗರಾಜ, ಮಹಾದೇವ ಬಣಕಾರರಂಥ ಇತ್ತೀಚಿನ ಕವಿಗಳ ಬಗ್ಗೆ ಡಾ.ಸಬರದ ಇಲ್ಲಿ ಬರೆದಿದ್ದಾರೆ. ಅಲ್ಲದೆ ಹೊಸಗನ್ನಡ ಕಾವ್ಯ ಪರಂಪರೆ, ಮಹಿಳಾ ಮತ್ತು ದಲಿತ ಕಾವ್ಯಗಳ ಬಗ್ಗೆ ವಿಶ್ಲೇಷಣಾತ್ಮಕ ಲೇಖನಗಳೂ ಇಲ್ಲಿವೆ.

ಕಥನ ಪರಂಪರೆಯ ಮೇಲಿನ ಅಧ್ಯಯನಗಳಲ್ಲಿ ನಿರಂಜನ, ಜಯತೀರ್ಥ ರಾಜಪುರೋಹಿತ, ಯು.ಆರ್. ಅನಂತಮೂರ್ತಿ ಹಾಗೂ ಅಮರೇಶ ನುಗಡೋಣಿಯವರ ಬರಹಗಳು ವಿಶ್ಲೇಷಣೆಗೊಳಪಟ್ಟಿವೆ. ಅಲ್ಲದೇ ಸಣ್ಣ ಕಥಾ ಪರಂಪರೆ ಹಾಗೂ ಬಂಡಾಯ ಸಾಹಿತ್ಯದ ಬಗ್ಗೆ ವಿವರಣಾತ್ಮಕ ಲೇಖನಗಳಿವೆ. ಡಾ.ಸಬರದ ಅವರು ತಮ್ಮ ಪ್ರಬಂಧಗಳ ವಿಷಯದ ಬಗ್ಗೆ ಮಾಹಿತಿ ಕಲೆ ಹಾಕುವಲ್ಲಿ ಓದುಗನಿಗೆ ಇದುವರೆಗೆ ಸಂಶೋಧಿತವಾಗಿರುವ ವಿಚಾರಗಳನ್ನು ಒಂದೆಡೆ ತರುವಲ್ಲಿ ಯಶಸ್ಸು ಕಾಣುತ್ತಾರೆ.

– ಡಾ. ಪೃಥ್ವಿದತ್ತ ಚಂದ್ರ ಶೋಭಿ


ಈ ಲೇಖಕರು ಎಷ್ಟೆಲ್ಲಾ ಓದುತ್ತಾರೆ, ಯಾವಾಗ ಬರೆಯುತ್ತಾರೆ ಎಂದು ಸೋಜಿಗವಾಗುವಷ್ಟು ವಿಸ್ತಾರವಾದ ಓದನ್ನು ಈ ಪುಸ್ತಕ ಪ್ರತಿಫಲಿಸುತ್ತದೆ. ಆದರೆ ಲೇಖನಗಳು ಬಹುಪಾಲು ವರದಿಗಳಾಗಿ, ಸಮೀಕ್ಷೆಗಳಾಗಿ ಸಪ್ಪೆಯಾಗಿವೆ. ಸೆಮಿನಾರುಗಳಿಗಾಗಿ, ಭಾಷಣಗಳಿಗಾಗಿ ಬಹುಪಾಲು ತಯಾರಾದ ಲೇಖನಗಳು.

ಆ ಕಾರಣದಿಂದಲೇ ಸಮೀಕ್ಷೆಗಳಾಗಿವೆ. ಚಿಂತನ-ಮಂಥನಗಳ ಕೊರತೆ ಎದ್ದು ಕಾಣುತ್ತದೆ ಎನಿಸುತ್ತದೆ. ಆದರೆ ಸಮೀಕ್ಷಾತ್ಮಕವಾದ ಸಪ್ಪೆಯಾದ ಹಲವಷ್ಟು ಲೇಖನಗಳಲ್ಲಿ, ಲೇಖನದ ಕೊನೆಯ ಪ್ಯಾರಾದಲ್ಲಿ ಫೀನಿಕ್ಸ್‌ನಂತೆ ಮೇಲೆದ್ದು ನಿಜದನಿಯಲ್ಲಿ ಪ್ರಖರವಾಗಿ ವಾದ ಮಂಡಿಸುತ್ತಾರಾದರೂ ಆ ವಾದಗಳು ಕೇವಲ ಒಂದು ಪುಟ್ಟ ಪ್ಯಾರಾ ಮಾತ್ರ ಆಗಿದೆ.

ಲೇಖಕರು ಸೂಕ್ಷ್ಮ ಮನಸ್ಸಿನವರು, ಪ್ರಖರ ಚಿಂತನೆ ಇರುವವರು ಎಂಬ ಕಿರು ಇಣುಕು ನೋಟ ಇಲ್ಲಿ ದೊರೆಯುತ್ತದೆ. ಉದಾಹರಣೆಗೆ ಈ ಪುಸ್ತಕದ ಅನಂತಮೂರ್ತಿಯವರ ಕಾದಂಬರಿಗಳು ಎಂಬ ಲೇಖನ. ಈ ಒಂದು ಲೇಖನದಲ್ಲಿ ಮಾತ್ರ ಲೇಖನದುದ್ದಕ್ಕೂ ಪ್ರಖರತೆ, ಕಾವ್ಯಾತ್ಮಕತೆ, ವಿಮರ್ಶೆ, ಎಚ್ಚರ ಎಲ್ಲವೂ ಕೂಡಿ ದುಡಿದು ಅದನ್ನೊಂದು ಅಪರೂಪದ ಹೊಸ ಓದನ್ನಾಗಿ ಮಾರ್ಪಡಿಸಿದೆ.

– ಡಾ. ಎಚ್. ಪಟ್ಟಾಭಿರಾಮ ಸೋಮಯಾಜಿ

ಅನುವಾದ-1 (ಸೃಜನಶೀಲ)
(ಎಲ್. ಗುಂಡಪ್ಪ ಮತ್ತು ಶಾರದಮ್ಮ ದತ್ತಿನಿಧಿ ಬಹುಮಾನ)



ಕುರಿಂಜಿ ಜೇನು (ತಮಿಳು ಕಾದಂಬರಿ)

ಅನು: ಡಾ. ಅಶೋಕ್ ಕುಮಾರ್

ಮೂಲ: ರಾಜಮ್ ಕೃಷ್ಣನ್

ಪ್ರಕಾಶಕರು: ನ್ಯಾಷನಲ್ ಬುಕ್ ಟ್ರಸ್ಟ್ ಇಂಡಿಯಾ
ನೆಹರು ಭವನ, 5, ಇನ್‌ಸ್ಟಿಟ್ಯೂಷನಲ್ ಏರಿಯಾ
ಫೇಸ್-2, ವಸಂತ್ ಕುಂಜ್
ಹೊಸದೆಹಲಿ-110070
ಪ್ರಥಮ ಮುದ್ರಣ : 2013
ಪುಟಗಳು : 374, ಬೆಲೆ ರೂ. 190/-

ನೀಲಗಿರಿ ಪ್ರದೇಶ ನಿವಾಸಿಗಳಾದ ಬಡಗ ಗಿರಿಜನರ ಇತಿಹಾಸ ಮತ್ತು ಸಂಸ್ಕೃತಿಯನ್ನು ಚಿತ್ರಿಸುವ ರಾಜಮ್ ಕೃಷ್ಣನ್ ಅವರ ತಮಿಳು ಕಾದಂಬರಿ **'ಕುರಿಂಜಿ ಜೇನು'**. ಇದನ್ನು ಅಶೋಕ್ ಕುಮಾರ್ ಕನ್ನಡಕ್ಕೆ ಅನುವಾದಿಸಿದ್ದಾರೆ. ಬಡಗರ ಜೀವನದ ಸಂಪ್ರದಾಯಗಳನ್ನು ವಿವರವಾಗಿ ಬರೆಯಲಾಗಿರುವ ಈ ಕಾದಂಬರಿಯಲ್ಲಿ ಹೊರಜಗತ್ತಿನ ಪರಿವರ್ತನೆಗಳಿಗೆ ತಕ್ಕ ಹಾಗೆ ಸಾಂಸ್ಕೃತಿಕ ಬದಲಾವಣೆಗಳಾಗುವ ಅನಿವಾರ್ಯತೆಯನ್ನು ಲೇಖಕ ಸುಂದರವಾಗಿ ಚಿತ್ರಿಸಿದ್ದಾರೆ. ಸ್ಫುಟವಾಗಿ ಮೂಡಿಬಂದಿರುವ ಅನುವಾದದಲ್ಲಿ ಆ ಜನಾಂಗದ ಸ್ಥಿತಿಗತಿಗಳು, ಗ್ರಾಮಜೀವನ, ಒಗ್ಗಟ್ಟು ಮುಂತಾದವು ವಿವರವಾಗಿ ಮೂಡಿಬಂದಿವೆ. ಆಡುನುಡಿ ಶಬ್ದಗಳ ಅರ್ಥವನ್ನೂ ವಿವರಿಸಲಾಗಿದೆ. ಹಾಗಾಗಿ ಕಾದಂಬರಿ ಸರಳ ಶೈಲಿಯಲ್ಲಿದ್ದು ಸುಲಭವಾಗಿ ಓದಿಸಿಕೊಂಡು ಹೋಗುತ್ತದೆ.

– ಪ್ರೊ. ಎಂ.ಎಸ್. ರಘುನಾಥ್

'ಕುರಿಂಜಿ ಜೇನು' ನೀಲಗಿರಿ ಪ್ರದೇಶದಲ್ಲಿ ವಾಸಿಸುವ ಬಡಗ ಗಿರಿಜನರ ಅರುವತ್ತು ವರುಷಗಳ ಇತಿಹಾಸ. ಅವರ ಸಾಂಸ್ಕೃತಿಕ ಪರಿವರ್ತನೆಗಳನ್ನು ಸವಾಲಾಗಿ ಮತ್ತು ಸ್ಪಷ್ಟವಾಗಿ ಚಿತ್ರಿಸಿದ ಮೊದಲ ಕಾದಂಬರಿ ಎನಿಸಿಕೊಂಡಿದೆ. ಗಿರಿಜನ ಬಡಗ

ಸಮುದಾಯದ ನಂಬುಗೆಗಳು, ಆಚರಣೆಗಳು, ದೈವಗಳು, ಮಂತ್ರವಾದಿ, ನಾರು, ಬೇರು, ಮದ್ದುಗಳು, ಕೃಷಿ ಆಧಾರಿತ ಕೂಡು ಕುಟುಂಬದ ಸಹಬಾಳ್ವೆ, ಸಾಮರಸ್ಯದ ಬದುಕು, ಅಭಿವೃದ್ಧಿಯ ಗಾಳಿ ಸೋಕಿದಾಗ ಸಹಜವಾಗಿಯೇ ಅವರ ಸಾಂಸ್ಕೃತಿಕ, ಸಾಮಾಜಿಕ ಬದುಕಿನಲ್ಲಾದ ಪರಿವರ್ತನೆಗಳು, ಈ ಎಲ್ಲವನ್ನು ಡಾ. ಅಶೋಕ್ ಕುಮಾರ್ ಅತ್ಯಂತ ಸಮರ್ಥವಾಗಿ ಸರಳವಾದ ಭಾಷೆಯಲ್ಲಿ ಕನ್ನಡೀಕರಿಸಿ ಕನ್ನಡ ಸಾಹಿತ್ಯ ಕ್ಷೇತ್ರವನ್ನು ಸಮೃದ್ಧಗೊಳಿಸಿದ್ದಾರೆ.

ಅರುವತ್ತು ವರ್ಷಗಳಿಂದ ಹಿಂದುಳಿದಿದ್ದ ಮಲೆಯ ಮಕ್ಕಳ ಸಮುದಾಯದ ಅಭಿವೃದ್ಧಿಯನ್ನು ಮನೋಜ್ಞವಾಗಿ ಕಟ್ಟಿಕೊಡುವ ಈ ಕಾದಂಬರಿಯ ಮೌಲ್ಯಗಳು ಪ್ರಸ್ತುತವೆನಿಸುತ್ತವೆ. ಹಾಗೂ ದೇಶ ಕಾಲವನ್ನು ಮೀರಿ ಜೀವ ಪರವಾಗಿ ನಿಲ್ಲುತ್ತವೆ.


– ರೇಣುಕಾ ನಿಡಗುಂದಿ

ತಮಿಳಿನ ರಾಜಮ್ ಕೃಷ್ಣನ್ ಅವರ ಕಾದಂಬರಿಯ ಕನ್ನಡ ಅನುವಾದ ಕುರಿಂಜಿ ಜೇನು. ನೀಲಗಿರಿ ಬೆಟ್ಟ ಪ್ರದೇಶದಲ್ಲಿ ವಾಸಿಸುವ ಬಡಗ ಗಿರಿಜನರ ಅರುವತ್ತು ವರ್ಷಗಳ ಇತಿಹಾಸ, ಅವರ ಸಾಂಸ್ಕೃತಿಕ ಪರಿವರ್ತನೆಗಳನ್ನು ದಾಖಲಿಸುವ ಒಂದು ಸೃಜನಶೀಲ ಕೃತಿ. ಬಡಗರ ಸಾಂಸ್ಕೃತಿಕ, ಸಾಮಾಜಿಕ ಬದುಕು ಅಭಿವೃದ್ಧಿಯ ಹಿನ್ನೆಲೆಯಲ್ಲಿ ಬದಲಾಗುತ್ತಾ ಬಂದುದರ ಫಲವಾಗಿ ಪರಂಪರೆ ಹಾಗೂ ಪ್ರಗತಿಗಳ ನಡುವೆ ನಡೆದ ಸಂಘರ್ಷದ ಕಲಾತ್ಮಕ ಚಿತ್ರಣ ಈ ಕಾದಂಬರಿಯಲ್ಲಿ ದೊರೆಯುತ್ತದೆ.

ಈ ಕಾದಂಬರಿಯ ಮೂಲ ಲೇಖಕರ ಸಾಮಾಜಿಕ ಕಾಳಜಿಯಿಂದ ಇದು ಒಂದು ಸೃಜನಾತ್ಮಕ ಕಲಾಕೃತಿಯಾಗಿ ಹೊಮ್ಮಿದೆ. ಸಾಂಸ್ಕೃತಿಕ ಮಾನವ ಶಾಸ್ತ್ರದ ಹೊಳಹುಗಳು ಕಾದಂಬರಿಯ ಉದ್ದಕ್ಕೂ ದಟ್ಟೈಸಿವೆ. ಕಾದಂಬರಿಕಾರರಿಗೆ ಬುಡಕಟ್ಟು ಸಮುದಾಯದ ಪಾರಂಪರಿಕ ಸಂಸ್ಕೃತಿಯೊಂದು ಸ್ಥಗಿತರೂಪದಲ್ಲಿ ಅವರೊಳಗೆ ಶಾಶ್ವತವಾಗಿ ನೆಲಸಬೇಕೆಂಬ ಪ್ರಗತಿವಿರೋಧಿ ಮನೋಧರ್ಮವಿಲ್ಲ. ಅದಕ್ಕೆ ಪ್ರತಿಭಟನೆ ತೋರಿ ಹೊಸ ಸಮಾಜವನ್ನು ಕಟ್ಟುವ ಆದರ್ಶ ಎದ್ದು ತೋರುತ್ತದೆ. ಇದು ಸ್ವಾಗತಾರ್ಹ ಬೆಳವಣಿಗೆ. ಬಡಗರ ಜೀವನ ವಿಧಾನ, ಸಾಂಸ್ಕೃತಿಕ ಶ್ರೀಮಂತಿಕೆಯನ್ನು ತಿಳಿಯಲು ಈ ಕಾದಂಬರಿ ಒಳ್ಳೆಯ ಆಕರ. ಕರ್ನಾಟಕ ಸಂಸ್ಕೃತಿಗೆ ಒಂದು ಬಗೆಯ ಪೂರಕ ಅಂಶವನ್ನು ಈ ಕಾದಂಬರಿ ಜೋಡಿಸುವಂತೆ ಕಾಣುತ್ತದೆ.

– ಡಾ. ಎ.ವಿ. ನಾವಡ

ಲೇಖಕರ ಮೊದಲ ಸ್ವತಂತ್ರ ಕೃತಿ (ಮಧುರಚೆನ್ನ ದತ್ತಿನಿಧಿ ಬಹುಮಾನ)



ಅಮೃತಕ್ಕೆ ಹಾರಿದ ಗರುಡ

ಪ್ರೊ. ರಮೇಶ ಮ. ಕಲ್ಲನಗೌಡರ

ಪ್ರಕಾಶಕರು: ಆದಿತ್ಯರಾಜೇಶ ಪ್ರಕಾಶನ
ಹುಲಕೋಟಿ–582205
ಗದಗ ತಾಲ್ಲೂಕು, ಜಿಲ್ಲೆ
ಪ್ರಥಮ ಮುದ್ರಣ : 2013
ಪುಟಗಳು : 130, ಬೆಲೆ ರೂ. 100/–

'ಅಮೃತಕ್ಕೆ ಹಾರಿದ ಗರುಡ' ಕೃತಿಯಲ್ಲಿ ಒಟ್ಟು ಹತ್ತು ಕಥೆಗಳಿವೆ. ಈ ಕಥೆಗಳ ಮೂಲವಸ್ತು ಬದುಕಿನೆಡೆಗೆ ತುಡಿಯುವ ಹಂಬಲ. ಬದುಕು ಒಡ್ಡುವ ಎಲ್ಲಾ ಸ್ಥಿತ್ಯಂತರಗಳನ್ನು ಎದುರಿಸಿ ನಿಲ್ಲುವ, ಒಳಿತು ಕೆಡುಕುಗಳ, ಪ್ರೇಮ ಕಾಮಗಳ, ಮನುಷ್ಯ ಸಹಜ ಸಂಬಂಧಗಳಲ್ಲಿ ಹಾದು ಬರುವ ನಂಬಿಕೆಗಳ, ಸೋಲು ಗೆಲುವುಗಳ ಹುಡುಕಾಟವನ್ನು ಈ ಎಲ್ಲಾ ಕಥೆಗಳಲ್ಲಿ ಕಾಣಬಹುದು. ಒಟ್ಟು ಕಥೆಗಳ ಸ್ಥಾಯೀಭಾವವೇ ಬದುಕಿನ ಬಗೆಗಿನ ತೀವ್ರತೆಯನ್ನು ಹಂಬಲವನ್ನು ಅನುಭವಿಸುವುದು.

ಮೊದಲ ಕಥಾ ಸಂಕಲನದಲ್ಲಿಯೇ ಭಿನ್ನ ಭಾಷಾ ಪ್ರಯೋಗವನ್ನು ಬಳಸುವಲ್ಲಿ, ಲಯವನ್ನು ಸಾಧಿಸುವಲ್ಲಿ ನಮ್ಮ ನಗರ–ಹಳ್ಳಿ, ಹೆಣ್ಣು–ಗಂಡು, ಪ್ರೇಮ–ಕಾಮನೆಗಳ ತಲ್ಲಣಗಳನ್ನು ಹೊರಹೊಮ್ಮಿಸುವಲ್ಲಿ, ಭಿನ್ನನೋಟಗಳನ್ನು ಪ್ರಯೋಗಿಸುವಲ್ಲಿ ಕಥೆಗಾರ ಹಿಡಿತ ಸಾಧಿಸಿರುವುದು ತಿಳಿಯುತ್ತದೆ. ಹತ್ತು ಕಥೆಗಳಲ್ಲಿಯೂ ಗ್ರಾಮೀಣ ಬದುಕನ್ನು ಕಟ್ಟಿಕೊಡುವುದರಲ್ಲಿ ಯಶಸ್ವಿಯಾದರೆ ,ನಗರಜೀವನ ಮತ್ತು ವ್ಯಕ್ತಿಯ ವಿಶಿಷ್ಟತೆಯನ್ನು ಕಟ್ಟಿಕೊಡುವುದರಲ್ಲಿ ಕಲ್ಪನೆಯಲ್ಲಿಯೇ ಮುಳುಗಿ ವಾಸ್ತವತೆ ಮರೆಸುವಂತೆ ದುರ್ಬಲವಾಗುತ್ತದೆ. ಹೆಣ್ಣಿನ ಪರವಾದ ಆಲೋಚನೆ, ನಿಲುವು, ಕಾಳಜಿ ಎಲ್ಲವೂ ಅವರ ಕಥೆಗಳಲ್ಲಿ ರೂಪಪಡೆದಿವೆ. ಮೊದಲ

ಸಂಕಲನದಲ್ಲಿಯೇ ಇವರ ಎಲ್ಲಾ ಕಥೆಗಳು ಸಹಜವಾದ ಬರವಣಿಗೆಯಿಂದ ಈ ಸಾಹಿತ್ಯ ಪ್ರಕಾರವನ್ನು ಬೆಳೆಸಬಲ್ಲರು ಎಂಬುದನ್ನು ನಿರೂಪಿಸುತ್ತವೆ.

– ಎ. ಭಾಗ್ಯಲಕ್ಷ್ಮಿ

ಲೇಖಕರ ಹತ್ತು ಕಥೆಗಳನ್ನೊಳಗೊಂಡ ಸಂಕಲನವಿದು. 'ಇರುವುದೆಲ್ಲವ ಬಿಟ್ಟು' ಗಂಡನ ಪಾದಗಳಿಗೆ ತನ್ನ ಪಶ್ಚಾತ್ತಾಪದ ಎರಡುಹನಿ ಕಣ್ಣೀರು ಹಾಕಿ ಓಡಿಹೋದ ಹೆಂಡತಿಯನ್ನು ಮರೆತು ಮಕ್ಕಳ ಜವಾಬ್ದಾರಿ ಹೊರುವ ತಂದೆ ಒಂದುಕಡೆ, ಮಕ್ಕಳೇ ಸರ್ವಸ್ವವೆಂದು ಬದುಕಿದ ದಂಪತಿಗಳು ವೃದ್ಧಾಪ್ಯದಲ್ಲಿ ಒಂದಾಗಿ ಆಶ್ರಮವಾಸಿಗಳಾಗುವುದೊಂದು ಕಡೆ ಈ ಎರಡು ಕಥೆಗಳನ್ನು ಕಥೆಯು ಚಮತ್ಕಾರವಾಗಿ ಮುಖಾಮುಖಿಯಾಗಿಸಿದೆ. **'ಅಮೃತಕ್ಕೆ ಹಾರಿದ ಗರುಡ'** ಮೋಹನ – ರೋಹಿಣಿಯರು ಪರಸ್ಪರ ಆಕರ್ಷಿತರಾಗುವ ಪ್ರೇಮ ವೈಫಲ್ಯದಿಂದ ಮೋಹನ ವೈರಾಗ್ಯದತ್ತ ಮುಖಮಾಡುವ ಕಥೆಯಿದೆ. ಆದರೆ ಕಡೆಯಲ್ಲಿ ಮೋಹನ ರೋಹಿಣಿಗೆ ಹೇಳುವ 'ನೀನು ಇಲ್ಲಿಗೆಸತ್ಯವನ್ನು ಕಾಣುವುದಕ್ಕೆಬಾ' ಎಂಬ ಸಂದೇಶಾತ್ಮಕವಾದ ಮಾತು ರೋಹಿಣಿ ಕಾಣಬೇಕಾದಸತ್ಯ ಯಾವುದೆಂಬುದನ್ನು ಖಚಿತಪಡಿಸುವುದಿಲ್ಲ. ತೂಗುಮಂಚದಮೇಲೆ ದೇಸಾಯರ ವಾಡೆಯ ಅನಿರುದ್ಧ ಮತ್ತು ಮಲ್ಲಿಕಾವಲ್ಲಿಯರ ದಾಂಪತ್ಯವು ಅನಿರುದ್ಧನ ಮಲತಾಯಿಯ ಕಾರಣವಾಗಿ ಪತನಗೊಂಡ ಕಥನವನ್ನು ಒಳಗೊಂಡಿದೆ. ತಿರುವು, ಬದುಕು, ಹುತ್ತ, ಕಥೆಗಳಲ್ಲಿನ ವಸ್ತುಗಳಲ್ಲಿ ಅಂತಹ ವಿಶೇಷತೆಗಳೇನೂ ಕಾಣಿಸುವುದಿಲ್ಲ. ಇಲ್ಲಿನ ವಸ್ತು ನಮ್ಮ ಸುತ್ತಣ ಪರಿಸರದ್ದಾದರೂ ನಿರೂಪಣಾ ಕ್ರಮ ಸಣ್ಣ ಕಥೆಗಳ ಹಿನ್ನೆಲೆಯಲ್ಲಿ ಪ್ರಾದೇಶಿಕ ಭಾಷಾ ಸೊಗಡಿನಿಂದ ರೂಪಗೊಂಡಿದೆ.

– ಡಾ. ಚಂದ್ರು ಕಾಳೇನಹಳ್ಳಿ


'ಅಮೃತಕ್ಕೆ ಹಾರಿದ ಗರುಡ' ಕಥೆಯು ಈ ಸಂಕಲನದ ಮುಖ್ಯ ಕಥೆಯಾಗಿದ್ದು; ಕಾಮವನ್ನು ಮೀರಿ ಬೆಳೆದ ಪ್ರೇಮಕಥೆಯನ್ನು ನಿರೂಪಿಸುತ್ತದೆ. ವಯಸ್ಸಿನ ಅಭಿರುಚಿಯ ಸೆಳೆತಗಳನ್ನು ಮೀರಿ ತಾತ್ವಿಕತೆ ಗೆಲ್ಲುವುದನ್ನು ಕಥೆಗಾರರು ಮನಮುಟ್ಟುವಂತೆ ಚಿತ್ರಿಸಿರುವುದು, ಓದುಗರನ್ನು ಸೆಳೆಯುತ್ತದೆ. ಸಿರಿವಂತ ಸ್ಥಿತಿಗತಿಗಳು ಮನುಷ್ಯನನ್ನು ಸೊಕ್ಕಿನಿಂದ ವರ್ತಿಸುವಂತೆ ಮಾಡುತ್ತವೆ. ಎನ್ನುವ ಹಳೆಯ ತತ್ವವನ್ನು

ಒಳಗೊಂಡ ಚಿತ್ರಣ ತೂಗುಮಂಚದ ಮೇಲೆ ಕಥೆಯಾಗಿದೆ. ಇಲ್ಲಿಯ ಸ್ತ್ರೀ ಪಾತ್ರವು ಸಿರಿತನ, ಸೌಂದರ್ಯದಿಂದ ತುಂಬಿ ತುಳುಕುತ್ತದೆ. ಅದೇ ರೀತಿ ಕಥಾನಾಯಕ ಅನಿರುದ್ಧನೂ ಕೂಡ ಸುಂದರ, ಗುಣಗ್ರಾಹಿ ಮತ್ತು ಗುಣವಂತ ಆದರೆ ಇಲ್ಲಿ ಒಂದು ಘಟನೆ ಇಡೀ ಕಥೆಯನ್ನೇ ಬದಲಿಸುವಲ್ಲಿ ಕಾರಣವಾಗುವ ಘಟನೆಯು ಯಾಂತ್ರಿಕವಾಗಿಬಿಡುತ್ತದೆ.

ಮಧ್ಯಮ ವರ್ಗ, ಮೇಲ್ಮಧ್ಯಮ ವರ್ಗವನ್ನು ಪ್ರತಿನಿಧಿಸುವ ಇಲ್ಲಿಯ ಕಥೆಗಳು ಮನುಷ್ಯನ ಸ್ವಭಾವಗಳನ್ನು ಮನಸ್ಸಿನ ಚಿತ್ರಣಗಳನ್ನು ವಿವರಿಸುತ್ತವೆ. ಆದರೆ ಪ್ರಸ್ತುತ ದಿನಗಳ ಯುವಸಮುದಾಯ, ನಾಗರಿಕ ಬದುಕಿನ ತಳಮಳಗಳು ಜಾಗತೀಕರಣಗಳ ಧಾವಂತದ ಬದುಕಿನ ಸುಳಿಗಳಿಗೆ ಸ್ಥಳವಿಲ್ಲದಿರುವುದು ಕೊರತೆಯೆನಿಸುತ್ತದೆ. ಕೆಲವೊಂದು ಕಥೆಗಳು ಸರಳ ನಿರೂಪಣೆ ಜೊತೆಗೆ ವರದಿಯಾಗಿ ಓದುಗರಿಂದ ದೂರ ಸರಿಯುತ್ತವೆ.

– ಡಾ. ಸಿ.ಬಿ. ಚಿಲ್ಕರಾಗಿ

ಕನ್ನಡದಿಂದ ಇಂಗ್ಲಿಷಿಗೆ ಅನುವಾದ
(ಅಮೆರಿಕನ್ನಡ ದತ್ತಿನಿಧಿ ಬಹುಮಾನ)



HUNT BANGLE CHAMELEON

ಅನು: ದೀಪಾ ಗಣೇಶ್

ಮೂಲ: ಯು.ಆರ್. ಅನಂತಮೂರ್ತಿ

**ಪ್ರಕಾಶಕರು: ಪ್ರಿಸಮ್ ಬುಕ್ಸ್ ಪ್ರೈ ಲಿ.
ನಂ–1865, 32ನೇ ಕ್ರಾಸ್,
10ನೇ ಮೇನ್, ಬನಶಂಕರಿ 2ನೇ ಹಂತ,
ಬೆಂಗಳೂರು–70
ಪ್ರಥಮ ಮುದ್ರಣ : 2013
ಪುಟಗಳು : 180, ಬೆಲೆ ರೂ. 225/–**

ನವ್ಯಪಂಥದ ಕಥೆ ಮತ್ತು ಕಾದಂಬರಿ ಪ್ರಕಾರಗಳಲ್ಲಿ ಡಾ. ಯು.ಆರ್. ಅನಂತಮೂರ್ತಿ ಅಗ್ರಗಣ್ಯರು. ಅವರ ಹತ್ತು ಕಥೆಗಳನ್ನು ದೀಪಾ ಗಣೇಶ ಅವರು Hunt Bangle Chameleon ಎಂದು ಇಂಗ್ಲಿಷಿಗೆ ಭಾಷಾಂತರಿಸಿದ್ದಾರೆ. ಈ ಸಂಕಲನದ ವಸ್ತು ವಿಷಯ ಮತ್ತು ನಿರೂಪಣೆ ಗಮನ ಸೆಳೆಯುವಂತಹದ್ದು. From here to where ಕಥೆ ಸೂಚ್ಯವಾಗಿ ನಕ್ಸಲ್‌ವಾದ ಒಂದು ಚಳುವಳಿಯಾಗಿ ವಿಫಲವಾಗಿರುವುದನ್ನು ಚಿತ್ರಿಸುತ್ತದೆ. The Moment ಎನ್ನುವ ಕಥೆ ಕಾರ್ಮಿಕ ವರ್ಗದ ತಾಕಲಾಟವನ್ನು ಪ್ರಕಟಗೊಳಿಸುತ್ತದೆ. ಈ ಸಂಕಲನದ ಭಾಷಾಂತರ ಮಿತಿಗಳನ್ನು ಹೇಳುವುದಾದರೆ 'ಪಚ್ಚೆ ರೆಸಾರ್ಟ' ಎನ್ನುವ ಕನ್ನಡದ ಕಥೆಯನ್ನು ದೀಪಾರವರು ಇಂಗ್ಲೀಷಿಗೆ The Green Resort ಎಂದು ತರ್ಜುಮೆ ಮಾಡುತ್ತಾರೆ. ಅನುವಾದಕರು ಇನ್ನಷ್ಟು ಶ್ರಮವಹಿಸಿ ಪರ್ಯಾಯ ಶಬ್ಧ ಕೊಡುವುದರೊಂದಿಗೆ ಅಡಿಟಿಪ್ಪಣಿ ಸರಿಯಾದ ಮಾಹಿತಿ ಒದಗಿಸಬೇಕಿತ್ತು ಎನ್ನುವ ಕೊರತೆ ಇಲ್ಲೆಲ್ಲ ಢಾಳಾಗಿ ಗೋಚರಿಸುತ್ತದೆ.

– ಡಾ. ಎಂ.ಎಚ್. ರುದ್ರಮುನಿ

ಕನ್ನಡದ ಶ್ರೇಷ್ಠ ಕಥೆಗಾರರಲ್ಲಿ ಪ್ರೊ. ಯು.ಆರ್. ಅನಂತಮೂರ್ತಿ ಅವರೂ ಒಬ್ಬರು. ಅವರ ಆಯ್ದ ಕಥೆಗಳನ್ನು ಇಲ್ಲಿ ದೀಪಾ ಗಣೇಶ ಅವರು ಸೊಗಸಾಗಿ ಇಂಗ್ಲೀಷಿಗೆ ಅನುವಾದಿಸಿದ್ದಾರೆ. ಈ ಅನುವಾದಿತ ಕೃತಿಯಲ್ಲಿ ಹತ್ತು ಕಥೆಗಳಿದ್ದು; ಇವು ಸಹಜವಾಗಿ ಓದಿಸಿಕೊಂಡು ಹೋಗುತ್ತವೆ. ಮೂಲ ಲೇಖಕರ ಆಶಯಕ್ಕೆ ಭಂಗಬಾರದಂತೆ ಅನುವಾದ ಮಾಡಿರುವುದು ಉಲ್ಲೇಖನೀಯ ಅಂಶ. ಕನ್ನಡದ ವಿಶಿಷ್ಟ ಸಾಂಸ್ಕೃತಿಕ ಪದಗಳನ್ನು, ಪರಿಕಲ್ಪನೆಗಳನ್ನು ಅನುವಾದಿಸಿದ ಪರಿ ಸೊಗಸಾಗಿದೆ. ಈ ಕೃತಿ ವಾಚನೀಯವಾಗಿದ್ದು, ಸಹಜವಾಗಿ ಮೂಡಿಬಂದಿದೆ. ಇದೊಂದು ಗಮನಾರ್ಹ ಪ್ರಯತ್ನ

– ಡಾ. ಜಿ.ಎನ್. ಉಪಾಧ್ಯ

ಒಳ್ಳೆಯ ಅನುವಾದದ ಜೊತೆಗೆ ಪುಸ್ತಕದ ಮುನ್ನುಡಿ ಅನಂತಮೂರ್ತಿಯವರ ಕೃತಿಗಳಿಗೆ ಒಳ್ಳೆಯ ಪ್ರವೇಶ ಒದಗಿಸುತ್ತದೆ. ಅನಂತಮೂರ್ತಿಯವರ ಅನೇಕ ಅನುವಾದಿತ ಪುಸ್ತಕಗಳ ಜೊತೆಗೆ ಸಮರ್ಥವಾದ ಮತ್ತೊಂದು ಸೇರ್ಪಡೆ.

– ಬಾಗೇಶ್ರೀ. ಎಸ್.

೨೦೧೩ ರ ವಿಮರ್ಶಕರು

ಕಾವ್ಯ

೧) **ಶ್ರೀ ಸಂತೋಷ ಚೊಕ್ಕಾಡಿ**
೩೪೭೪, 'ನಗಿ ನವಿಲು' ೭ನೇ ಮೈನ್
೨ನೇ ಕ್ರಾಸ್, ಐ- ಬ್ಲಾಕ್
ಕನಕದಾಸನಗರ,
ಮೈಸೂರು-೫೭೦೦೨೨
(೯೪೪೮೭ ೮೫೮೬೭)

೨) **ಡಾ. ಮೂಡ್ನಾಕೂಡು ಚಿನ್ನಸ್ವಾಮಿ**
ನಂ. ೫೫೮, 'ಕಾವ್ಯಬೋಧಿ'
೩ನೇ ಮೈನ್, ಬಿ.ಎಚ್.ಇ.ಎಲ್.
ಬಡಾವಣೆ ೨ನೇ ಹಂತ, ಕೆ.ಜಿ. ರಸ್ತೆ,
ರಾಜರಾಜೇಶ್ವರಿನಗರ
ಬೆಂಗಳೂರು-೫೬೦೦೯೮
(೯೯೦೨೨ ೯೯೭೩೩)

೩) **ಮಮತಾ ಜಿ. ಸಾಗರ**
೬೧೯, ೭ನೇ ಕ್ರಾಸ್,
೧ನೇ ಮೈನ್, ಬೆಮೆಲ್ ಲೇ ಔಟ್
೪ನೇ ಹಂತ, ರಾಜರಾಜೇಶ್ವರಿನಗರ
ಬೆಂಗಳೂರು-೫೬೦೦೯೮
(೯೪೪೧೦ ೮೨೧೧೨)

೨) **ಡಾ. ಕರೀಗೌಡ ಬೀಚನಹಳ್ಳಿ**
೧೦೪, 'ಪ್ರಕೃತಿ', ೩ನೇ ಮುಖ್ಯರಸ್ತೆ
೪ನೇ ಕ್ರಾಸ್, ಎಂ.ಪಿ.ಎಂ. ಬಡಾವಣೆ
ಮಲ್ಲತಹಳ್ಳಿ
ಬೆಂಗಳೂರು-೫೬೦೦೫೬
(೨೩೨೧-೩೧೬೫/೯೪೪೮೧೯೧೫೮೯)

೩) **ಡಾ. ಬಾಳಾಸಾಹೇಬ ಲೋಕಾಪುರ**
'ರತ್ನತ್ರಯ', ೧೫ನೇ ಕ್ರಾಸ್
ವಿದ್ಯಾಗಿರಿ,
ಬಾಗಲಕೋಟೆ
(೯೩೪೩೪ ೬೬೩೧೩)
Email:balaloka@rocketmail.com

ಕಾದಂಬರಿ

೧) **ಡಾ. ಎಸ್. ತುಕಾರಾಮ್**
ಸಿ-ಎಚ್- ೭೩,
೭ನೇ ಮುಖ್ಯರಸ್ತೆ,
ಸರಸ್ವತೀಪುರಂ
ಮೈಸೂರು- ೫೭೦೦೦೯
(೯೭೩೧೩ ೬೭೨೬೨)

ಸಣ್ಣಕಥೆ

೧) **ಶ್ರೀ ಕೇಶವ ಮಳಗಿ**
೧೫, 'ಕಥನ', ೭ನೇ 'ಬಿ' ಅಡ್ಡರಸ್ತೆ
ಗಾರ್ಡನ್ ವಿಲ್ಲಾಸ್,
ನಾಗರಬಾವಿ
ಬೆಂಗಳೂರು-೫೬೦೦೭೨
(೯೪೪೮೩ ೩೪೬೨೨/ ೨೨೭೧೦೨೯೮)

೨) **ಡಾ. ಹಾಲತಿ ಸೋಮಶೇಖರ್**
'ಮೌನ' ನಂ. ೩೬೬, ನವಿಲುರಸ್ತೆ
ಎ-ಬಿ ಬ್ಲಾಕ್, ಕುವೆಂಪುನಗರ
ಮೈಸೂರು-೫೭೦೦೨೩
(೯೪೪೯೯೭೨೧೧೭/
೯೮೮೬೬೯೭೮೪೧)

೩) **ಡಾ. ಮೋಹನ ಚಂದ್ರಗುತ್ತಿ**
ಸಹಾಯಕ ಪ್ರಾಧ್ಯಾಪಕರು,
ಸಹ್ಯಾದ್ರಿ ಕಲಾ ಕಾಲೇಜು
ಶಿವಮೊಗ್ಗ
(೯೪೮೦೫೪೪೦೯೯)

ನಾಟಕ

೧) **ಡಾ. ಎಂ.ಜಿ. ಈಶ್ವರಪ್ಪ**
ಬಿ-೧೩, 'ಮುಗುಳು ಮಲ್ಲಿಗೆ'
ಬಾಪೂಜಿ ವಿದ್ಯಾನಗರ,
ದಾವಣಗೆರೆ -೫೭೭೦೦೫
(೦೮೧೯೨-೨೬೦೭೦೩/
೯೮೮೦೯೭೬೭೪)

೨) **ಡಾ. ಬಿ.ವಿ. ರಾಜಾರಾಂ**
೨೬೩, ಕಲಾಗಂಗೋತ್ರಿ,
೧೨-ಎ ಮೇನ್,
೬ನೇ ಬ್ಲಾಕ್,
ರಾಜಾಜಿನಗರ,
ಬೆಂಗಳೂರು-೫೬೦೦೧೦
(೯೪೪೮೦- ೬೯೬೬೭)

೩) **ನಟರಾಜ್ ಹೊನ್ನವಳ್ಳಿ**
ಡೀನ್, ಸಂಸ್ಕೃತಿ ಕಾಲೇಜ್ ಆಫ್
ವಿಜುಯಲ್ ಅಂಡ್ ಪರ್‌ಫಾರ್ಮಿಂಗ್
ಆರ್ಟ್ಸ್, ೩ನೇ ಮಹಡಿ
ವೆಂಕಟಗಿರಿ ಫ್ಲಾಜಾ,
ಗೋಕುಲ ರಸ್ತೆ
ಹುಬ್ಬಳ್ಳಿ- ೫೮೦೦೩೦
(೯೪೮೧೩೪೫೪೫೦)

ಲಲಿತ ಪ್ರಬಂಧ

೧) **ಶ್ರೀಮತಿ ಸಿ.ಜಿ. ಮಂಜುಳಾ**
ನಂ.೪, 'ವೈಶಾಖ' ೨ನೇ ಕ್ರಾಸ್,
ಮಾರ್ಕಂರೋಡ್,
ಅಶೋಕನಗರ,
ಬೆಂಗಳೂರು-೫೬೦೦೨೫
(೯೪೪೮೨ ೪೨೭೨೮)

೨) **ಡಾ. ಎಸ್. ಶಾಂತನಾಯ್ಕ**
(ಶಿರಗಾನಹಳ್ಳಿ ಶಾಂತನಾಯ್ಕ)
ಮುಖ್ಯಸ್ಥರು, ಆಂಗ್ಲ ವಿಭಾಗ
ವಿಜಯನಗರ ಶ್ರೀ ಕೃಷ್ಣದೇವರಾಯ
ವಿಶ್ವವಿದ್ಯಾಲಯ, ವಿನಾಯಕನಗರ
ಬಳ್ಳಾರಿ- ೫೮೩೧೦೪
(೯೪೪೯೦ ೨೧೦೦೬)

೩) **ಡಾ. ಬಾಳಣ್ಣ ಶೀಗೀಹಳ್ಳಿ**
'ಉತ್ಕರ್ಷ',
ಶ್ರೀನಗರ ೧ನೇ ತಿರುವು
ಹಳಿಯಾಳ ರಸ್ತೆ,
ಧಾರವಾಡ-೫೮೦೦೦೩
(೨೭೭೪೯೨೩) (೯೪೮೧೭೨೯೬೯೬)

ಪ್ರವಾಸ ಸಾಹಿತ್ಯ

೧) **ಶ್ರೀ ಧನಂಜಯ ಜೀವಾಳ ಬಿ.ಕೆ.**
ಮ್ಯಾನೇಜರ್, ಕೆನರಾ ಬ್ಯಾಂಕ್
ಅರೆಹಳ್ಳಿ ಅಂಚೆ, ಬೇಲೂರು ತಾಲ್ಲೂಕು
ಹಾಸನ ಜಿಲ್ಲೆ - ೫೭೩೧೦೧
(೯೪೪೮೪ ೨೧೯೪೬)

೨) ಶ್ರೀ ವಾಸುದೇವ ಬೆಳ್ಳೆ
ಕೇರಾಫ್/ ಮೇರಿ ಹಿಲ್ ಸ್ಟೋರ್
ಕೊಂಚಾಡಿ ಪೋಸ್ಟ್
ಮಂಗಳೂರು- ೫೭೫೦೦೮
(೯೮೪೫೭೧೩೮೬೬)

೩) **Dr. Gurulingappa Dhabale**
`Shivashankara' Kokkalaginagar
Bygehalli Road, Akkalkote
Dist: Solapur- 413216
Maharashtra State
(02181-222011) 09421028147

ಜೀವನಚರಿತ್ರೆ/ಆತ್ಮಕಥೆ

೧) **ಡಾ. ವಿಜಯಲಕ್ಷ್ಮಿ ಭೋಸಲೆ**
'ಸೌಗಂಧಿಕಾ', ಹಳ್ಳಿಕೇರಿ ಚಾಳ
ಹಳಿಯಾಳ ರೋಡ್, ಕೆ.ಸಿ. ಪಾರ್ಕ್
ಪೋಸ್ಟ್ ಆಫೀಸ್ ಎದುರು,
ಧಾರವಾಡ-೫೮೦೦೦೮
(೯೪೪೯೯ ೧೪೯೨೭)

೨) **ಡಾ. ಲತಾ .ಕೆ. ಎ.**
ನಂ. ೨೨೯, ೧ನೆ ಎ ಮುಖ್ಯರಸ್ತೆ
ಬಾಪೂಜಿ ಬಡಾವಣೆ, ಬೋಗಾದಿ
ಮೈಸೂರು-೫೭೦೦೨೬
(೮೧೯೭೪ ೫೩೧೬೪/
೯೪೪೮೧೮೧೪೩೬೧)

೩) **ಸಂವರ್ತ**
'ಸತ್ಯಶ್ರೀ', ಎಂ.ಐ.ಜಿ- ೪ನೇ ಕ್ರಾಸ್
೬ನೇ ಮುಖ್ಯರಸ್ತೆ, ಕೆ.ಎಚ್.ಬಿ. ಕಾಲನಿ
ಹುಡ್ಕೊ, ಮಣಿಪಾಲ- ೫೭೬೧೦೪
(೭೩೫೮೩ ೭೮೫೧೧)

ಸಾಹಿತ್ಯ ವಿಮರ್ಶೆ

೧) **Dr. PURUSHOTHAMA BILIMALE**
6098/8, Santushti Apartments
Sector-D, Pocket-6 ,
Vasanth Kunj
New Delhi-110070
(011-26134345 / 26738976)
(09811733378)

೨) **ಡಾ. ಪೃಥ್ವಿದತ್ತ ಚಂದ್ರ ಶೋಭಿ**
ನಂ.೪೪, ೮ನೇ ಮೈನ್ ರೋಡ್
೧೨ನೇ ಕ್ರಾಸ್, ಸರಸ್ವತಿಪುರಂ
ಮೈಸೂರು- ೫೭೦೦೦೯
(೯೬೮೬೯ ೪೪೪೪೬
೦೮೨೧- ೨೫೪೪೦೧೭)

೩) **ಡಾ. ಎಚ್. ಪಟ್ಟಾಭಿರಾಮ ಸೋಮಯಾಜಿ**
ಇಂಗ್ಲಿಷ್ ವಿಭಾಗ, ವಿಶ್ವವಿದ್ಯಾನಿಲಯ
ಕಾಲೇಜು, ಹಂಪನಕಟ್ಟೆ
ಮಂಗಳೂರು -೫೭೫ ೦೦೧
(ದ.ಕ)
(೯೪೪೮೩೨೫೭೦೫)

ಮಕ್ಕಳ ಸಾಹಿತ್ಯ

೧) **ಡಾ. ಆನಂದ ಪಾಟೀಲ**
'ನಿನಾದ' , ೬೮/ಬಿ
೧ನೇ ಮುಖ್ಯರಸ್ತೆ
ರಾಣಿ ಚೆನ್ನಮ್ಮನಗರ
ಧಾರವಾಡ- ೫೮೦ ೦೦೧
೯೪೪೮೮ ೯೭೫೨೬

೨) ಶ್ರೀ ಟಿ.ಎಸ್. ನಾಗರಾಜಶೆಟ್ಟಿ
'ಸಂತೋಷಸಾಗರ', ಮನೆ ನಂ. ೯೫೭,
೫ನೇ ಅಡ್ಡರಸ್ತೆ, ನಿರ್ಮಲ ಪ್ರಕಾಶನ,
ಗೋವಿನಪುರ, ತಿಪಟೂರು,
ತುಮಕೂರು-೫೭೨೨೦೨
(೯೪೪೮೯೭೯೫೩೭)

೩) ಚಂದ್ರಕಾಂತ ಕರದಳ್ಳಿ
'ಶಿವಪ್ರಸಾದ ನಿಲಯ',
ಲಕ್ಷ್ಮೀನಗರ, ಶಹಾಪುರ-೫೮೫೨೨೩
ಯಾದಗೀರ ಜಿಲ್ಲೆ
೯೪೪೮೫ ೯೫೨೧೨

ವಿಜ್ಞಾನ ಸಾಹಿತ್ಯ

೧) ಡಾ. ಕೆ. ಪುಟ್ಟಸ್ವಾಮಿ
ಸಾರ್ವಜನಿಕ ಸಂಪರ್ಕಾಧಿಕಾರಿ
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಬಿ.ಡಿ.ಎ. ಕುಮಾರ ಪಾರ್ಕ್(ಪಶ್ಚಿಮ)
ಬೆಂಗಳೂರು-೫೬೦೦೨೦
(೯೮೪೫೬೩೦೧೦೯)

೨) ಸಿ. ಯತಿರಾಜು
ಧರಣಿ ಮಂಡಲ, ಕಾಳಿದಾಸ ಪದವಿ
ಪೂರ್ವ ಕಾಲೇಜು ಸಮೀಪ
ಸಿರಾಗೇಟ್, ತುಮಕೂರು-೫೭೨೧೦೬
(ದೂ: ೯೪೮೧೩೦೦೬೦೭)
dharanimandala.56@gmail.com

೩) ಶ್ರೀ ಎಚ್.ಆರ್. ರಾಮಕೃಷ್ಣರಾವ್
ನಂ. ೮೦೧, ಸುಸ್ಮಿಹರ್ಷ, ೧೫ನೇ ಕ್ರಾಸ್
೭ನೇ ಬ್ಲಾಕ್, ಜಯನಗರ
ಬೆಂಗಳೂರು- ೫೬೦೦೭೦
(೯೪೮೧೦- ೩೫೮೩೧)

ಮಾನವಿಕ

೧) ಡಾ. ರಾಬರ್ಟ್ ಜೋಸ್
ಕ್ರಿಸ್ತವಿಲ್ಲಾ, ಕಾಡುಬೆಟ್ಟು,
ಉಡುಪಿ - ೫೭೬ ೧೦೧
(೯೪೪೮೨ ೯೫೧೫೦
Email: robertjose_66@yahoo.com

೨) **Dr. Lingappa Gonal**
Associate Professor & Head
of the Dept. of Kannada,
Osmania University
Hyderabad-500007 (A.P)
(094407 84003)

೩) ಶ್ರೀ ಸ್ವಾಮಿ ಆನಂದ್. ಆರ್
೩೮೦, 'ಹಸಿರು', ೨ನೇ ಮೈನ್
ಎಸ್.ಬಿ.ಎಂ. ಎದುರು, ೯ನೇ ಕ್ರಾಸ್
೩ನೇ ಹಂತ, ಗೋಕುಲಂ
ಮೈಸೂರು-೫೭೦೦೦೨
೯೪೪೮೪೪ ೭೨೭೪೮

ಸಂಶೋಧನೆ

೧) ಡಾ. ವೀರಣ್ಣ ದಂಡೆ
'ತೇಜಸ್ವಿನಿ' ಸರಸ್ವತಿಪುರ,
ವಿಶ್ವವಿದ್ಯಾಲಯ ಅಂಚೆ,
ಗುಲ್ಬರ್ಗಾ-೫೮೫೧೦೬
೯೪೪೮೭೭೮೯೯೧)

೨) ಡಾ. ಬಿ.ಎಂ. ಪುಟ್ಟಯ್ಯ
ಪ್ರಾಧ್ಯಾಪಕರು, ಕನ್ನಡ ವಿಶ್ವವಿದ್ಯಾಲಯ,
ಹಂಪಿ,
ವಿದ್ಯಾರಣ್ಯ ಅಂಚೆ-೫೮೩೨೭೬
ತಾ: ಹೊಸಪೇಟೆ, ಜಿ: ಬಳ್ಳಾರಿ
(೯೪೪೮೯೮೦೧೦೫)

೩) ಡಾ. ಮಹೇಶ ಚಿಂತಾಮಣಿ
ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು,
ಕನ್ನಡ ವಿಭಾಗ, ಕರ್ನಾಟಕ ರಾಜ್ಯ
ಮಹಿಳಾ ವಿಶ್ವವಿದ್ಯಾಲಯ,
ಜ್ಞಾನಶಕ್ತಿ ಆವರಣ,
ತೊರವಿ, ಅಥಣಿ ರಸ್ತೆ
ವಿಜಯಪುರ -೫೮೬೧೦೧
(೮೨೭೭೪ ४೧೬೪೦)

ಅನುವಾದ–೧ (ಸೃಜನಶೀಲ)

೧) ಪ್ರೊ. ಎಂ.ಎಸ್. ರಘುನಾಥ್
ಎಚ್.ಐ.ಜಿ–೪೦, ೬ನೇ ಮುಖ್ಯರಸ್ತೆ
ಕೆ.ಎಚ್.ಬಿ. ಕಾಲೋನಿ, ೨ನೇ ಮಹಡಿ
ಬಸವೇಶ್ವರನಗರ
ಬೆಂಗಳೂರು–೫೬೦೦೭೯
(೨೩೩೦೮೯೧೦/ ೯೪೪೮೪ ೬೮೯೩೯)

೨) Renuka Nidagundi
B-18, Pocket-7
Kendriya Vihar - II
Sector- No. 82,
Opp: 110 Market, Noida,
Uttara Pradesh- 201304
(09717461669)

೩) ಪ್ರೊ. ಎ.ವಿ. ನಾವಡ
ನಂ.೭, 'ಜನನಿ' ೧ನೇ 'ಎ' ಮುಖ್ಯರಸ್ತೆ
೨ನೇ ಅಡ್ಡರಸ್ತೆ, ಶಿವನಗರ–ರಾಜಾಜಿನಗರ
ಬೆಂಗಳೂರು–೫೬೦೦೧೦
(೯೪೪೯೮–೩೯೮೮)

ಅನುವಾದ–೨ (ಸೃಜನೇತರ)

೧) ಶ್ರೀ ಸನತ್ ಕುಮಾರ ಬೆಳಗಲಿ
ಎಲ್.ಎಫ್– ೧೭/೬, ಬಿ.ಡಿ.ಎ. ಫ್ಲಾಟ್
ಬಿ.ಟಿ.ಎಂ.ಲೇ ಔಟ್,
ಬೆಂಗಳೂರು–೫೬೦೦೭೬
(೯೮೪೪೦ ೭೭೮೮೦)

೨) ಡಾ. ರಾಮಕೃಷ್ಣ ಮರಾಠೆ
ನಂ. ೨೦, 'ಶ್ರೀಕಲ್ಪ'
ಶಾಂತಿನಿಕೇತನ ಟೀಚರ್ಸ್ ಕಾಲನಿ
ಹಿಂಡಲಗಾ, ಗಣಪತಿ ಗುಡಿ ಹತ್ತಿರ
ದಾಜೀಬಾ ದೇಸಾಯಿ ರಸ್ತೆ
ಬೆಳಗಾವಿ– ೫೯೧ ೧೦೮
(೯೪೪೮೮–೬೩೮೧೮/
೦೮೩೧– ೨೪೪೮೦೫೨)

೩) ಡಾ. ಮುಜಾಫರ್ ಅಸ್ಸಾದಿ
೯೦೮, ೩ನೇ ಮೈನ್,
ನ್ಯೂ ಕಾಂತರಾಜ ಅರಸ್ ರಸ್ತೆ
ಮೈಸೂರು–೫೭೦೦೦೯
೯೪೪೮೧–೮೬೮೯೬
೦೮೨೧– ೨೫೪೫೩೩೬

ಸಂಕೀರ್ಣ

೧) ಶ್ರೀ ದೇವು ಪತ್ತಾರ
ಹಿರಿಯ ವರದಿಗಾರರು,
ವಿಜಯ ಕರ್ನಾಟಕ ದಿನಪತ್ರಿಕೆ
ನಂ.೮, ಸಿದ್ಧೇಶ್ವರ ನಿಲಯ,
ರವೀಂದ್ರನಾಥ ಟಾಗೋರ್ ನಗರ,
ರಾಮಮಂದಿರ ರಿಂಗ್ ರೋಡ್,
ಕಲಬುರಗಿ– ೫೮೫೧೦೬
(೯೫೯೧೦ ೮೯೯೯೭)

೨) ಮನೋಹರ ಯಡವಟ್ಟಿ
ಮಂದಾರ, ೩೫೪/೧೭, ೪ನೇ ಅಡ್ಡರಸ್ತೆ
ಕಾವೇರಿ ಬಡಾವಣೆ,ಮರಿಯಣ್ಣ ಪಾಳ್ಯ,
ಎಚ್.ಎ. ಫಾರಂ ಪೋಸ್ಟ್,
ಬೆಂಗಳೂರು- ೫೬೦೦೨೪
(೯೩೪೨೫೩೫೧೪೭)

೩) ಶ್ರೀ ರಂಜಾನ್ ದರ್ಗಾ
ಸಿದ್ಧಾರೂಢ ಕಾಲೋನಿ
ಮಡಿಹಾಳ,
ಧಾರವಾಡ-೫೮೦೦೦೬
೯೨೪೨೪ ೭೦೩೮೪

ಲೇಖಕರ ಮೊದಲ ಸ್ವತಂತ್ರ ಕೃತಿ

೧) ಶ್ರೀಮತಿ ಎ. ಭಾಗ್ಯಲಕ್ಷ್ಮಿ
ಜಂಟಿ ನಿರ್ದೇಶಕರು
ಕಂದಾಯ ಭವನ, ನಗರ ಜಿಲ್ಲಾ ಖಜಾನೆ
ಕಾರ್ಯಾಲಯ, ೫ನೇ ಮಹಡಿ
ಕೆ.ಜಿ. ರಸ್ತೆ, ಬೆಂಗಳೂರು- ೫೬೦೦೦೯
(೯೯೮೦೮೪೭೧೬೭/
೦೮೦-೨೨೨೭೫೭೨೫)

೨) ಡಾ. ಚಂದ್ರು ಕಾಳೇನಹಳ್ಳಿ
ವಿಶ್ರಾಂತ ಪ್ರಾಧ್ಯಾಪಕರು
ಗಾಯತ್ರಿ ಬಡಾವಣೆ
ರಾಘವೇಂದ್ರ ಸಾ ಮಿಲ್ ರಸ್ತೆ
ಚನ್ನರಾಯಪಟ್ಟಣ- ೫೭೩೧೧೬
ಹಾಸನ ಜಿಲ್ಲೆ
(೯೪೪೮೮ ೬೮೫೪೮)

೩) ಡಾ. ಸಿ.ಬಿ. ಚಿಲ್ಕರಾಗಿ
ಸಹ ಪ್ರಾಧ್ಯಾಪಕರು,
ಸರ್ಕಾರಿ ಪದವಿ ಮಹಾವಿದ್ಯಾಲಯ,
ಲಿಂಗಸುಗೂರು,
ರಾಯಚೂರು ಜಿಲ್ಲೆ
(೭೮೯೯೪೦೪೧೦೧)

ಕನ್ನಡದಿಂದ ಇಂಗ್ಲಿಷಿಗೆ ಅನುವಾದ

೧) ಡಾ. ಎಂ. ಹೆಚ್. ರುದ್ರಮುನಿ
ಇಂಗ್ಲಿಷ್ ಪ್ರಾಧ್ಯಾಪಕರು
ಮಾನಸ ಗಂಗೋತ್ರಿ,
ಮೈಸೂರು-೫೭೦೦೦೬
೯೦೦೮೦ ೩೬೮೯೧

೨) **Dr. G.N. Upadhya**
Head, Dept. of Kannada
University of Mumbai
Ranade Bhavan `A' wing
1st Floor, Vidyanagari,
Santacruz(East)
Mumbai- 400098
(022-26543530/26543345)

೩) ಶ್ರೀಮತಿ ಬಾಗೇಶ್ರೀ. ಎಸ್.
ನಂ. ೧೯, ೩ನೇ ಕ್ರಾಸ್ , ೩ನೇ
ಮುಖ್ಯರಸ್ತೆ, ಸಿ.ಕೆ.ಎ. ಲೇ ಔಟ್,
ಬನಶಂಕರಿ ೩ನೇಹಂತ
ಬೆಂಗಳೂರು-೫೬೦೦೮೫
(೯೮೮೬೭ ೫೦೦೧೨)

2013ನೆಯ ವರ್ಷದ ಪುಸ್ತಕ ಬಹುಮಾನಿತ ಕೃತಿಗಳು

ಪ್ರಕಾರ		ಕೃತಿಯ ಹೆಸರು	ಲೇಖಕರು
ಕಾವ್ಯ	:	ಎಲ್ಲರ ಬೆರಳಲ್ಲೂ ಅಂಟಿಕೊಂಡ ದುಃಖವೇ..	– ಸುಬ್ಬು ಹೊಲೆಯಾರ್
ಕಾದಂಬರಿ	:	ಆತ್ಮವೃತ್ತಾಂತ	– ರಜನಿ ನರಹಳ್ಳಿ
ಸಣ್ಣಕತೆ	:	ಸಲ್ಮಾನ್ ಖಾನನ ಡಿಫಿಕಲ್ಟೀಸು	– ಎಂ.ಎಸ್.ಶ್ರೀರಾಮ್
ನಾಟಕ	:	ಅನಭಿಜ್ಞ ಶಾಕುಂತಲ	– ಡಾ.ಕೆ.ವೈ.ನಾರಾಯಣಸ್ವಾಮಿ
ಲಲಿತ ಪ್ರಬಂಧ	:	ಮಹಾಮಾತೆ ಮಲ್ಲಕ್ಕ ಮತ್ತು ಇತರ ಪ್ರಬಂಧಗಳು	– ಎಂ.ಡಿ. ಗೋಗೇರಿ
ಪ್ರವಾಸ ಸಾಹಿತ್ಯ	:	ಅಂಡಮಾನ್ ಕಂಡ ಹಾಗೆ....	– ಡಾ. ಎಚ್.ಎಸ್. ಅನುಪಮಾ
ಆತ್ಮಕಥೆ	:	ಅಲೆಮಾರಿಯ ಅಂತರಂಗ	– ಕುಪ್ಪೆ ನಾಗರಾಜ
ಸಾಹಿತ್ಯ ವಿಮರ್ಶೆ	:	ಕವಿತೆಯ ಓದು	– ಪ್ರಭಾಕರ ಆಚಾರ್ಯ
ಮಕ್ಕಳ ಸಾಹಿತ್ಯ	:	ಹಾರದಿರಲಿ ಪ್ರಾಣಪಕ್ಷಿ	– ಹ.ಸ. ಬ್ಯಾಕೋಡ
ವಿಜ್ಞಾನ ಸಾಹಿತ್ಯ	:	ಕಾಡು ಕಲಿಸುವ ಪಾಠ	– ಟಿ.ಎಸ್.ಗೋಪಾಲ್
ಮಾನವಿಕ	:	ಎಂದೂ ಮುಗಿಯದ ಯುದ್ಧ	– ಎನ್. ಜಗದೀಶ್ ಕೊಪ್ಪ
ಸಂಶೋಧನೆ	:	ಮೈಯೇ ಸೂರು ಮನವೇ ಮಾತು	– ಡಾ.ಬಸವರಾಜ ಕಲ್ಗುಡಿ
ಅನುವಾದ-1(ಸೃಜನಶೀಲ)	:	ಬೇಗುದಿ (ಮೂಲ: ಇಂಗ್ಲಿಷ್ ಕಾದಂಬರಿ 'ಕಕೋಲ್ಡ್'-ಕಿರಣ್ ನಗರ್‌ಕರ್)	– ಅನು: ಆರ್. ಲಕ್ಷ್ಮೀನಾರಾಯಣ
ಅನುವಾದ-2(ಸೃಜನೇತರ)	:	ತೆಲಂಗಾಣ ಹೋರಾಟ (ಮೂಲ: ತೆಲುಗು – ಪಿ. ಸುಂದರಯ್ಯ)	– ಅನು: ಬಿ. ಸುಜ್ಞಾನಮೂರ್ತಿ
ಸಂಕೀರ್ಣ	:	ಬೆಟ್ಟ ಮಹಮದನ ಬಳಿಗೆ ಬಾರದಿದ್ದರೆ	– ಲಕ್ಷ್ಮೀಶ ತೋಳ್ಪಾಡಿ
ಲೇಖಕರ ಮೊದಲ ಕೃತಿ	:	ಬದುಕ ದಿಕ್ಕು ಬದಲಿಸಿದ ಆಸ್ಟಿಯೋ ಸರ್ಕೋಮಾ... (ಆತ್ಮಕಥೆ)	–ಶ್ರುತಿ ಬಿ.ಎಸ್.

ದತ್ತಿನಿಧಿ ಬಹುಮಾನಿತ ಕೃತಿಗಳು

ಪ್ರಕಾರ	ಕೃತಿಯ ಹೆಸರು	ಲೇಖಕರು
ಕಾದಂಬರಿ (ಚದುರಂಗ ದತ್ತಿನಿಧಿ ಬಹುಮಾನ)	ಅನಾವರಣ	– ಡಾ. ಸಿ.ಆರ್. ಪಾರ್ಥಸಾರಥಿ
ಜೀವನ ಚರಿತ್ರೆ (ಸಿಂಪಿ ಲಿಂಗಣ್ಣ ದತ್ತಿನಿಧಿ ಬಹುಮಾನ)	ನೆಲದೊಡಲ ಚಿಗುರು- ನಾಡೋಜ ಡಾ. ಎಲ್. ನಾರಾಯಣರೆಡ್ಡಿ ಅವರ ಬದುಕು, ಚಿಂತನೆ-	– ಎನ್.ಎಲ್. ಆನಂದ್/ ಗುಂಡಪ್ಪ ದೇವಿಕೇರಿ
ಸಾಹಿತ್ಯ ವಿಮರ್ಶೆ (ಪಿ. ಶ್ರೀನಿವಾಸರಾವ್ ದತ್ತಿನಿಧಿ ಬಹುಮಾನ)	ಸಾಹಿತ್ಯ ಸಿಂಚನ	– ಡಾ. ಬಸವರಾಜ ಸಬರದ
ಅನುವಾದ-1 (ಸೃಜನಶೀಲ) (ಎಲ್. ಗುಂಡಪ್ಪ ಮತ್ತು ಶಾರದಮ್ಮ ದತ್ತಿನಿಧಿ ಬಹುಮಾನ)	ಕುರಿಂಜಿ ಜೇನು (ಮೂಲ : ತಮಿಳು ಕಾದಂಬರಿ– ಲೇ: ರಾಜಮ್ ಕೃಷ್ಣನ್)	– ಡಾ. ಅಶೋಕ್ ಕುಮಾರ್
ಲೇಖಕರ ಮೊದಲ ಸ್ವತಂತ್ರ ಕೃತಿ (ಮಧುರಚೆನ್ನ ದತ್ತಿನಿಧಿ ಬಹುಮಾನ)	ಅಮೃತಕ್ಕೆ ಹಾರಿದ ಗರುಡ	– ಪ್ರೊ. ರಮೇಶ ಮ. ಕಲ್ಲನಗೌಡರ
ಕನ್ನಡದಿಂದ ಇಂಗ್ಲಿಷಿಗೆ ಅನುವಾದ (ಅಮೆರಿಕನ್ನಡ ದತ್ತಿನಿಧಿ ಬಹುಮಾನ)	HUNT BANGLE CHAMELEON (ಮೂಲ: ಅನಂತಮೂರ್ತಿ ಆಯ್ದ ಕಥೆಗಳು)	– ಅನು: ದೀಪಾ ಗಣೇಶ್

ಕರ್ನಾಟಕ ಸಾಹಿತ್ಯ ಅಕಾಡೆಮಿ

ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು -560 002

ದೂರವಾಣಿ : 080-22211730 / 22106460